ಸೋಮವಾರ, ನವೆಂಬರ್ 17, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 317 | ಪುಟ 12
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಹುಬ್ಬಳ್ಳಿಯಲ್ಲಿ ಸ್ಮರಣ್ ಶತಕ
ಹುಬ್ಬಳ್ಳಿಯಲ್ಲಿ ಭಾನುವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ಚಂಡೀಗಢ ಎದುರು ಶತಕ ದಾಖಲಿಸಿದ ಕರ್ನಾಟಕದ ಆರ್. ಸ್ಮರಣ್



ಯುದ್ಧನೌಕೆ ಸೇರ್ಪಡೆ
ದೇಶಿ ನಿರ್ಮಿತ ಜಲಾಂತರ್ಗಾಮಿ ನಿಗ್ರಹ ಯುದ್ಧನೌಕೆ 'ಮಾಹೆ'ಯು ನವೆಂಬರ್ 24ರಂದು ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಲಿದೆ

'ಕೆನೆಪದರ ನೀತಿ ಅನ್ವಯ ಅಗತ್ಯ' 9
ಮತ್ತೊಂದು ಚಂದ್ರಯಾನ.. ಹಲವು ಉಡ್ಡಯನ... 8

ಎ.ಸಿ ಕೋರ್ಟ್ ಪ್ರಕರಣ ವಾಪಸ್

ಭೂ ತಕರಾರು ಪ್ರಕರಣ– ಗಂಭೀರವಾಗಿ ಪರಿಗಣಿಸಿದ ಸಚಿವ ಕೃಷ್ಣ ಬೈರೇಗೌಡ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಕೆಲವು ಉಪ ವಿಭಾಗಾಧಿಕಾರಿಗಳು ಅರೆ ನ್ಯಾಯಿಕ ನ್ಯಾಯಾಲಯಗಳಲ್ಲಿ (ಎ.ಸಿ ಕೋರ್ಟ್) ದಾಖಲಾಗಿರುವ ಭೂ ಸಂಬಂಧಿ ತಕರಾರು ಪ್ರಕರಣಗಳನ್ನು ತಮ್ಮ ಹಂತದಲ್ಲಿಯೇ ಇತ್ಯರ್ಥಗೊಳಿಸದೆ, ಮರು ವಿಚಾರಣೆ ನಡೆಸಲು ತಹಶೀಲ್ದಾರ್‌ಗಳಿಗೆ ಹಿಂದಿರುಗಿಸುತ್ತಿದ್ದಾರೆ.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಅಂತಹ ಪ್ರಕರಣಗಳನ್ನು ಸಕಾರಣಗಳೊಂದಿಗೆ ಹಿಂದಿರುಗಿಸಲಾಗಿದೆಯೇ ಎಂಬ ಬಗ್ಗೆ ವಿವರವಾದ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಅಷ್ಟೇ ಅಲ್ಲದೆ, ವಿಚಾರಣೆ ಪೂರ್ಣಗೊಳಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ 15 ದಿನಗಳು ಕಳೆದರೂ ಆದೇಶ ಹೊರಡಿಸದಿರುವುದೂ ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಪ್ರಗತಿ ಪರಿಶೀಲನೆ ವೇಳೆ ಪತ್ತೆಯಾಗಿದೆ. ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿಯವರ ನ್ಯಾಯಾಲಯವೊಂದರಲ್ಲಿಯೇ ವಿಚಾರಣೆ ಪೂರ್ಣಗೊಂಡಿರುವ 286 ಪ್ರಕರಣಗಳಿಗೆ 15 ದಿನಗಳು ಕಳೆದರೂ ಆದೇಶ ಹೊರಡಿಸಿಲ್ಲ. ಈ ಬಗ್ಗೆ ವರದಿ ನೀಡುವಂತೆ ಇಲಾಖೆಯ ಆಯುಕ್ತರಿಗೆ ಸೂಚಿಸಿದ್ದಾರೆ.

ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿನ ಈ ಬೆಳವಣಿಗೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಸಚಿವರು, ಪ್ರಕರಣಗಳ ವಿಲೇವಾರಿಯ ಗುಣಮಟ್ಟದ ಬಗ್ಗೆಯೇ ಆತಂಕಕಾರಿ ವಿಷಯಗಳು ಗಮನಕ್ಕೆ ಬಂದಿವೆ ಎಂದಿದ್ದಾರೆ. ಈ ಕಾರಣಕ್ಕೆ ಅವರು, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿರುವ ಹೆಚ್ಚಿನ ಪ್ರಕರಣಗಳನ್ನು ಮರು ವಿಚಾರಣೆ ನಡೆಸಲು ತಹಶೀಲ್ದಾರ್‌ಗಳಿಗೆ ಹಿಂದಿರುಗಿಸುತ್ತಿರುವುದು ಮತ್ತು ವಿಚಾರಣೆ ಪೂರ್ಣಗೊಂಡಿರುವ ಪ್ರಕರಣಗಳಲ್ಲಿ ಆದೇಶ ಹೊರಡಿಸದಿರುವುದರ ಹಿಂದಿನ ಕಾರಣ ಅರಿಯಲು ಮುಂದಾಗಿದ್ದಾರೆ. ▶4

ಎಲ್ಲಿ ಎಷ್ಟು ಪ್ರಕರಣ

ಉಪವಿಭಾಗ	ತಹಶೀಲ್ದಾರ್‌ಗಳಿಗೆ ವಾಪಸ್
ದೊಡ್ಡಬಳ್ಳಾಪುರ	456
ಚಿಕ್ಕಬಳ್ಳಾಪುರ	401
ರಾಮನಗರ	331
ಮಧುಗಿರಿ	262
ಕೋಲಾರ	204
ತುಮಕೂರು	172
ಕುಂದಾಪುರ	162
ತಿಪಟೂರು	158
ಶಿವಮೊಗ್ಗ	144



266 ಹೊಸ ಪ್ರಕರಣ ದಾಖಲು



ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆಗಸ್ಟ್ 13ರಿಂದ ಅ.30 ರವರೆಗಿನ ಪ್ರಗತಿ ಪರಿಶೀಲನೆಯನ್ನು ನಡೆಸಿದಾಗ, ಅಲ್ಲಿ ಅತೀ ಹೆಚ್ಚು 266 ಹೊಸ ಪ್ರಕರಣಗಳು ದಾಖಲಾಗಿರುವುದು ಗೊತ್ತಾಗಿದೆ. ಈ ಎಲ್ಲ ಪ್ರಕರಣಗಳು ಅರ್ಹ ಪ್ರಕರಣಗಳೇ ಎಂದು ಪರಿಶೀಲಿಸಬೇಕು. ಅಲ್ಲದೆ, ಇಲ್ಲಿನ ಉಪ ವಿಭಾಗಾಧಿಕಾರಿ ಅತೀ ಹೆಚ್ಚು 456 ಪ್ರಕರಣಗಳನ್ನು ಮರು ವಿಚಾರಣೆಗಾಗಿ ತಹಶೀಲ್ದಾರ್‌ಗಳಿಗೆ ಹಿಂದಿರುಗಿಸಿದ್ದು, ಈ ಬಗ್ಗೆ ಹಾಗೂ ವಿಚಾರಣೆ ಪೂರ್ಣಗೊಂಡ 286 ಪ್ರಕರಣಗಳಲ್ಲಿ 15 ದಿನ ಕಳೆದರೂ ಆದೇಶ ಹೊರಡಿಸದಿರುವ ಬಗ್ಗೆ ಪರಿಶೀಲಿಸಬೇಕು. ಜೊತೆಗೆ, ಈ ಉಪ ವಿಭಾಗದ ತಕರಾರು ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಆಯುಕ್ತರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಸಲ್ಲಿಸಿರುವ ವರದಿಯನ್ನೂ ಪರಿಗಣಿಸಿ, ಸಮಗ್ರ ವರದಿ ನೀಡಬೇಕೆಂದು ಇಲಾಖೆಯ ಆಯುಕ್ತರಿಗೆ ಕೃಷ್ಣ ಬೈರೇಗೌಡ ಅವರು ನಿರ್ದೇಶನ ನೀಡಿದ್ದಾರೆ.

ಅಧಿಕಾರಕ್ಕೆ ಸಂಚಕಾರ

ಬೆಂಗಳೂರು ಉತ್ತರ ಉಪ ವಿಭಾಗಾಧಿಕಾರಿಯ ನ್ಯಾಯಾಲಯದಲ್ಲಿ ದಾಖಲಾಗಿದ್ದ ಅರೆನ್ಯಾಯಿಕ ಪ್ರಕರಣಗಳ ವಿಲೇವಾರಿಯಲ್ಲಿ ಪ್ರಗತಿ ಆಗದ ಕಾರಣ ಅಲ್ಲಿನ ಉಪ ವಿಭಾಗಾಧಿಕಾರಿ ಕಿರಣ್ ಅವರ ಅಧಿಕಾರಕ್ಕೇ ಸಂಚಕಾರ ಬಂದಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136 (2) ಅಡಿ ವಿಚಾರಣೆ ನಡೆಸಿ, ಇತ್ಯರ್ಥ ಪಡಿಸಲು ದಾಖಲಾಗಿರುವ ಪ್ರಕರಣಗಳ ಪೈಕಿ ಆರ್‌ಆರ್‌ಟಿ ಪ್ರಕರಣಗಳು ಮತ್ತು ಪಿಟಿಸಿಎಲ್ ಪ್ರಕರಣಗಳು ಹಾಗೂ ಇತರ ಭೂ ಸಂಬಂಧಿತ ಪ್ರಕರಣಗಳನ್ನು ತಕ್ಷಣದಿಂದ ಮುಂದಿನ ಆದೇಶದವರೆಗೆ ಕಿರಣ್ ಅವರಿಂದ ಹಿಂಪಡೆದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಇದೇ 12ರಂದು ಆದೇಶ ಹೊರಡಿಸಿದ್ದಾರೆ.

'ಅಧಿಕಾರ ದುರುಪಯೋಗಕ್ಕೆ ಕಡಿವಾಣ'

ಕೆಲವು ಉಪ ವಿಭಾಗಾಧಿಕಾರಿಗಳು ಅಧಿಕಾರ ದುರುಪಯೋಗ ಮಾಡುತ್ತಿದ್ದಾರೆ. ಸಿವಿಲ್ ಕೋರ್ಟ್ ವಿಚಾರಣೆ ನಡೆಸಬೇಕಾದ ಪ್ರಕರಣಗಳನ್ನೂ ಅರೆ ನ್ಯಾಯಿಕ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ತಮ್ಮ ಅಧಿಕಾರ ಮೀರಿ ಆದೇಶಗಳನ್ನೂ ಕೊಡುತ್ತಿದ್ದಾರೆ. ಕೆಲವು ಪ್ರಕರಣಗಳಲ್ಲಿ ದೂರುದಾರ–ಪ್ರತಿವಾದಿಗಳಿಗೆ ನೋಟಿಸ್ ನೀಡದೆ, ಆನ್‌ಲೈನ್‌ನಲ್ಲಿ ಪ್ರಕರಣಗಳ ಪ್ರಕ್ರಿಯೆ ನಡೆಸದೆ, ಇಷ್ಟಬಂದಂತೆ ವರ್ತಿಸುತ್ತಿದ್ದಾರೆ. ಸಕಾರಣಗಳಿಲ್ಲದೆ ತಹಶೀಲ್ದಾರ್‌ಗಳಿಗೆ ಪ್ರಕರಣಗಳನ್ನು ಹಿಂದಿರುಗಿಸುತ್ತಿದ್ದಾರೆ. ಈ ದುರ್ವತನೆ ಸಹಿಸಲು ಸಾಧ್ಯವಿಲ್ಲ. ಈ ತಪ್ಪುಗಳಿಗೆ ಕಡಿವಾಣ ಹಾಕಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂಬ ಕಾರಣಕ್ಕೆ ವಿವರವಾದ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ

ಕೃಷ್ಣ ಬೈರೇಗೌಡ, ಕಂದಾಯ ಸಚಿವ



ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ಭಾನುವಾರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗಣವೇಷಧಾರಿಗಳು ಆಕರ್ಷಕ ಪಥಸಂಚಲನ ನಡೆಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪಥಸಂಚಲನಕ್ಕೆ ಸರ್ಪಗಾವಲು

ರಾಜ್ಯದ ಗಮನ ಸೆಳೆದಿದ್ದ ಚಿತ್ತಾಪುರ ಪಥಸಂಚಲನ ಪ್ರಕರಣ

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ರಾಜ್ಯದ ಗಮನ ಸೆಳೆದಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಗಣವೇಷಧಾರಿಗಳ ಪಥಸಂಚಲನವು ಪೊಲೀಸ್ ಸರ್ಪಗಾವಲಿನ ನಡುವೆ ಪಟ್ಟಣದಲ್ಲಿ ಭಾನುವಾರ ಶಾಂತಿಯುತವಾಗಿ ನಡೆಯಿತು.

ಆರ್‌ಎಸ್‌ಎಸ್ ಶತಾಬ್ದಿ ಹಾಗೂ ವಿಜಯದಶಮಿ ಅಂಗವಾಗಿ ನಡೆದ 'ಪಥಸಂಚಲನ' ಸಾಗುವ 1.3 ಕಿ.ಮೀ ಮಾರ್ಗವು 'ಕೇಸರಿ'ಮಯವಾಗಿತ್ತು. ಭಗವಾ ಧ್ವಜಗಳು, ಬಂಟಿಂಗ್ಸ್‌ಗಳು, ಬ್ಯಾನರ್‌ಗಳು ರಾರಾಜಿಸಿದವು. ಅಲ್ಲಲ್ಲಿ ರಂಗೋಲಿಯನ್ನೂ ಬಿಡಿಸಲಾಗಿತ್ತು.

ಮಧ್ಯಾಹ್ನ 3 ಗಂಟೆ ಹೊತ್ತಿಗೆ ಗಣವೇಷಧಾರಿಗಳು ಪಟ್ಟಣದ ಬಜಾಜ್ ಕಲ್ಯಾಣ ಮಂಟಪದ ಆವರಣದಲ್ಲಿ ಸೇರಿದರು. ಗೇಟ್‌ನಲ್ಲಿದ್ದ ಪೊಲೀಸರು ನಿಗದಿತ ಪಟ್ಟಿಯಲ್ಲಿ ಹೆಸರಿದ್ದವರನ್ನು ಮಾತ್ರವೇ ಪರಿಶೀಲಿಸಿ ಒಳಗೆ ಬಿಟ್ಟರು.

ಬಿಸಿಲು ತಣಿದು ಸೂರ್ಯ ಪಡುವಣದತ್ತ ಓಟಕ್ಕೆ ಅನುವಾಗಿದ್ದ ಸಮಯದಲ್ಲಿ ಪಥಸಂಚಲನ ಆರಂಭವಾಯಿತು. ಸ್ಥಳದಲ್ಲಿದ್ದ ಜನರಿಂದ 'ಭಾರತ ಮಾತಾ ಕೀ ಜೈ', 'ವಂದೇ ಮಾತರಂ', 'ಜೈ ಶ್ರೀರಾಮ್', 'ಜೈ ಭವಾನಿ, ಜೈ ಶಿವಾಜಿ' ಘೋಷಣೆಗಳು ಮೊಳಗಿದವು. ▶4

ಸಂಘರ್ಷ ಈಗ ಪ್ರಾರಂಭ: ಪ್ರಿಯಾಂಕ್



ಕಲಬುರಗಿ: 'ಆರ್‌ಎಸ್‌ಎಸ್‌ನೊಂದಿಗೆ ಸಂಘರ್ಷ ಈಗ ಪ್ರಾರಂಭವಾಗಿದೆ. ಅವರು ಆದಾಯ ತೆರಿಗೆಯಿಂದ ಹೇಗೆ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಕೆಲವೇ ದಿನಗಳಲ್ಲಿ ದಾಖಲೆ ಸಮೇತ ತೋರಿಸುತ್ತೇನೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಭಾನುವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್ ನೋಂದಣಿ ಮಾಡುವ ಅಗತ್ಯವಿಲ್ಲ ಎಂದು ಆರ್‌ಎಸ್‌ಎಸ್ ಸರ ಸಂಘಚಾಲಕ ಮೋಹನ್ ಭಾಗವತ್ ಹೇಳಿದ್ದಾರೆ. ಅವರು ಹೇಳುವುದು ಸಂವಿಧಾನವೇ? ಅಥವಾ ಸಂವಿಧಾನದಲ್ಲಿರುವುದು ಸಂವಿಧಾನವೇ? ಸಂಘದ ನೋಂದಣಿ ಮಾಡಿದರೆ ಆದಾಯ ತೆರಿಗೆ ವ್ಯಾಪ್ತಿಯಲ್ಲಿ ಬರುತ್ತಾರೆ. ಅವರು ಹೇಳುವ ಗುರುದಕ್ಷಿಣೆ ಕೂಡ ಆಡಿಟ್ ಆಗಬೇಕಾಗುತ್ತದೆ. ದೇವಸ್ಥಾನದಲ್ಲಿ ಭಕ್ತರು ದೇವರ ಹೆಸರಿನಲ್ಲಿ ನೀಡುವ ದೇಣಿಗೆ ಕೂಡ ಆಡಿಟ್, ಮೌಲ್ಯಮಾಪನ ಆಗುತ್ತದೆ. ಆದರೆ, ಆರ್‌ಎಸ್‌ಎಸ್ ಆದಾಯ ಮೌಲ್ಯಮಾಪನ ಬೇಡವೇ?' ಎಂದರು.

ಕೆಕೆಆರ್‌ಡಿಬಿ ದುಡ್ಡು ಆರ್‌ಎಸ್‌ಎಸ್‌ನವರು ಹೇಗೆ ಲೂಟಿ ಹೊಡೆದಿದ್ದಾರೆ ಎಂಬುದನ್ನು ಸಾಕ್ಷ್ಯ ಸಮೇತ 15–20 ದಿನಗಳಲ್ಲಿ ಕೊಡುತ್ತೇನೆ. ಆಗ ಅವರು ಎಷ್ಟು ದರೋಡೆಕೋರರು ಎಂದು ಗೊತ್ತಾಗಲಿದೆ

ಪ್ರಿಯಾಂಕ್ ಖರ್ಗೆ, ಸಚಿವ

ಮುಂಗಡ ಹಣ ಪಡೆಯದೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಯಿ, ಹಾವು ಮತ್ತು ಇತರೆ ಪ್ರಾಣಿಗಳ ದಾಳಿ ಪ್ರಕರಣದಲ್ಲಿ ಮುಂಗಡ ಹಣಕ್ಕೆ ಒತ್ತಾಯಿಸದೆ ತಕ್ಷಣವೇ ಅಗತ್ಯ ಚಿಕಿತ್ಸೆ ಒದಗಿಸಬೇಕು' ಎಂದು ಆರೋಗ್ಯ ಇಲಾಖೆಯು ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಆರೋಗ್ಯ ಇಲಾಖೆಯು ಈ ಕುರಿತು ಸುತ್ತೋಲೆ ಹೊರಡಿಸಿದೆ.

2030ರ ವೇಳೆಗೆ ನಾಯಿ ಕಡಿತದಿಂದ ಬರುವ 'ರೇಬಿಸ್' ರೋಗವನ್ನು ನಿರ್ಮೂಲನೆ ಮಾಡುವ ಗುರಿ ಹೊಂದಲಾಗಿದೆ. ಈಗಾಗಲೇ ರೇಬಿಸ್ ಅನ್ನು ರಾಜ್ಯದಲ್ಲಿ 'ಘೋಷಿತ ಕಾಯಿಲೆ'ಯ ವ್ಯಾಪ್ತಿಗೆ ತರಲಾಗಿದೆ. ಎಲ್ಲ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು ಕಡ್ಡಾಯವಾಗಿ ರೇಬಿಸ್ ನಿರೋಧಕ ಲಸಿಕೆ ಮತ್ತು 'ರೇಬಿಸ್ ಇಮ್ಯುನೊಗ್ಲೋಬ್ಯುಲಿನ್' (ಆರ್‌ಐಜಿ) ಚುಚ್ಚುಮದ್ದಿನ ದಾಸ್ತಾನು ಹೊಂದಿರಬೇಕು. ನಾಯಿ ಕಡಿತಕ್ಕೆ ಒಳಗಾದವರಿಗೆ ಸಕಾಲಿಕ ಚಿಕಿತ್ಸೆಯೊಂದಿಗೆ 'ರೇಬಿಸ್ ಇಮ್ಯುನೊಗ್ಲೋಬ್ಯುಲಿನ್' ಚುಚ್ಚುಮದ್ದನ್ನು ಒದಗಿಸಬೇಕು ಎಂದು ತಿಳಿಸಿದೆ.

ನಾಯಿ ಅಥವಾ ಇತರ ಯಾವುದೇ ಪ್ರಾಣಿಯ ಕಡಿತದ ಪ್ರಕರಣಗಳು ವರದಿಯಾದಾಗ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು. ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳು ತುರ್ತು ವೈದ್ಯಕೀಯ ಸೇವೆಗಳು ಮತ್ತು ಪ್ರಥಮ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಬೇಕು. ಒಂದುವೇಳೆ, ಆಸ್ಪತ್ರೆಯಲ್ಲಿ ಸೌಲಭ್ಯಗಳ ಕೊರತೆ ಇದ್ದಲ್ಲಿ ರೋಗಿಗೆ ಪ್ರಾಣಾಪಾಯವಾಗದಂತೆ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚುವರಿ ಚಿಕಿತ್ಸಾ ಸೌಲಭ್ಯವಿರುವ ಆಸ್ಪತ್ರೆಗೆ ರವಾನಿಸಬೇಕು ಎಂದು ಸೂಚಿಸಲಾಗಿದೆ.

ಶುಲ್ಕ ಮರುಪಾವತಿ: ನಾಯಿ ಮತ್ತು ಹಾವು ಕಡಿತಕ್ಕೊಳಗಾದ ಸಂತ್ರಸ್ತರಿಗೆ ನೀಡಿದ ಚಿಕಿತ್ಸೆಗಾಗಿ ಆಸ್ಪತ್ರೆ ಶುಲ್ಕವನ್ನು ಸರ್ಕಾರ ಮರುಪಾವತಿ ಮಾಡುತ್ತದೆ. ಆಸ್ಪತ್ರೆಗಳು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ನಿಗದಿಪಡಿಸಿರುವ ಮೊತ್ತ ಪಡೆದು, ಚಿಕಿತ್ಸೆ ನೀಡಲು ನಿರಾಕರಿಸಿದರೆ ಅಂತಹ ಆಸ್ಪತ್ರೆಗಳ ವಿರುದ್ಧ ದೂರು ದಾಖಲಿಸಲಾಗುವುದು ಎಂದೂ ಎಚ್ಚರಿಕೆ ನೀಡಲಾಗಿದೆ.

ನಾಯಿ, ಹಾವು ಹಾಗೂ ಇತರೆ ಪ್ರಾಣಿಗಳ ಕಡಿತ ಪ್ರಕರಣಗಳಲ್ಲಿ ವೈದ್ಯಕೀಯ ನಿರ್ಲಕ್ಷ್ಯದಿಂದ ಸಾವುಗಳು ಸಂಭವಿಸಿದರೆ, ಸಂಬಂಧಿಸಿದ ವೈದ್ಯಾಧಿಕಾರಿ ಮತ್ತು ಸಂಸ್ಥೆಯ ಮುಖ್ಯಸ್ಥರಿಗೆ ಎರಡು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಆಸ್ಪತ್ರೆಗಳ ಪರವಾನಗಿಯನ್ನು ರದ್ದುಗೊಳಿಸಲಾಗುತ್ತದೆ ಎಂದು ತಿಳಿಸಲಾಗಿದೆ.

ನಾಯಿ ಕಡಿತ

ಪ್ರಕರಣಗಳ ಸಂಖ್ಯೆ 4.19 ಲಕ್ಷಕ್ಕೆ ಏರಿಕೆ



ರಾಜ್ಯದಲ್ಲಿ ಈ ವರ್ಷ ನಾಯಿ ಕಡಿತ ಪ್ರಕರಣಗಳು ಹೆಚ್ಚುತ್ತಿದ್ದು, ನವೆಂಬರ್ ಎರಡನೇ ವಾರದ ಅಂತ್ಯಕ್ಕೆ ಪ್ರಕರಣಗಳ ಸಂಖ್ಯೆ 4.19 ಲಕ್ಷಕ್ಕೆ ಏರಿಕೆಯಾಗಿದೆ. ಕಡಿತಕ್ಕೆ ಒಳಗಾದವರಲ್ಲಿ 35 ಮಂದಿ ಮೃತಪಟ್ಟಿದ್ದಾರೆ. ಕಳೆದ ವರ್ಷ 3.61 ಲಕ್ಷ ಪ್ರಕರಣಗಳು ವರದಿಯಾಗಿದ್ದವು. ನಾಯಿ ಕಡಿತದಿಂದಾದ ಗಾಯಗಳಿಂದ ಬಳಲಿದವರಲ್ಲಿ, 42 ಮಂದಿ ರೇಬಿಸ್‌ನಿಂದ ಸಾವಿಗೀಡಾಗಿದ್ದರು.

- ಖಾಸಗಿ ಆಸ್ಪತ್ರೆಗಳ ಪರವಾನಗಿ ರದ್ದು
- ಚಿಕಿತ್ಸೆಗೆ ನಿರಾಕರಿಸಿದರೆ ದೂರು ದಾಖಲು

ದೆಹಲಿ ಸ್ಫೋಟ ಸಂಚುಕೋರ ಸೆರೆ

ನವದೆಹಲಿ: ದೆಹಲಿಯ ಕೆಂಪು ಕೋಟೆ ಬಳಿ ಸಂಭವಿಸಿದ ಕಾರು ಸ್ಫೋಟಕ್ಕೆ ಸಂಬಂಧಿಸಿ ಪ್ರಮುಖ ಸಂಚುಕೋರನನ್ನು ಎನ್‌ಐಎ ಅಧಿಕಾರಿಗಳು ಶ್ರೀನಗರದಲ್ಲಿ ಭಾನುವಾರ ಬಂಧಿಸಿದ್ದಾರೆ. ಇದರೊಂದಿಗೆ, ಈ ಘಟನೆ ಕುರಿತ ತನಿಖೆಯು ಮಹತ್ವದ ಘಟ್ಟ ತಲುಪಿದಂತಾಗಿದೆ.

ವಿವರ ▶9

ಚಿನಕುರುಳಿ ಪ್ರಕಾಶ್ ಶೆಟ್ಟಿ



19 ಅಥವಾ 20ಕ್ಕೆ ನಿತೀಶ್ ಪ್ರಮಾಣ

ಪ್ರಜಾವಾಣಿ ವಾರ್ತೆ



ಪಟ್ನಾ: ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಪಾಳಯದ ಅಭೂತಪೂರ್ವ ಜಯದಿಂದ ಬೀಗುತ್ತಿರುವ ನಿತೀಶ್ ಕುಮಾರ್ ಕೆಲವೇ ದಿನಗಳಲ್ಲಿ ಬಿಹಾರದ ಮುಂದಿನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಅವರ ಲಭ್ಯತೆಗೆ ಅನುಗುಣವಾಗಿ ನವೆಂಬರ್ 19 ಅಥವಾ 20ರಂದು ನಿತೀಶ್ ಕುಮಾರ್ ಪ್ರಮಾಣ ಸ್ವೀಕರಿಸುವರು ಎಂದು ಎನ್‌ಡಿಎದ ಉನ್ನತ ಮೂಲಗಳು ಹೇಳಿವೆ.

ಮೋದಿ ಅವರಲ್ಲದೇ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರು ಹಾಗೂ ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಕೂಡ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಮೂಲಗಳು ತಿಳಿಸಿವೆ. ▶9

ಡಿಜಿಟಲ್ ಅರೆಸ್ಟ್: ಸಾಫ್ಟ್‌ವೇರ್ ಉದ್ಯೋಗಿಗೆ ₹31.83 ಕೋಟಿ ವಂಚನೆ

• ಪ್ರಜ್ವಲ್ ಡಿಸೋಜಾ

ಬೆಂಗಳೂರು: ನಗರದ 57 ವರ್ಷದ ಮಹಿಳೆಯನ್ನು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿದ ಸೈಬರ್ ವಂಚಕರು ₹31.83 ಕೋಟಿ ಸುಲಿಗೆ ಮಾಡಿರುವ ಘಟನೆ ನಡೆದಿದೆ. ಈವರೆಗೆ ರಾಜ್ಯದಲ್ಲಿ ವರದಿಯಾದ ಅತ್ಯಧಿಕ ಮೊತ್ತ ಕಳೆದುಕೊಂಡ 'ಡಿಜಿಟಲ್ ಅರೆಸ್ಟ್' ಪ್ರಕರಣ ಇದಾಗಿದೆ.

ಇಂದಿರಾನಗರ ನಿವಾಸಿಯಾಗಿರುವ ಸಂತ್ರಸ್ತೆ ನೀಡಿದ ದೂರು ಆಧರಿಸಿ ಪೂರ್ವ ಸೈಬರ್ ಕ್ರೈಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಐ.ಟಿ ಕ್ಷೇತ್ರದ ಹಿರಿಯ ಉದ್ಯೋಗಿಯಾಗಿರುವ ಸಂತ್ರಸ್ತೆಗೆ 2024ರ ಸೆಪ್ಟೆಂಬರ್ 15ರಂದು ಕರೆ ಮಾಡಿದ ವ್ಯಕ್ತಿ, ತಾನು ಡಿಎಚ್‌ಎಲ್ ಕೊರಿಯರ್ ಸರ್ವಿಸ್‌ನಿಂದ ಕರೆ ಮಾಡುತ್ತಿದ್ದೇನೆ ಎಂದು ಹೇಳಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ▶8

ತಂಡದಲ್ಲಿ ಎನ್‌ಸಿಸಿ ಕೆಡೆಟ್‌ಗಳು, ಕಾನ್‌ಸ್ಟೆಬಲ್‌ಗಳು: ರಾಜ್ಯ ವ್ಯಾಪಿ ವಿಸ್ತರಣೆ

ಮಹಿಳೆ, ಮಕ್ಕಳ ರಕ್ಷಣೆಗೆ 'ಅಕ್ಕ ಪಡೆ'

• ಕೆ.ಎಸ್.ಸುನಿಲ್

ಬೆಂಗಳೂರು: ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣ ರಕ್ಷಣೆ ನೀಡುವ ಹಾಗೂ ಸಕಾಲಿಕವಾಗಿ ಸಹಾಯ ಹಸ್ತ ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ 'ಅಕ್ಕ ಪಡೆ' ಆರಂಭಿಸಿದ್ದು, ಇದು ನವೆಂಬರ್ 19ರಿಂದ ಕಾರ್ಯಾರಂಭ ಮಾಡಲಿದೆ.

ಎರಡು ವರ್ಷಗಳ ಹಿಂದೆ ಬೀದರ್‌ನಲ್ಲಿ ಪ್ರಾಯೋಗಿಕವಾಗಿ ಅಕ್ಕ ಪಡೆ ಆರಂಭಿಸಲಾಗಿತ್ತು. ಅಲ್ಲಿ ಯಶಸ್ವಿಯಾಗಿದ್ದರಿಂದ ಅಕ್ಕಪಡೆಯನ್ನು ರಾಜ್ಯವ್ಯಾಪಿ ವಿಸ್ತರಿಸಲಾಗುತ್ತಿದೆ. ಮೊದಲ ಹಂತದಲ್ಲಿ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳು, ಉಡುಪಿ, ಮೈಸೂರು, ಮಂಗಳೂರು, ಬೆಳಗಾವಿ, ಬೆಂಗಳೂರು ಸೇರಿದಂತೆ ಆಯ್ದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಲಿದೆ. ನಂತರ ಇತರೆ ಜಿಲ್ಲೆಗಳಿಗೂ ವಿಸ್ತರಣೆಯಾಗಲಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ-ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಈ ಪಡೆ ಕಾರ್ಯನಿರ್ವಹಿಸಲಿದೆ. ಸಹಾನುಭೂತಿ ಮತ್ತು ಸಮುದಾಯ ಸೇವೆಯಲ್ಲಿ ಸ್ಪಂದಿಸುವ ಸುರಕ್ಷತಾ ಘಟಕವಾಗಿ ಮತ್ತು ಶೈಕ್ಷಣಿಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ▶8

ಮಹಿಳಾ ಕೆಡೆಟ್–ಪೊಲೀಸರ ತಂಡ

ಎನ್‌ಸಿಸಿ 'ಸಿ' ಪ್ರಮಾಣ ಪತ್ರ ಹೊಂದಿರುವ 35–45 ವರ್ಷದೊಳಗಿನ ಮಹಿಳಾ ಕೆಡೆಟ್‌ಗಳು, ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್‌ಗಳು ಸೇರಿ ಪ್ರತಿ ತಂಡದಲ್ಲಿ 6ರಿಂದ 10 ಮಂದಿ ಇರುತ್ತಾರೆ.

ಪಾಳಿ ಪ್ರಕಾರ (ಬೆಳಿಗ್ಗೆ 7ರಿಂದ 2, ಮಧ್ಯಾಹ್ನ 2ರಿಂದ ರಾತ್ರಿ 8) ತಂಡ ಕಾರ್ಯನಿರ್ವಹಿಸಲಿದೆ. ಈ ಪಡೆಯ ಸಿಬ್ಬಂದಿಗೆ ಪೊಲೀಸ್ ಕಮಿಷನರ್, ಜಿಲ್ಲಾ ಎಸ್‌ಪಿ ಮಾರ್ಗದರ್ಶನದಲ್ಲಿಅಗತ್ಯ ತರಬೇತಿ ನೀಡಲಾಗುತ್ತದೆ. ಮಹಿಳಾ ಕೆಡೆಟ್‌ಗಳಿಗೆ ಪ್ರತಿ ತಿಂಗಳು ಗೌರವಧನ, ಕಮಾಂಡೊ ಪಡೆಯ ವಸ್ತ್ರ ನೀಡಲು ನಿರ್ಧರಿಸಲಾಗಿದೆ ಎಂದು ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಅಕ್ಕ ಪಡೆ AKKA PADE

'ಕ್ರಾಂತಿಕಾರಿ ಯೋಜನೆ'



'ಮಹಿಳೆಯರು ಹಾಗೂ ಹೆಣ್ಣುಮಕ್ಕಳ ಸುರಕ್ಷತೆ ದೃಷ್ಟಿಯಿಂದ ಇದೊಂದು ಕ್ರಾಂತಿಕಾರಿ ಯೋಜನೆಯಾಗಿದೆ. ಶಾಲಾ-ಕಾಲೇಜು, ಹಾಸ್ಟೆಲ್, ಮಾಲ್‌ಗಳು, ಜನನಿಬಿಡ ಪ್ರದೇಶಗಳಲ್ಲಿ ಅಕ್ಕ ಪಡೆ ವಾಹನ ಗಸ್ತು ತಿರುಗಲಿದೆ. ಮನೆಯಲ್ಲಿ, ನೆರೆ ಹೊರೆಯವರಿಂದ ತೊಂದರೆ ಅನುಭವಿಸುವ ಹೆಣ್ಣುಮಕ್ಕಳು ಸಹಾಯವಾಣಿ ಮೂಲಕ ಅಕ್ಕ ಪಡೆಯನ್ನು ಸಂಪರ್ಕಿಸಬಹುದು. ಪೊಲೀಸ್ ಇಲಾಖೆ ಹಾಗೂ ಎನ್‌ಸಿಸಿ ಸಹಯೋಗದಲ್ಲಿ ಈ ಪಡೆ ಕಾರ್ಯ ನಿರ್ವಹಿಸಲಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸೂರ್ಯೋದಯ: 6:19 ಸೂರ್ಯಾಸ್ತ: 5:50 ಚಂದ್ರೋದಯ: ರಾ. 3:02 ಚಂದ್ರಾಸ್ತ: ಮ. 3:11 | ಭಾನುವಾರದ ಉಷ್ಣಾಂಶ : ಗರಿಷ್ಠ 28° ಕನಿಷ್ಠ 17°
ಸೋಮವಾರದ ಉಷ್ಣಾಂಶ 28° ಗರಿಷ್ಠ 17° ಕನಿಷ್ಠ ಮಂಗಳವಾರ 28° : 18° ಬುಧವಾರ 28° : 18° ಗುರುವಾರ 28° : 17°
ಸೋಮವಾರ ● ನವೆಂಬರ್ 17, 2025
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

'ಸಂಪತ್ತಿಗೆ ಸವಾಲ್' ನಾಟಕ ನಾಳೆ

ಬೆಂಗಳೂರು: ಹನುಮಸಾಗರದ ನಿಸರ್ಗ ಸಂಗೀತ ವಿದ್ಯಾಲಯ ಹಾಗೂ ರಂಗ ಕಲಾವಿದರ ಸಂಘ ಮತ್ತು ಕೊಪ್ಪಳ ಪತ್ರಕರ್ತರ ಬಳಗದ ಹವ್ಯಾಸಿ ಕಲಾವಿದರಿಂದ ಇದೇ 18ರಂದು ಸಂಜೆ 4 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ 'ಸಂಪತ್ತಿಗೆ ಸವಾಲ್' ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ನಾಟಕಕಾರ ಪಿ.ಬಿ.ಧುತ್ತರಗಿ ಮತ್ತು ಅವರ ಪತ್ನಿಯೂ ಆಗಿರುವ ರಂಗನಟಿ ಸರೋಜಮ್ಮ ಧುತ್ತರಗಿ ಅವರ ಸ್ಮರಣಾರ್ಥವಾಗಿ ಈ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರು ಈ ನಾಟಕ ಪ್ರದರ್ಶನ ಸಮಾರಂಭ ಉದ್ಘಾಟಿಸಲಿದ್ದು, ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಪಾಟೀಲ ಬಯ್ಯಾಪುರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಕಣ್ಮುಚ್ಚಿ ಕುಳಿತ ಗ್ರಂಥಾಲಯ ಇಲಾಖೆ'

ವೀರಲೋಕ ಪುಸ್ತಕ ಸಂತೆ ಸಮಾರೋಪ • ಮಲ್ಲೇಪುರಂ ವೆಂಕಟೇಶ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಪ್ರಕಾಶಕರಿಗೆ ಸರ್ಕಾರದ ಪ್ರೋತ್ಸಾಹ ಸಿಗುತ್ತಿಲ್ಲ. ಗ್ರಂಥಾಲಯ ಇಲಾಖೆಯೂ ಕಣ್ಮುಚ್ಚಿ ಕುಳಿತಿದೆ. ಇದರಿಂದಾಗಿ ಅವರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಸಾಹಿತಿ ಮಲ್ಲೇಪುರಂ ಜಿ.ವೆಂಕಟೇಶ್ ಅವರು ಬೇಸರ ವ್ಯಕ್ತಪಡಿಸಿದರು.

ಜಯನಗರದ ಚಂದ್ರಗುಪ್ತ ಮೌರ್ಯ ಮೈದಾನದಲ್ಲಿ ಆಯೋಜಿಸಿದ್ದ ಮೂರು ದಿನಗಳ ವೀರಲೋಕ ಪುಸ್ತಕ ಸಂತೆಯ ಸಮಾರೋಪ ಸಮಾರಂಭದಲ್ಲಿ ಅವರು ಭಾನುವಾರ ಮಾತನಾಡಿದರು.

'ಯಾವುದೇ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಬದಲಾವಣೆ ಕಾಣಬೇಕೆಂದರೆ ಆತನಿಗೆ ಪುಸ್ತಕಗಳನ್ನು ಸಂಗಾತಿಯಾಗಿಸಬೇಕು. ಪುಸ್ತಕಗಳ ಪ್ರಕಟಣೆಗೆ ಈಗ ಹೆಚ್ಚು ಅವಕಾಶವಿದೆ. ಆದರೆ, ಪುಸ್ತಕೋದ್ಯಮಕ್ಕೆ ಬೆಂಬಲವಾಗಿ ನಿಲ್ಲಬೇಕಾದ ಗ್ರಂಥಾಲಯ ಇಲಾಖೆ ಕೈ ಕಟ್ಟಿ ಕುಳಿತುಕೊಂಡಿರುವುದು ದೌರ್ಭಾಗ್ಯ' ಎಂದು ಹೇಳಿದರು.

'ಈಗ ಓದಲು ಡಿಜಿಟಲ್ ವೇದಿಕೆ ಕೂಡ ಅವಕಾಶ ನೀಡಿದೆ. ಐಪಾಡ್‌ಗಳನ್ನು ಹಿಡಿದು ಓದ ಬಹುದಾದರೂ ಕೈಯಲ್ಲಿ ಪುಸ್ತಕ ಹಿಡಿದುಕೊಂಡು ಓದುವುದರ ಖುಷಿಯೇ ಬೇರೆ. ಅಂತಹ ಓದುವ ಖುಷಿ ಹೆಚ್ಚಿಸುವ ಪ್ರಯತ್ನಗಳು ಸಂತೆಗಳಿಂದ ಆಗುತ್ತಿದೆ. ಪ್ರಕಾಶಕರಿಗೆ ವೇದಿಕೆ ಕಲ್ಪಿಸುವ ವೀರಲೋಕ ಸಂಸ್ಥೆಯ ಪ್ರಯತ್ನ ಶ್ಲಾಘನೀಯ' ಎಂದು ತಿಳಿಸಿದರು.


ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಮಾತನಾಡಿ, 'ಸಂತೆಗಳು ಬಗೆಬಗೆಯ ರೂಪದಲ್ಲಿ ಜನರ ಮುಂದೆ ಬರುತ್ತಿವೆ. ಇದರಲ್ಲಿ ಪುಸ್ತಕ ಸಂತೆಯ ಮೂಲಕ ಜನರಲ್ಲಿ ಓದುವ ಸಂಸ್ಕೃತಿ ಬೆಳೆಸುವ ಈ ಪ್ರಯತ್ನ ಸ್ತುತ್ಯರ್ಹವಾದದ್ದು. ಕನ್ನಡದ ಕವಿರಾಜಮಾರ್ಗ 8ನೇ ಶತಮಾನದಲ್ಲಿಯೇ ಪ್ರಕಟಗೊಂಡ ಕೃತಿ. ಅದಕ್ಕಿಂತ ಮೊದಲು ಕನ್ನಡ ಎಷ್ಟು ಎನ್ನುವ ಇತಿಹಾಸ ನೋಡಬೇಕಿದೆ. ಪುಸ್ತಕಗಳನ್ನು ಜನರಿಗೆ ತಲುಪಿಸುವ ಇಂತಹ ಪ್ರಯತ್ನಗಳು ಹೆಚ್ಚಬೇಕು' ಎಂದು ಸಲಹೆ ನೀಡಿದರು.

ಶಾಸಕ ಸಿ.ಕೆ.ರಾಮಮೂರ್ತಿ, ವೀರಲೋಕ ಪ್ರಕಾಶನದ ಶ್ರೀನಿವಾಸ್ ಅವರು ಉಪಸ್ಥಿತರಿದ್ದರು. ಲೇಖಕರಾದ ನಾಗರಾಜ ವಸ್ತಾರೆ ಅವರ 'ಹಸ್ತೂಂದು ಮತ್ತೊಂದು', ಬಿ.ಯು. ಗೀತಾ ಅವರ 'ಹಾಲಳ್ಳಿ ಕೆನೆಯಾಗಿ', ರವಿಕ್ಷಪ್ರಜಾಪ್ತಿ ಅವರ 'ಅಮರಿಕದಿಂದ ರವಿ', ರಾಜು ಅಡಕಳ್ಳಿ ಅವರ 'ರಸಗುಲ್ಲ' ಕೃತಿಗಳನ್ನು ಜನಾರ್ಪಣೆಗೊಳಿಸಲಾಯಿತು.

ವಿವಿಧ ಪ್ರಕಾಶನಗಳಿಗೆ ಮುದ್ರಣ, ಒಳಪುಟ ವಿನ್ಯಾಸದ ಗೌರವಧನ ನೀಡಲಾಯಿತು. ನಂತರ ರೇವಾ ರಂಗ ಅಧ್ಯಯನ ಕೇಂದ್ರದವರು ನಂದಕುಮಾರ್ ಅನ್ನಕ್ಕನವರ್ ಅವರ ನಿರ್ದೇಶನದಲ್ಲಿ 'ದರ್ಶನಂ' ನಾಟಕ ಪ್ರದರ್ಶನ ಮಾಡಿದರು.

ಮುಖ್ಯಾಂಶಗಳು

- ಜಯನಗರದ ಚಂದ್ರಗುಪ್ತ ಮೌರ್ಯ ಮೈದಾನದಲ್ಲಿ ಆಯೋಜನೆ
- ಮೂರು ದಿನಗಳ ಕಾಲ ನಡೆದ ವೀರಲೋಕ ಪುಸ್ತಕ ಸಂತೆ
- 2026ರ ಜನವರಿ 24, 25, 26ರಂದು ಮುಂದಿನ ಪುಸ್ತಕ ಸಂತೆ



ವೀರಲೋಕ ಪ್ರಕಾಶನ ಜಯನಗರದ ಶಾಲಿನಿ ಮೈದಾನದಲ್ಲಿ ಆಯೋಜಿಸಿದ್ದ 'ವೀರಲೋಕ ಪುಸ್ತಕ ಸಂತೆ'ಯ ಮೂರನೇ ದಿನವಾದ ಭಾನುವಾರ ಹೆಚ್ಚು ಜನರು ಪುಸ್ತಕ ಖರೀದಿಸಿದರು ಪ್ರಜಾವಾಣಿ ಚಿತ್ರ

₹4 ಕೋಟಿ ವಹಿವಾಟು

'ವೀರಲೋಕ ಪುಸ್ತಕ ಸಂತೆಗೆ ಬೆಂಗಳೂರು ಮಾತ್ರವಲ್ಲದೇ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ 200ಕ್ಕೂ ಹೆಚ್ಚು ಪ್ರಕಾಶಕರು 2 ಲಕ್ಷಕ್ಕೂ ಅಧಿಕ ಪುಸ್ತಕಗಳನ್ನು ಇರಿಸಿದ್ದರು. ಇದಲ್ಲದೇ ಇತರೆ ಮಳಿಗೆಗಳೂ ಇದ್ದವು. ಹೆಚ್ಚಿನ ಪುಸ್ತಕ ಮಳಿಗೆಯವರು ₹5 ಲಕ್ಷದಿಂದ ₹11 ಲಕ್ಷದವರೆಗೂ ವಹಿವಾಟು ನಡೆಸಿದ್ದಾರೆ. ಒಟ್ಟಾರೆ ₹4 ಕೋಟಿವರೆಗೂ ವಹಿವಾಟು ಆಗಿರುವ ಅಂದಾಜಿದೆ' ಎಂದು ವೀರಲೋಕದ ಶ್ರೀನಿವಾಸ್ ಅವರು ತಿಳಿಸಿದರು.

ಬೀದರ್‌ನಲ್ಲಿ ಮುಂದಿನ ಪುಸ್ತಕ ಸಂತೆ

ಮುಂದಿನ ಪುಸ್ತಕ ಸಂತೆಯನ್ನು 2026ರ ಜನವರಿ 24, 25, 26ರಂದು ಬೀದರ್‌ನಲ್ಲಿ ಆಯೋಜಿಸಲಾಗುವುದು ಎಂದು ಪ್ರಕಾಶಕರ ಸಭೆಯಲ್ಲಿ ಬೀದರ್‌ನ ಭಾಲ್ಕಿ ಕನ್ನಡ ಮಠದ ಗುರು ಬಸವ ಪಟ್ಟದೇವರು ಅವರು ತಿಳಿಸಿದರು.

ಪ್ರಮುಖರ ಸಂವಾದ

ಮೂರನೇ ದಿನವೂ ಪ್ರಮುಖ ಲೇಖಕರೊಂದಿಗೆ ಸಂವಾದ ನಡೆಯಿತು. ಅಬ್ದುಲ್ ರಶೀದ್, ಪಿ.ಚಂದ್ರಿಕಾ, ಶತಾವಧಾನಿ ಗಣೇಶ್, ಶರಣು ಹುಲ್ಲೂರು ಸಂವಾದದಲ್ಲಿ ಭಾಗಿಯಾದರು. ಓದುಗರು ಲೇಖಕರ ವಿಚಾರಗಳನ್ನು ಆಲಿಸಿ ಸಂವಾದದಲ್ಲಿ ಪಾಲ್ಗೊಂಡರು. ಕೊನೆ ದಿನವೂ ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕ ಪ್ರೇಮಿಗಳು ಮೇಳಕ್ಕೆ ಆಗಮಿಸಿ ಪುಸ್ತಕ ಖರೀದಿಸಿದರು.

'ಶಾಲಾ ಪಠ್ಯದಲ್ಲಿ ಸಂಗೀತ ಅಳವಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿ ಸಂಗೀತದ ಬಗ್ಗೆ ಆಸಕ್ತಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಶಾಸ್ತ್ರೀಯ ಸೇರಿ ಸಂಗೀತದ ವಿವಿಧ ಪ್ರಕಾರಗಳನ್ನು ಶಾಲಾ ಪಠ್ಯದಲ್ಲಿ ಅಳವಡಿಸಬೇಕು' ಎಂದು ಪಿಟೀಲು ವಾದಕ ಎಲ್. ಸುಬ್ರಮಣ್ಯಂ ಆಗ್ರಹಿಸಿದರು.

ಬೆಂಗಳೂರು ಗಾಯನ ಸಮಾಜವು ತನ್ನ ಕೇಂದ್ರದಲ್ಲಿ ಇದೇ 23ರವರೆಗೆ ಹಮ್ಮಿಕೊಂಡಿರುವ 55ನೇ ಸಂಗೀತ ಸಮ್ಮೇಳನಕ್ಕೆ ಭಾನುವಾರ ಚಾಲನೆ ನೀಡಿ, ಮಾತನಾಡಿದರು.

'ವಿದೇಶದಲ್ಲಿ ಇರುವ ತರಹ ಇಲ್ಲಿಯೂ ಶಾಲಾ ಪಠ್ಯದಲ್ಲಿ ಸಂಗೀತವನ್ನು ಕಡ್ಡಾಯಗೊಳಿಸಬೇಕು. ಪಾಶ್ಚಾತ್ಯ ಸಂಗೀತ, ಹಿಂದೂಸ್ತಾನಿ ಸಂಗೀತ ಸೇರಿ ಯಾವುದೇ ಪ್ರಕಾರದಲ್ಲಿ ಅಧ್ಯಯನ ಮಾಡಲು ಅವಕಾಶ ನೀಡಬೇಕು. ಸಂಗೀತವು ಮಗುವಿನ ಸಂವೇದನಾ ಅನುಭವವನ್ನು ಉತ್ತೇಜಿಸುತ್ತದೆ. ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ನಮ್ಮ 'ಸಪ ಸಂಸ್ಥೆ'ಯ ಮೂಲಕ ಸುಮಾರು 50 ಸಾವಿರ ವಿದ್ಯಾರ್ಥಿಗಳಿಗೆ ಸಂಗೀತ ತರಗತಿಗಳನ್ನು ನಡೆಸಿ, ಸಂಗೀತ ಪ್ರಜ್ಞೆ ಬೆಳೆಸುತ್ತಿದ್ದೇವೆ. ಗಾಯಕರಿಗೆ ನೀಡಿದಷ್ಟೇ ಪ್ರಾಮುಖ್ಯವು ವಾದ್ಯ ಕಲಾವಿದರಿಗೂ ಸಿಗಬೇಕು' ಎಂದು ಅಭಿಪ್ರಾಯಪಟ್ಟರು.

ಸಮ್ಮೇಳನಾಧ್ಯಕ್ಷೆ ಪದ್ಮಾ ಗುರುದತ್, 'ಕಲಾವಿದರಾಗಲು ಗುರು–ಶಿಷ್ಯ ಇಬ್ಬರ ಪಾತ್ರವೂ ಪ್ರಮುಖವಾಗುತ್ತದೆ. ಜ್ಞಾನ ದಾಹಿ ಶಿಷ್ಯನಿಗೆ ಜ್ಞಾನಸ್ಥ ಗುರು ದೊರಕುವುದೆಷ್ಟು ಸುಕೃತವೋ, ಜ್ಞಾನಸ್ಥ ಗುರುವಿಗೆ ಜ್ಞಾನದಾಹಿ ಶಿಷ್ಯ ಸಿಗುವುದು ಅಷ್ಟೇ ಸುಕೃತ' ಎಂದು ಹೇಳಿದರು.

ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್, 'ನಮ್ಮ ಸಂಸ್ಥೆಯು ರಾಜ್ಯದ ಹಿರಿಯ ಕಲಾವಿದರಿಗೆ ವೇದಿಕೆ ಕಲ್ಪಿಸುವ ಜತೆಗೆ, ಉದಯೋನ್ಮುಖ ಕಲಾವಿದರನ್ನು ಪರಿಚಯಿಸುತ್ತಿದೆ. ಮಕ್ಕಳಿಗೆ ಸಂಗೀತ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ಈ ವರ್ಷ ಸ್ಪರ್ಧೆಯಲ್ಲಿ 900 ಮಕ್ಕಳು ಭಾಗವಹಿಸಿದ್ದರು, ಅವರನ್ನು ಪ್ರೋತ್ಸಾಹಿಸುವ ಮೂಲಕ ಸಂಗೀತ ವಿದ್ವಾಂಸರನ್ನು ತಯಾರಿಸುತ್ತಿದ್ದೇವೆ' ಎಂದು ಹೇಳಿದರು.

ಇದಕ್ಕೂ ಮೊದಲು ಕಲಾವಿದರಾದ ಅಚ್ಯುತ್ ಎಂ. ಆತ್ರೇಯ, ಪ್ರಜ್ವಲ್ ಭಾರದ್ವಾಜ್, ಪ್ರಜ್ಞಾ ಅಡಿಗ ಮತ್ತು ಶಮಿತ್ ಎಸ್. ಗೌಡ ಅವರಿಗೆ 'ಯುವ ಕಲಾರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿಯು ₹20 ಸಾವಿರ ನಗದು ಒಳಗೊಂಡಿದೆ.



ಸಮಾರಂಭದಲ್ಲಿ (ಕುಳಿತವರು ಎಡದಿಂದ) ಅಚ್ಯುತ್ ಎಂ. ಆತ್ರೇಯ, ಪ್ರಜ್ವಲ್ ಭಾರದ್ವಾಜ್, ಪ್ರಜ್ಞಾ ಅಡಿಗ ಮತ್ತು ಶಮಿತ್ ಎಸ್. ಗೌಡ ಅವರಿಗೆ 'ಯುವ ಕಲಾರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಗೋವಿಂದ ಮಾಧವ, ಬೆಂಗಳೂರು ಗಾಯನ ಸಮಾಜದ ಉಪಾಧ್ಯಕ್ಷ ಅಚ್ಯುತ್ ರಾವ್ ಪದಕಿ, ಪದ್ಮಾ ಗುರುದತ್, ಎಂ.ಆರ್.ವಿ. ಪ್ರಸಾದ್, ಗಾಯಕಿ ಎಚ್.ಆರ್. ಲೀಲಾವತಿ, ಎಲ್. ಸುಬ್ರಮಣ್ಯಂ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಕೆ.ಜೈರಾಜ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಅಧಿಕಾರ ಹಸ್ತಾಂತರ ಚರ್ಚೆ ಸದ್ಯಕ್ಕಿಲ್ಲ'

ಅನುಗೊಂಡನಹಳ್ಳಿ(ಹೊಸಕೋಟೆ): ಸುಪ್ರೀಂ ಕೋರ್ಟ್ ವಕೀಲ ಹಾಗೂ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಭಾನುವಾರ ದೆಹಲಿ ಪ್ರವಾಸ ಕೈಗೊಂಡಿದ್ದಾರೆಯೇ ಹೊರತು ಅಧಿಕಾರ ಹಸ್ತಾಂತರ ವಿಷಯ ಚರ್ಚೆಗೆ ಅಲ್ಲ ಎಂದು ಶಾಸಕ ಶರತ್ ಬಚ್ಚೇಗೌಡ ಹೇಳಿದ್ದಾರೆ.

ನಗರದಲ್ಲಿ ಇಂದು

ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಎಸ್.ಜಿ. ಸಿದ್ಧರಾಮಯ್ಯ, ಪ್ರಶಸ್ತಿ ಪುರಸ್ಕೃತರು: ಟಿ. ಲಕ್ಷ್ಮೀಪತಿ, ಪ್ರಶಸ್ತಿ ಪ್ರದಾನ: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಹಿ.ಚಿ. ಬೋರಲಿಂಗಯ್ಯ, ಆಯೋಜನೆ: ಕರ್ನಾಟಕ ಜಾನಪದ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30



ಟಿ. ಲಕ್ಷ್ಮೀಪತಿ

ಧನ್ವಂತರಿ ಜಯಂತಿ ಮಹೋತ್ಸವ: ಗಣಪತಿ ಪೂಜೆ, ಧನ್ವಂತರಿ ಹೋಮ ಸೇರಿ ವಿವಿಧ ಧಾರ್ಮಿಕ ವಿಧಿವಿಧಾನಗಳು, ಆಯೋಜನೆ: ಕೋಟೆ ಧನ್ವಂತರಿ ಗಣಪತಿ ಟೆಂಪಲ್ ಟ್ರಸ್ಟ್, ಸ್ಥಳ: ಕೋಟೆ ಧನ್ವಂತರಿ ಗಣಪತಿ ದೇವಸ್ಥಾನ, ಕೆ.ಆರ್. ರಸ್ತೆ, ಬೆಳಿಗ್ಗೆ 6.30ರಿಂದ ಹಾಗೂ ಸಂಜೆ 6ರಿಂದ

'ಸಂತವಾಣಿ'– ಚಲನಚಿತ್ರಗಳು, ಪುಸ್ತಕಗಳು, ಉಪನ್ಯಾಸಗಳು, ಸಂಗೀತ, ನೃತ್ಯ, ನಾಟಕ ಮತ್ತು ವಿಚಾರಗೋಷ್ಠಿಗಳು: 'ವಲ್ಲಭಾಚಾರ್ಯ ಸಂಪ್ರದಾಯ' ವಿಷಯ ಪ್ರಸ್ತುತಿ: ಹರೇಕೃಷ್ಣ ಶತಪತಿ, 'ಆಂಧ್ರಪ್ರದೇಶದ ಸಂತರು' ವಿಷಯ ಪ್ರಸ್ತುತಿ: ಸುಬ್ರಹ್ಮಣ್ಯಂ ಗೋರ್ತಿ, 'ತತ್ವಪದ ಪರಂಪರೆ: ಕಿತ್ತೂರು ಕರ್ನಾಟಕ' ವಿಷಯ ಪ್ರಸ್ತುತಿ: ಮಲ್ಲೇಪುರಂ ಜಿ. ವೆಂಕಟೇಶ್, 'ಕಲ್ಯಾಣ ಕರ್ನಾಟಕದ ತತ್ವಪದಕಾರರು' ವಿಷಯ ಪ್ರಸ್ತುತಿ: ಎಂ.ಬಿ. ಕಟ್ಟಿ, ತತ್ವಪದಗಳ ಪ್ರಸ್ತುತಿ: ಬಿ.ವಿ. ಪ್ರದೀಪ್, ಬಿ.ವಿ. ಪ್ರವೀಣ್, ವ್ಯಾಖ್ಯಾನ: ಸತ್ಯೇಶ್ ಬೆಳ್ಳೂರು, ಕೀಬೋರ್ಡ್: ನಗರ ಕೃಷ್ಣ ಉಡುಪ, ತಬಲಾ: ಪ್ರದ್ಯುಮ್ನ ಸೊರಬ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10ರಿಂದ

ಲೈಂಗಿಕ ಶೋಷಣೆ ವಿರುದ್ಧ ಮಕ್ಕಳ ರಕ್ಷಣೆ ಅಂತರರಾಷ್ಟ್ರೀಯ ದಿನ: 'ಸಾಕ್ಷ್ಯಾಧಾರಿತ ನೀತಿ ನಿರೂಪಣೆಯ ಮೂಲಕ ಲೈಂಗಿಕ ಶೋಷಣೆ ಮತ್ತು ಲೈಂಗಿಕ ದೌರ್ಜನ್ಯದ ವಿರುದ್ಧ ಮಕ್ಕಳ ರಕ್ಷಣೆಯನ್ನು ಬಲಪಡಿಸುವುದು' ವಿಚಾರಸಂಕಿರಣ, ಉದ್ಘಾಟನೆ: ಶಶಿಧರ್ ಕೋಸಂಬೆ, ಅತಿಥಿಗಳು: ವರದರಾಜ್, ಹಲೀಮಾ, ಹೇಮಾ ಶ್ರೀನಿವಾಸ್, ಆಯೋಜನೆ: ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 10

ರಮಣಶ್ರೀ ಶರಣ ಪ್ರಶಸ್ತಿ ಪ್ರದಾನ ಹಾಗೂ ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಅಣಿ ಮುತ್ತು ಭಾಗ–15' ಪುಸ್ತಕ ಬಿಡುಗಡೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಪ್ರಶಸ್ತಿ ಪ್ರದಾನ: ಎಂ.ಬಿ. ಪಾಟೀಲ, ಪುಸ್ತಕ ಬಿಡುಗಡೆ: ವಿ. ಸೋಮಣ್ಣ, ಉಪಸ್ಥಿತಿ: ಗೊ.ರು. ಚನ್ನಬಸಪ್ಪ, ಮನು ಬಳಿಗಾರ್, ವಿಶ್ವೇಶ್ವರ ಭಟ್, ರವಿ ಹೆಗಡೆ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಮಣಶ್ರೀ ಪ್ರತಿಷ್ಠಾನ, ಸ್ಥಳ: ಹೋಟೆಲ್ ರಮಣಶ್ರೀ ರಿಚ್ಮಂಡ್, ರಾಜಾರಾಮ್ ಮೋಹನ್ ರಾಯ್ ರಸ್ತೆ, ರಿಚ್ಮಂಡ್ ಸರ್ಕಲ್, ಬೆಳಿಗ್ಗೆ 10.30

ಮಕ್ಕಳ ದಿನಾಚರಣೆ ಪ್ರಯುಕ್ತ ಕಲರವ: ಕಲಾ ಪ್ರದರ್ಶನ ಮತ್ತು ಮಕ್ಕಳ ತರಬೇತಿ ಕಾರ್ಯಾಗಾರ, ಉದ್ಘಾಟನೆ: ಕೆ.ಎಂ. ಗಾಯತ್ರಿ, ಅತಿಥಿ: ಶ್ರೀಜಾ ವಿ.ಎನ್., ಅಧ್ಯಕ್ಷತೆ: ಪ.ಸ. ಕುಮಾರ್, ಆಯೋಜನೆ: ಕರ್ನಾಟಕ ಲಲಿತಕಲಾ ಅಕಾಡೆಮಿ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11



ಪ.ಸ.ಕುಮಾರ್

55ನೇ ಸಂಗೀತ ಸಮ್ಮೇಳನ: ಉದಯೋನ್ಮುಖ ಕಲಾವಿದರ ಸಂಗೀತ ಕಛೇರಿ: ಗಾಯನ: ಅಂಜಲಿ ವಿ., ಪಿಟೀಲು: ದೀಪಿಕ ಎಂ., ಮೃದಂಗ: ಎಸ್. ಜಗನ್ನಾಥನ್, ಮೋರ್ಸಿಂಗ್: ವಿನೀತ್ ಉಡುಪ, ಸಂಗೀತ ಕಛೇರಿ: ಗಾಯನ: ಪದ್ಮಾ ಗುರುದತ್, ಪಿಟೀಲು: ನಳಿನಾ ಮೋಹನ್, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ನಾರಾಯಣ ಮೂರ್ತಿ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 4.15

ರಾಷ್ಟ್ರೀಯ ಪತ್ರಿಕಾ ದಿನಾಚರಣೆ: ಉದ್ಘಾಟನೆ: ಯು.ಟಿ. ಖಾದರ್, ಎಂ.ಬಿ. ಪಾಟೀಲ, ಮುಖ್ಯ ಅತಿಥಿ: ಕೆ.ವಿ. ಪ್ರಭಾಕರ್, ಪಿ.ಸಿ. ಮೋಹನ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಪ್ರಾಸ್ತಾವಿಕ ನುಡಿ: ಆಯೇಶಾ ಖಾನಂ, ಪ್ರಧಾನ ಭಾಷಣ: ನೂಪುರ್ ಬಸು, ಆರ್. ಪೂರ್ಣಿಮಾ, ಉಪಸ್ಥಿತಿ: ಬಿ.ಬಿ. ಕಾವೇರಿ, ಹೇಮಂತ್ ನಿಂಬಾಳ್ಕರ್, ಆರ್. ಶ್ರೀಧರ್, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪ್ರೆಸ್ ಕ್ಲಬ್ ಆಫ್ ಬೆಂಗಳೂರು, ಸ್ಥಳ: ಪ್ರೆಸ್ ಕ್ಲಬ್ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆ.ವಿ. ಶೋಭಾ ಸಿಟಿ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸಕಾರ್ಯದ ಕಾರಣ ಇದೇ 18 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ ವಾಗಲಿದೆ.

ಶೋಭಾ ಸಿಟಿ, ಚೊಕ್ಕನಹಳ್ಳಿ, ಪ್ಯಾರಡೈಸ್ ನೂರ್ ನಗರ, ಎಕ್ಸ್ ಸರ್ವಿಸ್‌ಮೆನ್ ಲೇಔಟ್, ಪೊಲೀಸ್ ಕ್ವಾಟರ್ಸ್, ಶಬರಿ ನಗರ, ಹೊಸ ಶಾಂತಿ ನಗರ, ಕೆಂಪೇಗೌಡ ಲೇಔಟ್, ನಾಗೇನಹಳ್ಳಿ ಗ್ರಾಮ, ರೀಜೆನ್ಸಿ ಪಾರ್ಕ್, ಎಸ್ತರ್ ಹಾರ್ಮನಿ ಲೇಔಟ್, ಬಾಲಾಜಿ ಲೇಔಟ್, ನಾಗೇನಹಳ್ಳಿ ಜಿಮ್, ಸ್ಲಂ ಬೋರ್ಡ್ ಮತ್ತು ಬೆಂಚ್ ರಾಯಲ್ ವುಡ್, ಅರ್ಕಾವತಿ ಲೇಔಟ್, ಆರ್.ಕೆ. ಹೆಗಡೆ ನಗರ, ಬೆಳ್ಳಹಳ್ಳಿ ಗ್ರಾಮ, ತಿರುಮೇನಹಳ್ಳಿ ಗ್ರಾಮ, ಮಿಟ್ಟಗಾನಹಳ್ಳಿ ಮತ್ತು ಕೋಗಿಲು ಗ್ರಾಮ, ವಿಧಾನಸೌಧ ಲೇಔಟ್ ಸುತ್ತಮುತ್ತ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ನಾಯಿ ಮುದ್ದು ಮಾಡುವ ನೆಪ ಯುವತಿಗೆ ಲೈಂಗಿಕ ಕಿರುಕುಳ

ಜ್ಞಾನಭಾರತಿ ಠಾಣಾ ವ್ಯಾಪ್ತಿಯ ಉಪಕಾರ್ ಲೇಔಟ್‌ನಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಿಯನ್ನು ಮುದ್ದು ಮಾಡುವ ನೆಪದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಯುವತಿಗೆ ಲೈಂಗಿಕ ಕಿರುಕುಳ ನೀಡಿರುವ ಘಟನೆ ಜ್ಞಾನಭಾರತಿ ಠಾಣಾ ವ್ಯಾಪ್ತಿಯ ಉಪಕಾರ್ ಲೇಔಟ್‌ನಲ್ಲಿ ನಡೆದಿದೆ.

25 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಅಪರಿಚಿತ ವ್ಯಕ್ತಿಯ ವಿರುದ್ಧ ಹಲ್ಲೆ, ಲೈಂಗಿಕ ಕಿರುಕುಳ, ಕಳ್ಳತನ ಮತ್ತು ಉದ್ದೇಶಪೂರ್ವಕವಾಗಿ ಗಾಯಗೊಳಿಸುವಿಕೆ ಆರೋಪದಡಿ ಪ್ರಕರಣ ದಾಖಲಾಗಿದೆ.

ನವೆಂಬರ್ 7ರ ರಾತ್ರಿ 10.30ರಲ್ಲಿ ದೂರುದಾರ ಯುವತಿ ತಮ್ಮ ಸಾಕುನಾಯಿಯನ್ನು ಮನೆ ಸಮೀಪದಲ್ಲೇ ವಾಕಿಂಗ್‌ಗೆಂದು ಕರೆದುಕೊಂಡು ಬಂದಿದ್ದರು. ಅದೇ ಸಮಯಕ್ಕೆ ಅಲ್ಲಿಗೆ ಬಂದ ಅಪರಿಚಿತ ವ್ಯಕ್ತಿಯೊಬ್ಬ, 'ನಿಮ್ಮ ನಾಯಿಯನ್ನು ಮುಟ್ಟಬಹುದೇ?' ಎಂದು ಕೇಳುತ್ತಾ ನಾಯಿಯನ್ನು ಮುದ್ದಿಸಲು ಆರಭಿಸಿದ. ನಂತರ ಯುವತಿ ಮನೆಗೆ ತೆರಳಲು ಮುಂದಾದಾಗ ಏಕಾಏಕಿ ಆಕೆಯ ದೇಹ ಸ್ಪರ್ಶಿಸಿದ್ದಾನೆ.

ಗಾಬರಿಗೊಂಡ ಯುವತಿ ಆರೋಪಿಯನ್ನು ತಳ್ಳುವ ಮೂಲಕ ಪ್ರತಿರೋಧವೊಡ್ಡಿದ್ದರು. ಮತ್ತೆ ಆರೋಪಿ ಕಿರುಕುಳ ನೀಡಲು ಯತ್ನಿಸಿದಾಗ ಕಪಾಳಕ್ಕೆ ಬಾರಿಸಿದ್ದರು. ಯುವತಿ ಜೋರಾಗಿ ಕಿರುಚಲಾರಂಭಿಸಿದಾಗ, ಕೆಳಕ್ಕೆ ಬಿದ್ದ ಅವರ ಸ್ಮಾರ್ಟ್‌ಫೋನ್ ತೆಗೆದುಕೊಂಡು ಆರೋಪಿ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಲ್ಲೆ ನಡೆಸಿ, ಲೈಂಗಿಕ ಕಿರುಕುಳ ನೀಡಿ ಮೊಬೈಲ್ ಕಳ್ಳತನ ಮಾಡಿರುವ ಆರೋಪಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಯುವತಿ ದೂರಿನಲ್ಲಿ ಮನವಿ ಮಾಡಿದ್ದಾರೆ.

ಘಟನೆ ನಡೆದ ಸ್ಥಳದ ಸುತ್ತಮುತ್ತಲ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದ್ದು, ಆರೋಪಿಗೆ ಹುಡುಕಾಟ ನಡೆಯುತ್ತಿದೆ ಪೊಲೀಸರು ಮಾಹಿತಿ ನೀಡಿದ್ದಾರೆ.

ಹಣ, ಆಭರಣ ದೋಚಿದ್ದ ಯುವತಿ ಸೆರೆ

ಅಪರಾಧ ಸುದ್ದಿ

ಬೆಂಗಳೂರು: ಡೇಟಿಂಗ್ ಆ್ಯಪ್ ಮೂಲಕ ಪರಿಚಿತನಾದ ಯುವಕನಿಂದ ಹಣ ಮತ್ತು ಚಿನ್ನಾಭರಣ ದೋಚಿದ್ದ ಪ್ರಕರಣ ಸಂಬಂಧ ಕವಿಪ್ರಿಯಾ ಹಾಗೂ ಆಕೆಯ ಸ್ನೇಹಿತನನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಅವಿನಾಶ್ ನೀಡಿದ ದೂರಿನ ಮೇಲೆ ಕವಿಪ್ರಿಯಾ ಎಂಬುವರನ್ನು ಬಂಧಿಸಿ, ವಿಚಾರಣೆ ನಡೆಸಲಾಯಿತು. ಅವರ ಹೇಳಿಕೆ ಆಧರಿಸಿ ಸ್ನೇಹಿತ ಹರ್ಷವರ್ಧನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೀಣ್ಯದ ನಾಗಸಂದ್ರದ ಪೇಯಿಂಗ್ ಗೆಸ್ಟ್‌ನಲ್ಲಿ (ಪಿ.ಜಿ) ಅವಿನಾಶ್ ವಾಸವಾಗಿದ್ದು, ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಎರಡು ತಿಂಗಳ ಹಿಂದೆ 'ಹ್ಯಾಪನ್ ಆ್ಯಪ್' ಡೇಟಿಂಗ್ ಆ್ಯಪ್‌ನಲ್ಲಿ ಕವಿಪ್ರಿಯಾ ಅವರ ಪರಿಚಯವಾಗಿದೆ. ಬಳಿಕ ಇಬ್ಬರೂ ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡು ಮಾತನಾಡುತ್ತಿದ್ದರು. ನವೆಂಬರ್ 1ರಂದು ಇಂದಿರಾ ನಗರದ ರೆಸ್ಟೋರೆಂಟ್‌ವೊಂದರಲ್ಲಿ ಭೇಟಿಯಾಗಿ ಮದ್ಯದ ಪಾರ್ಟಿ ಮಾಡಿದ್ದರು.

ಮದ್ಯ ಸೇವನೆ ಬಳಿಕ ಅವಿನಾಶ್, ಇಂತಹ ಸ್ಥಿತಿಯಲ್ಲಿ ಪಿ.ಜಿಗೆ ಹೋಗಲು ಆಗುವುದಿಲ್ಲ ಎಂದಿದ್ದಾರೆ. ಅದನ್ನೇ ದುರುಪಯೋಗ ಪಡಿಸಿಕೊಂಡ ಕವಿಪ್ರಿಯಾ, ಲಾಡ್ಜ್‌ವೊಂದರಲ್ಲಿ ಕೊಠಡಿ ಬುಕ್ ಮಾಡಿ ಕರೆದೊಯ್ದಿದ್ದಾರೆ. ಅಲ್ಲಿ ಇಬ್ಬರೂ ಊಟ ಮಾಡಿದ್ದರು. ಆ ಬಳಿಕ ಆರೋಪಿ ಮತ್ತು ಬರುವ ಔಷಧಿಯನ್ನು ನೀರಿನಲ್ಲಿ ಬೆರೆಸಿ ಅವಿನಾಶ್‌ಗೆ ಕುಡಿಸಿದ್ದರು. ಬೆಳಿಗ್ಗೆ ಎದ್ದು ನೋಡಿದಾಗ ಚಿನ್ನದ ಸರ, ಚಿನ್ನದ ಕಡಗ, ₹10 ಸಾವಿರ ನಗದು ಸೇರಿ ₹6.80 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು.

ಸೈಬರ್ ವಂಚನೆ: ಇಬ್ಬರ ಬಂಧನ

ಮಂಗಳೂರು: ಸೈಬರ್ ಅಪರಾಧ ಕೃತ್ಯಕ್ಕೆ 300ಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳನ್ನು ಹಾಗೂ 250ಕ್ಕೂ ಹೆಚ್ಚು ಸಿಮ್‌ಗಳನ್ನು ಬಳಸಿ ಹಲವಾರು ಮಂದಿಗೆ ವಂಚಿಸಿದ್ದ ಇಬ್ಬರು ಆರೋಪಿಗಳಾದ ಧಾಲಾಯ್ ದಮೆಂಜಯ್ ರಿಯಾಂಗ್ ಮತ್ತು ಮಂಗ್ಟೆ ಅಮೋಶ್ ಎಂಬವರನ್ನು ಇಲ್ಲಿನ ಸೆನ್ ಅಪರಾಧ ಠಾಣೆಯ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ಅಪಘಾತ: ಸಾಫ್ಟ್‌ವೇರ್ ಎಂಜಿನಿಯರ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸಾಫ್ಟ್‌ವೇರ್ ಎಂಜಿನಿಯರ್ ಮೃತಪಟ್ಟು, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಪ್ರಕರಣ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಉತ್ತರ ಪ್ರದೇಶದ ವಿಶಾಲ್ ಕೌರ್ (25) ಮೃತಪಟ್ಟವರು.

ಗೊಲ್ಲಹಳ್ಳಿಯಲ್ಲಿ ವಾಸವಾಗಿದ್ದ ವಿಶಾಲ್ ಕೌರ್ ಅವರು ಎಲೆಕ್ಟ್ರಾನಿಕ್ ಸಿಟಿಯ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರು. ವಿಶಾಲ್ ಅವರು ಸ್ನೇಹಿತನ ಜತೆ ಹೋಟೆಲ್‌ನಲ್ಲಿ ಊಟ ಮಾಡಿಕೊಂಡು ವಾಪಸ್ ಮನೆಗೆ ಬೈಕ್‌ನಲ್ಲಿ ಬರುತ್ತಿದ್ದಾಗ ಭಾನುವಾರ ಬೆಳಗಿನ ಜಾವ 4 ಗಂಟೆ ಸುಮಾರಿಗೆ ಎಲೆಕ್ಟ್ರಾನಿಕ್ ಸಿಟಿಯ 2ನೇ ಮುಖ್ಯರಸ್ತೆಯಲ್ಲಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದಾರೆ.

ಆಗ ಉರುಳಿ ಬಿದ್ದು ಇಬ್ಬರು ಗಂಭೀರವಾಗಿ ಗಾಯಗೊಂಡರು. ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ವಿಶಾಲ್ ಕೌರ್ ಮೃತಪಟ್ಟರು, ಹಿಂಬದಿ ಸವಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅತಿವೇಗ ಮತ್ತು ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎಂಬುದು ಪ್ರಾಥಮಿಕ ತನಿಖೆ ವೇಳೆ ಕಂಡುಬಂದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಬೈಕ್ ಸವಾರನ ಅಡ್ಡಗಟ್ಟಿ ಸುಲಿಗೆಗೆ ಯತ್ನ

ಬೆಂಗಳೂರು: ಶಾಂತಿನಗರ ಹಾಗೂ ಯಶವಂತಪುರದಲ್ಲಿ ಸುಲಿಗೆಕೋರರು ಶನಿವಾರ ರಾತ್ರಿ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಲು ಯತ್ನಿಸಿದ್ದಾರೆ.

ಶಾಂತಿನಗರದ ಚರ್ಚ್ ರಸ್ತೆಯಲ್ಲಿ ಮೂವರು ದುಷ್ಕರ್ಮಿಗಳು ಗುರುರಾಜ್ ಎಂಬ ಭದ್ರತಾ ಸಿಬ್ಬಂದಿಯೊಬ್ಬರನ್ನು ದ್ವಿಚಕ್ರ ವಾಹನದಲ್ಲಿ ಹಿಂಬಾಲಿಸಿಕೊಂಡು ಬಂದು ಅಡ್ಡಗಟ್ಟಿದ್ದಾರೆ. ನಂತರ ಇಬ್ಬರು ದ್ವಿಚಕ್ರ ವಾಹನದಿಂದ ಕೆಳಗಿಳಿದು ಗುರುರಾಜ್ ಅವರನ್ನು ಮಾರಕಾಸ್ತ್ರಗಳಿಂದ ಬೆದರಿಸಿ, ಮೊಬೈಲ್ ಹಾಗೂ ಹಣ ಕಿತ್ತುಕೊಳ್ಳಲು ಯತ್ನಿಸಿದ್ದಾರೆ. ಇದಕ್ಕೆ ಗುರುರಾಜ್ ಪ್ರತಿರೋಧ ತೋರಿದಾಗ ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಪರಾರಿಯಾದ್ದಾರೆ.

ಈ ಕೃತ್ಯ ಘಟನಾ ಸ್ಥಳದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸಿದ್ದಯ್ಯ ರಸ್ತೆ ನಿವಾಸಿಯಾದ ಗುರುರಾಜ್ ಅವರು ಖಾಸಗಿ ಕಂಪನಿಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿದ್ದಾರೆ. ಅವರು ದ್ವಿಚಕ್ರ ವಾಹನದಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ ದುಷ್ಕರ್ಮಿಗಳು ಅಡ್ಡಗಟ್ಟಿ ಈ ಕೃತ್ಯವೆಸಗಿದ್ದಾರೆ.

ಆರೋಪಿಗಳ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯ ವಿವರ ಸಿಕ್ಕಿದ್ದು, ಸದ್ಯದಲ್ಲೇ ಅವರನ್ನು ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ವಿಲ್ಸನ್‌ಗಾರ್ಡನ್ ಠಾಣೆಯಲ್ಲಿ ದೂರು ದಾಖಲಾಗಿದೆ.

ದಾರಿಹೋಕರ ಸುಲಿಗೆಗೆ ಯತ್ನ: ಯಶವಂತಪುರ ರೈಲು ನಿಲ್ದಾಣದ ಬಳಿ ದುಷ್ಕರ್ಮಿಗಳು ದಾರಿಹೋಕರನ್ನು ಮಾರಕಾಸ್ತ್ರಗಳಿಂದ ಬೆದರಿಸಿ, ಸುಲಿಗೆ ಮಾಡಲು ಯತ್ನಿಸಿದ್ದಾರೆ.

ದ್ವಿಚಕ್ರ ವಾಹನದಲ್ಲಿ ಬಂದ ದುಷ್ಕರ್ಮಿಗಳು ಪಾದಚಾರಿ ಮಾರ್ಗದಲ್ಲಿ ನಡೆದು ಹೋಗುತ್ತಿದ್ದ ವ್ಯಕ್ತಿಗೆ ಮಚ್ಚು ತೋರಿಸಿ, ಹಣ ಕೇಳಿದ್ದಾರೆ. ಹಣ ಕೊಡದಿದ್ದರೆ ಮಚ್ಚಿನಿಂದ ಹಲ್ಲೆ ನಡೆಸುವುದಾಗಿ ಬೆದರಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ.

ಈ ವೇಳೆ ಸಮೀಪದಲ್ಲೇ ಇದ್ದ ಮತ್ತೊಬ್ಬ ವ್ಯಕ್ತಿ, ಆರೋಪಿಗಳ ಕೃತ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಲು ಯತ್ನಿಸಿದ್ದಾರೆ. ಇದನ್ನು ಗಮನಿಸಿದ ದುಷ್ಕರ್ಮಿಗಳು, ಆ ವ್ಯಕ್ತಿಯ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಲು ಯತ್ನಿಸಿದ್ದಾರೆ. ಆಗ ಆ ವ್ಯಕ್ತಿ 'ಪೊಲೀಸ್' ಎಂದು ಕೂಗುತ್ತಿದ್ದಂತೆ ಆರೋಪಿಗಳು ಪರಾರಿಯಾಗಿದ್ದಾರೆ.

ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದು, ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ಸಂಸದ್ ಕ್ರೀಡಾ ಮಹೋತ್ಸವಕ್ಕೆ ಸಚಿವೆ ಶೋಭಾ ಕರಂದ್ಲಾಜೆ ಚಾಲನೆ

'ಒಲಿಂಪಿಕ್ಸ್‌ನಲ್ಲಿ ಭಾರತ ಪದಕ ಗೆಲ್ಲಲಿ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕ್ರೀಡೆಯಲ್ಲೂ ಭಾರತ ಅತ್ಯುನ್ನತ ಸ್ಥಾನ ಪಡೆಯಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿ ಅವರ ಸಂಕಲ್ಪವಾಗಿದೆ. 2036ರಲ್ಲಿ ಭಾರತದಲ್ಲಿ ನಡೆಯುವ ಒಲಿಂಪಿಕ್ಸ್ ವೇಳೆಗೆ ಉತ್ತಮ ಕ್ರೀಡಾಪಟುಗಳನ್ನು ಬೆಳೆಸಲು ಪ್ರೋತ್ಸಾಹ ನೀಡಲಾಗುತ್ತಿದೆ' ಎಂದು ಕೇಂದ್ರ ಎಂಎಸ್‌ಎಂಇ, ಉದ್ಯೋಗ ಹಾಗೂ ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಬಾಗಲಗುಂಟೆಯ ಎಂಇಐ ಆಟದ ಮೈದಾನದಲ್ಲಿ ಆಯೋಜಿಸಿದ್ದ 'ಸಂಸದ್ ಕ್ರೀಡಾ ಮಹೋತ್ಸವ'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಮುಂದಿನ 10 ವರ್ಷಗಳಲ್ಲಿ ಯುವ ಪೀಳಿಗೆ ಓದಿನ ಜೊತೆಗೆ ಕ್ರೀಡಾಭ್ಯಾಸ ಮಾಡಿ ಉತ್ತಮ ಕ್ರೀಡಾಪಟುಗಳಾಗಲಿ ಎಂದು ಕೇಂದ್ರ ಸರ್ಕಾರ ಈ ಯೋಜನೆ ರೂಪಿಸಿದೆ. ಯುವ ಪೀಳಿಗೆ ವಿಶ್ವದಲ್ಲೇ ಉತ್ತಮ ಕ್ರೀಡಾಪಟುಗಳಾಗಿ ಬೆಳೆದು ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಗುರಿ ಹೊಂದಬೇಕು' ಎಂದರು.

ಈಗಾಗಲೇ ಆರು ವಿಧಾನಸಭಾ ಕ್ಷೇತ್ರದಲ್ಲಿ ಕ್ರೀಡಾ ಸ್ಪರ್ಧೆಗಳು ನಡೆದಿವೆ. ನ.23ರಂದು ಜಿಕೆವಿಕೆಯ ಸಭಾಂಗಣದಲ್ಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ನೀಡಲಾಗುವುದು ಎಂದು ತಿಳಿಸಿದರು. ಶಾಸಕ ಎಸ್. ಮುನಿರಾಜು ಮಾತನಾಡಿದರು.

ಇದೇ ವೇಳೆ ಹಗ್ಗ ಜಗ್ಗಾಟ, ಬುಗುರಿ, ಗೋಣಿಚೀಲ ಜಿಗಿತ, ಲಗೋರಿ, ಮ್ಯೂಸಿಕಲ್ ಚೇರ್, ಥ್ರೋ ಬಾಲ್, ವಾಲಿಬಾಲ್ ಮುಂತಾದ ಕ್ರೀಡೆಗಳು ನಡೆದವು. ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಚಿನ್ನ ಮತ್ತು ಕಂಚಿನ ಪದಕ ಪಡೆದ ವಿಜೇತರನ್ನು ಅಭಿನಂದಿಸಲಾಯಿತು.


'ಸಂಸದ್ ಕ್ರೀಡಾ ಮಹೋತ್ಸವ'ಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಮತ್ತು ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು

ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹರೀಶ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ, ಪಾಲಿಕೆ ಮಾಜಿ ಸದಸ್ಯೆ ಉಮಾದೇವಿ ನಾಗರಾಜು, ಸೂರಜ್ ಫೌಂಡೇಷನ್ ಅಧ್ಯಕ್ಷೆ ಸುಜಾತಾ ಮುನಿರಾಜು, ಮಂಡಲ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಮುಖಂಡರಾದ ಲಕ್ಷ್ಮೀ ವೆಂಕಟೇಶ್, ಭರತ್ ಸೌಂದರ್ಯ, ವಿನೋದ್ ಗೌಡ, ಬಿ.ಎಂ. ಚಿಕ್ಕಣ್ಣ, ಗುರುಪ್ರಸಾದ್, ಕವಿತಾ, ಬಿ.ಎಂ ನಾರಾಯಣ, ನಿಸರ್ಗ ಕೆಂಪರಾಜು ಉಪಸ್ಥಿತರಿದ್ದರು.

ಆರ್.ಆರ್.ಸಂಖ್ಯೆ ದುರುಪಯೋಗ: ಗ್ರಾ.ಪಂ. ಸದಸ್ಯ ಅನರ್ಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಖಾಸಗಿ ಜಮೀನಿನಲ್ಲಿ ಕೊರೆದಿರುವ ಕೊಳವೆಬಾವಿಗೆ ಗ್ರಾಮ ಪಂಚಾಯಿತಿಯ ಆರ್.ಆರ್.ಸಂಖ್ಯೆಯಡಿ (ಮೀಟರ್) ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿರುವುದು ಸಾಬೀತಾದ ಕಾರಣ ಕಣ್ಣೂರು ಗ್ರಾಮ ಪಂಚಾಯಿತಿ ಸದಸ್ಯ ದೊಡ್ಡಣ್ಣ ಅವರ ಸದಸ್ಯತ್ವವನ್ನು ರದ್ದುಪಡಿಸಲಾಗಿದೆ.


ದೊಡ್ಡಣ್ಣ

'ಹೊಸೂರುಬಂಡೆ ನಿವಾಸಿ ದೊಡ್ಡಣ್ಣ ಅವರು ತಮ್ಮ ಕೊಳವೆಬಾವಿಗೆ ಅನಧಿಕೃತವಾಗಿ ಗ್ರಾಮ ಪಂಚಾಯಿತಿಯ ಆರ್.ಆರ್. ಸಂಖ್ಯೆ 4667 ಬಳಸಿಕೊಂಡಿದ್ದಾರೆ. ಕೊಳವೆಬಾವಿ ನೀರನ್ನು ಟ್ರ್ಯಾಕ್ಟರ್ ಟ್ಯಾಂಕರ್ ಮೂಲಕ ಸರಬರಾಜು ಮಾಡಿ ಲಕ್ಷಾಂತರ ರೂಪಾಯಿ ಆದಾಯ ಗಳಿಸಿದ್ದಾರೆ' ಎಂದು ಆರೋಪಿಸಿ ಗ್ರಾಮ ಪಂಚಾಯಿತಿ ಸದಸ್ಯ ಎಸ್.ಜೆ.ಮಧು ಅವರು 2021ರಲ್ಲಿ ದೂರು ನೀಡಿದ್ದರು.

ಎಸಿಬಿ ತನಿಖೆ ನಡೆಸಿದ ವೇಳೆ ಅಕ್ರಮವಾಗಿ ಆರ್.ಆರ್.ಸಂಖ್ಯೆಯನ್ನು ಸ್ವಂತಕ್ಕೆ ಬಳಸಿಕೊಂಡಿದ್ದು, ಇದರಿಂದಾಗಿ ಗ್ರಾಮ ಪಂಚಾಯಿತಿಗೆ ಲಕ್ಷಾಂತರ ರೂಪಾಯಿ ವಿದ್ಯುತ್ ಬಿಲ್ ನಷ್ಟ ಉಂಟಾಗಿರುವುದು ಗೊತ್ತಾಗಿತ್ತು. ಹೀಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43-A ಅನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಡಿ.ರಂದೀಪ್ ಅವರು ಸದಸ್ಯತ್ವದಿಂದ ತೆಗೆದು ಹಾಕಿ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಆದೇಶಿಸಿದ್ದಾರೆ.



ಅಧ್ಯಕ್ಷ ಸ್ಥಾನ ನಾನೇಕೆ ತೊರೆಯಲಿ?: ಡಿಕೆಶಿ

ಮುಖ್ಯಮಂತ್ರಿಗೂ ಮುನ್ನವೇ ಖರ್ಗೆ ಭೇಟಿ ಮಾಡಿದ ಡಿಸಿಎಂ

ಪ್ರಜಾವಾಣಿ ವಾರ್ತೆ



ಶಿವಕುಮಾರ್

ನವದೆಹಲಿ: 'ನಾನು ಪಕ್ಷದ ಶಿಸ್ತಿನ ಸಿಪಾಯಿ. ಯಾವತ್ತೂ ಕಾಂಗ್ರೆಸ್ ಪಕ್ಷಕ್ಕೆ ಬ್ಲಾಕ್‌ಮೇಲ್ ಮಾಡುವವನಲ್ಲ. ನಾನು ಹಗಲು ರಾತ್ರಿ ದುಡಿದು ಪಕ್ಷ ಕಟ್ಟಿದ್ದೇನೆ. ಮುಂದೆಯೂ ಕಟ್ಟುತ್ತೇನೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾನುವಾರ ಇಲ್ಲಿ ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸುದ್ದಿ ಹರಿದಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನನ್ನ ಮಾನಸಿಕ, ದೈಹಿಕ ಹಾಗೂ ರಾಜಕೀಯ ಆರೋಗ್ಯ ಸರಿಯಾಗಿದೆ. ನಾನು ಖರ್ಗೆ ಸಾಹೇಬರನ್ನು ಭೇಟಿ ಮಾಡಿದ್ದೇನೆ. ಡಿಸೆಂಬರ್ ತಿಂಗಳ ಒಳಗಾಗಿ ನೂರು ಕಾಂಗ್ರೆಸ್ ಕಚೇರಿಗಳಿಗೆ ಶಂಕುಸ್ಥಾಪನೆ ಮಾಡಲೇಬೇಕಾಗಿದೆ. 'ಗಾಂಧಿ ಭಾರತ' ಎಂಬ ಪುಸ್ತಕ ರಚಿಸಿದ್ದೇನೆ. ಇದರ ಬಿಡುಗಡೆಗೆ ದಿನಾಂಕ ನಿಗದಿ ಮಾಡಬೇಕಾಗಿದೆ. ಸದ್ಯದಲ್ಲೇ ಸಂಸತ್ ಅಧಿವೇಶನ ಆರಂಭವಾಗಲಿದೆ. ಕಾಂಗ್ರೆಸ್ ಸಂಸ್ಥಾಪನಾ ದಿನ ಆಚರಣೆ ಮಾಡಬೇಕು. ಇವೆಲ್ಲವನ್ನು ಯಾರು ಮಾಡಬೇಕು? ನಾನೇ ಮಾಡಬೇಕು. ನಾನೇಕೆ ರಾಜೀನಾಮೆ ನೀಡಲಿ. ಈಗ ಅಂತಹ ಸಂದರ್ಭವಿಲ್ಲ' ಎಂದು ಸ್ಪಷ್ಟಪಡಿಸಿದರು.

'ಕಾಂಗ್ರೆಸ್ ಪಕ್ಷ ಎಲ್ಲಿಯವರೆಗೂ ಈ ಸ್ಥಾನದಲ್ಲಿ ಕೆಲಸ ಮಾಡಲು ಹೇಳುತ್ತದೆಯೋ ಅಲ್ಲಿಯವರೆಗೆ ನಾನು ಪಕ್ಷದ ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡಿಕೊಂಡು ಹೋಗುತ್ತೇನೆ. ಮುಂದೆಯೂ ಪಕ್ಷ ಅಧಿಕಾರಕ್ಕೆ ಬರುವಂತೆ ದುಡಿಯುವವನು ನಾನು' ಎಂದು ಅವರು ಪುನರುಚ್ಚರಿಸಿದರು.

ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚೆಯಾಗುತ್ತಿದೆ. ಖರ್ಗೆ ಅವರ ಭೇಟಿ ವೇಳೆ ಈ ಬಗ್ಗೆ ಚರ್ಚೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಅದೆಲ್ಲಾ ಮುಖ್ಯಮಂತ್ರಿಗಳಿಗೆ ಬಿಟ್ಟ ವಿಚಾರ. ಅವರು ಹೈಕಮಾಂಡ್ ಬಳಿ ಚರ್ಚೆ ಮಾಡುತ್ತಾರೆ. ನನ್ನನ್ನು ಕರೆದರೆ ನಾನು ಹೋಗುತ್ತೇನೆ. ನನ್ನ ಅಭಿಪ್ರಾಯ ತಿಳಿಸುತ್ತೇನೆ' ಎಂದರು.

'ನಾನು ಕೇವಲ ಪಕ್ಷದ ಕಚೇರಿಗಳ ಶಂಕುಸ್ಥಾಪನೆಗೆ ದಿನಾಂಕ ನಿಗದಿ ಮಾಡಲು ಹೋಗಿರುವೆ. ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಒಟ್ಟಾಗಿ ಶಂಕುಸ್ಥಾಪನೆ ಮಾಡಬೇಕು ಎಂಬುದು ನನ್ನ ಆಸೆ. ಡಿ. 1 ರಿಂದ ಸಂಸತ್ ಅಧಿವೇಶನ ಆರಂಭವಾಗಲಿದ್ದು, ಅಷ್ಟರೊಳಗೆ, ಯಾವುದಾದರೂ ವಾರಾಂತ್ಯದಲ್ಲಿ ಬಂದು ಹೋಗಿ ಎಂದು ಮನವಿ ಮಾಡಿದ್ದೇನೆ' ಎಂದು ತಿಳಿಸಿದರು.

'ಕಾಂಗ್ರೆಸ್ ಕಚೇರಿ ನಿರ್ಮಾಣದ ಕಟ್ಟಡ ನಕ್ಷೆ ಅನುಮೋದನೆಗೆ ನಾನು ₹2.30 ಕೋಟಿ ಪಾವತಿಸುತ್ತಿದ್ದೇನೆ. ಸಚಿವ ರಾಮಲಿಂಗಾರೆಡ್ಡಿ ಮುಂದಾಳತ್ವದಲ್ಲಿ ಒಂದು ಕಚೇರಿ ನಿರ್ಮಿಸಲಾಗುತ್ತಿದೆ. 75-80 ಕಡೆ ಕಚೇರಿ ನಿರ್ಮಾಣಕ್ಕೆ ಜಾಗ ಕೂಡ ಸಿದ್ಧವಾಗಿವೆ. ನೂರು ಕಚೇರಿ ನಿರ್ಮಿಸುತ್ತೇವೆ' ಎಂದರು.

'ಹೈಕಮಾಂಡ್ ತೀರ್ಮಾನಕ್ಕೆ ಕಾಯೋಣ'

ಬೆಂಗಳೂರು: 'ಸಂಪುಟ ಪುನರ್ ರಚನೆ, ಅಧಿಕಾರ ಹಂಚಿಕೆ ಎಲ್ಲವನ್ನು ತೀರ್ಮಾನಿಸುವುದು ಹೈಕಮಾಂಡ್. ಹೈಕಮಾಂಡ್ ತೀರ್ಮಾನಕ್ಕೆ ಕಾಯೋಣ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ತಿಳಿಸಿದರು.

ಸಂಪುಟ ಪುನರ್‌ರಚನೆಗೆ ಹೈಕಮಾಂಡ್ ಒಪ್ಪಿಗೆ ನೀಡಿದೆಯೆಂಬ ವರದಿಗಳ ಕುರಿತಂತೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಮಾಧ್ಯಮಗಳಲ್ಲಿ ನೋಡಿದ್ದೇನೆ. ಇದು ಮುಖ್ಯಮಂತ್ರಿ ಹಾಗೂ ಹೈಕಮಾಂಡ್ ನಾಯಕರಿಗೆ ಬಿಟ್ಟ ವಿಚಾರ' ಎಂದರು.

'ಹೈಕಮಾಂಡ್‌ನ ತೀರ್ಮಾನ, ಸಲಹೆಯನ್ನು ಡಿ.ಕೆ. ಶಿವಕುಮಾರ್ ಮಾತ್ರವಲ್ಲ, ಎಲ್ಲರೂ ಕೇಳುತ್ತಾರೆ. ಅದರಲ್ಲಿ ಯಾವುದೇ ಅನುಮಾನ ಬೇಡ. ಅಧ್ಯಕ್ಷ ಸ್ಥಾನದಲ್ಲೇ ಮುಂದುವರಿಯಬೇಕೆಂಬ ಆಸೆ ಶಿವಕುಮಾರ್ ಅವರಿಗಿಲ್ಲ. ಪಕ್ಷ ಹೇಳಿದಷ್ಟು ದಿನ ಅವರು ಅಧ್ಯಕ್ಷ ಸ್ಥಾನದಲ್ಲಿ ಇರುತ್ತಾರೆ' ಎಂದರು.

'ಸಂಪುಟ ಪುನರ್‌ರಚನೆಯಾದರೆ ನಾಯಕತ್ವ ಬದಲಾವಣೆ ಆಗುವುದಿಲ್ಲ ಎಂಬ ಚರ್ಚೆ ಇದೆಯಲ್ಲ' ಎಂದು ಕೇಳಿದಾಗ, 'ಏನೇ ಇದ್ದರೂ ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆಯೇ ಹೊರತು ಬೇರೆಯವರಲ್ಲ' ಎಂದರು.

ಯಾರ ಕ್ಲೇಮ್ ಏನಿದೆಯೋ ಗೊತ್ತಿಲ್ಲ: 'ಶಿವಕುಮಾರ್ ಅವರ ಕ್ಲೇಮ್ ಮೇಲೆ ಎಲ್ಲವೂ ನಿಂತಿದೆಯಲ್ಲವೇ' ಎಂದು ಕೇಳಿದಾಗ, 'ಇಲ್ಲಿ ಶಿವಕುಮಾರ್ ಒಬ್ಬರೇ ಕ್ಲೇಮ್ ಮಾಡುತ್ತಿಲ್ಲವಲ್ಲ. ಬಹಳಷ್ಟು ಜನರ ಕ್ಲೇಮ್ ಇದೆ. ಯಾರ ಕ್ಲೇಮ್ ಏನಿದೆಯೊ ಗೊತ್ತಿಲ್ಲವಲ್ಲ' ಎಂದರು.

'ಸಂಪುಟ ಪುನರ್‌ರಚನೆಯಾದರೆ ಮುಖ್ಯಮಂತ್ರಿ ಬದಲಾವಣೆ ಇಲ್ಲ' ಎಂಬ ಸಚಿವ ಜಿ. ಪರಮೇಶ್ವರ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಸಂಪುಟ ಪುನರ್‌ರಚನೆ ಮುಖ್ಯಮಂತ್ರಿಯವರ ಪರಮಾಧಿಕಾರ. ಹೈಕಮಾಂಡ್ ಅಪ್ಪಣೆಯೊಂದಿಗೆ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ವಿಚಾರದಲ್ಲಿ ಶಿವಕುಮಾರ್ ಅವರ ಬಳಿ ಹೈಕಮಾಂಡ್ ಚರ್ಚೆ ಮಾಡಿದರೆ, ಪಕ್ಷದ ಸಂಘಟನೆ ಹಾಗೂ ಬಲವರ್ಧನೆಗೆ ಅಗತ್ಯವಾದ ಸಲಹೆ ನೀಡುತ್ತಾರೆ' ಎಂದರು.

ಪ್ರಧಾನಿ ಭೇಟಿ: ಇಂದು ಸಿಎಂ ದೆಹಲಿಗೆ

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಮತ್ತೆ ದೆಹಲಿಗೆ ಬರಲಿದ್ದಾರೆ.

ಕಬ್ಬು ಬೆಳೆಗೆ ವೈಜ್ಞಾನಿಕ ದರ ನಿಗದಿ, ಬೆಳೆ ಹಾನಿ ಪರಿಹಾರ, ನೀರಾವರಿ ಯೋಜನೆಗಳಿಗೆ ಶೀಘ್ರ ಅನುಮೋದನೆ ನೀಡುವಂತೆ ಪ್ರಧಾನಿ ಅವರಿಗೆ ಮನವಿ ಸಲ್ಲಿಸಲಿದ್ದಾರೆ. ಮಧ್ಯಾಹ್ನ 1.30ಕ್ಕೆ ಇಲ್ಲಿಗೆ ಬರಲಿರುವ ಅವರು ಸಂಜೆ 5ಕ್ಕೆ ಮೋದಿ ಅವರನ್ನು ಭೇಟಿ ಮಾಡುವರು. ರಾತ್ರಿ 7ಕ್ಕೆ ಬೆಂಗಳೂರಿಗೆ ನಿರ್ಗಮಿಸಲಿದ್ದಾರೆ. ಸಚಿವ ಸಂಪುಟ ಪುನರ್ ರಚನೆ ಸೇರಿದಂತೆ ಕರ್ನಾಟಕದ ರಾಜಕೀಯ ವಿಷಯಗಳ ಬಗ್ಗೆ ಖರ್ಗೆ ಅವರೊಂದಿಗೆ ಸಮಾಲೋಚನೆ ನಡೆಸುವಂತೆ ಸಿದ್ದರಾಮಯ್ಯ ಅವರಿಗೆ ರಾಹುಲ್ ಗಾಂಧಿ ಸೂಚಿಸಿದ್ದಾರೆ. ಒಂದು ವೇಳೆ ಸಮಯಾವಕಾಶ ಸಿಕ್ಕರೆ ಖರ್ಗೆ ಅವರನ್ನು ಸಿದ್ದರಾಮಯ್ಯ ಸೋಮವಾರ ಭೇಟಿ ಮಾಡಲಿದ್ದಾರೆ.

ನಾಯಕತ್ವ ಬದಲಾವಣೆ ಇಲ್ಲ'



ಬೆಂಗಳೂರು: 'ಸಂಪುಟ ಪುನರ್‌ರಚನೆಗೆ ಹೈಕಮಾಂಡ್ ಒಪ್ಪಿಗೆ ನೀಡಿದರೆ ನಾಯಕತ್ವ ಬದಲಾವಣೆ ಆಗುವುದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ಗೆ ಎಲ್ಲಾ ವಿಚಾರ ಗೊತ್ತಿದೆ. ಸಂಪುಟ ಪುನರ್‌ರಚನೆಗೆ ಅನುಮತಿ ಸಿಕ್ಕಿದೆಯೆಂದು ಮಾಧ್ಯಮಗಳಲ್ಲಿ ನೋಡಿದ್ದೇನೆ. ಸಂಪುಟ ಪುನರ್ ರಚನೆಯಾದರೆ ಒಳ್ಳೆಯದೇ' ಎಂದರು.

'ಸಚಿವರಾಗಬೇಕೆಂಬ ಅಪೇಕ್ಷೆ ಹಲವು ಶಾಸಕರಿಗಿದೆ. ಸಂಪುಟ ಪುನರ್‌ರಚನೆಗೆ ಅನುಮತಿ ಕೊಟ್ಟಿದ್ದರೆ, ಮುಖ್ಯಮಂತ್ರಿ ಬದಲಾವಣೆ ವಿಚಾರವನ್ನು ನೀವೇ (ಮಾಧ್ಯಮಗಳು) ಊಹೆ ಮಾಡಿಕೊಳ್ಳಿ' ಎಂದರು.


ಸುದ್ದಿ 2 ನಿಮಿಷ

ಗೇರು ಕೃಷಿ ವಿಸ್ತರಣೆ: ಸಭೆಯಲ್ಲಿ ಚರ್ಚೆ- ಯು.ಟಿ. ಖಾದರ್

ಮಂಗಳೂರು: 'ಕರ್ನಾಟಕದಲ್ಲಿ ಗೇರು ಕೃಷಿಯನ್ನು ಹೆಚ್ಚಿನ ಪ್ರದೇಶಗಳಿಗೆ ವಿಸ್ತರಣೆ ಮಾಡುವ ವಿಚಾರವಾಗಿ ಸದ್ಯದಲ್ಲೇ ಸಭೆಯೊಂದನ್ನು ಕರೆದು ಚರ್ಚಿಸಲಾಗುವುದು' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಭಾನುವಾರ ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಸಂಸ್ಕರಣಾ ಉದ್ಯಮಕ್ಕೆ 100 ವರ್ಷ ತುಂಬಿದ ಸಲುವಾಗಿ ಕರ್ನಾಟಕ ಗೇರು ಉತ್ಪಾದಕರ ಸಂಘ ನಗರದಲ್ಲಿ ಏರ್ಪಡಿಸಿದ್ದ ಮೂರು ದಿನಗಳ 'ಗೋಡಂಬಿ ಶತಮಾನೋತ್ಸವ ಶೃಂಗ'ದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಗೇರು ಕೃಷಿಗೆ ಪುನಶ್ಚೇತನ ನೀಡಲು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಸೂಚಿಸಬೇಕು ಎಂಬ ಶಾಸಕ ವೇದವ್ಯಾಸ ಕಾಮತ್ ಅವರ ಕೋರಿಕೆಗೆ ಉತ್ತರಿಸಿದ ಅವರು, 'ಅರಣ್ಯ, ಕಂದಾಯ ಮತ್ತು ಕೃಷಿ ಇಲಾಖೆ ಅಧಿಕಾರಿಗಳ ಸಭೆಯನ್ನು ನಡೆಸಲಾಗುವುದು. ಗೇರು ಕೃಷಿಯನ್ನು ಯಾವ ಬಗೆಯಲ್ಲಿ ಬೆಳೆಸಬಹುದು ಎಂಬುದರ ಕುರಿತು ವರದಿ ಸಲ್ಲಿಸಲು ಸೂಚಿಸಲಾಗುವುದು. ಮುಂದಿನ ಬಜೆಟ್‌ನಲ್ಲಿ ಯೋಜನೆಯನ್ನು ಘೋಷಿಸುವಂತೆ ಮಾಡಲು ಪ್ರಯತ್ನಿಸಲಾಗುವುದು' ಎಂದು ಭರವಸೆ ನೀಡಿದರು.



ಶಾಸಕರಾದ ಮಂಜುನಾಥ ಭಂಡಾರಿ, ಗುರ್ಮೆ ಸುರೇಶ್ ಶೆಟ್ಟಿ, ಯಶ್‌ಪಾಲ್ ಸುವರ್ಣ, ಐವನ್ ಡಿಸೋಜ, ಕಿಶೋರ್ ಕುಮಾರ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮುಖ್ಯಕಾರ್ಯನಿರ್ಹವಣಾಧಿಕಾರಿ ಎಸ್.ಎಸ್ ಅನಿಲ್ ಕುಮಾರ್, ಕರ್ನಾಟಕ ಗೇರು ಉತ್ಪಾದಕರ ಸಂಘದ ಅಧ್ಯಕ್ಷ ಎಸ್.ಎ ರಾವ್, ಸಂಚಾಲಕ ಪ್ರಕಾಶ್ ಕಲ್ಬಾವಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿ ಅಧ್ಯಕ್ಷರಾಗಿ 2 ವರ್ಷ ಪೂರೈಸಿದ ವಿಜಯೇಂದ್ರ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಅವರು ಎರಡು ವರ್ಷ ಪೂರೈಸಿದ್ದಾರೆ.ಈ ಸಂಬಂಧ ಪಕ್ಷದ ಕಚೇರಿಯಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಬಿಜೆಪಿ ಹಿರಿಯ ನಾಯಕರು ಅವರನ್ನು ಅಭಿನಂದಿಸಿ ಗೌರವಿಸಿದರು.

'ವಿಜಯೇಂದ್ರ ಅವರು ಎರಡು ವರ್ಷಗಳಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಿ, ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ತಳಮಟ್ಟದಿಂದ ಪಕ್ಷದ ಸಂಘಟನೆಯನ್ನು ಬಲಪಡಿಸಲು ಶ್ರಮಿಸಿದ್ದಾರೆ' ಎಂದು ಪಕ್ಷದ ನಾಯಕರು ಸ್ಮರಿಸಿದರು.

'ಮೈಸೂರು ಮುಡಾ ಹಗಣದ ಪಾದಯಾತ್ರೆ, ವಾಲ್ಮೀಕಿ ಹಗರಣ ಕುರಿತ ಹೋರಾಟ, ಬೆಲೆ ಏರಿಕೆ ವಿರೋಧಿಸಿ ಅಹೋರಾತ್ರಿ ಧರಣಿ, ಬೆಲೆ ಏರಿಕೆ ವಿರುದ್ಧ ರಾಜ್ಯದಾದ್ಯಂತ ಜನಾಕ್ರೋಶ ಯಾತ್ರೆ, ಕಬ್ಬು ಬೆಳೆಗಾರರ ಹೋರಾಟ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನ ದುರ್ಬಳಕೆ ವಿರುದ್ಧ ಹೋರಾಟವೂ ಸೇರಿ ಹಲವು ಜನಪರ ಹೋರಾಟಗಳ ನೇತೃತ್ವವಹಿಸಿದ್ದರು' ಎಂದು ಬಿಜೆಪಿ ನಾಯಕರು ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸಂಸದರಾದ ಬಸವರಾಜ ಬೊಮ್ಮಾಯಿ ಮತ್ತು ಗೋವಿಂದ ಕಾರಜೋಳ, ಪ್ರಮುಖ ನಾಯಕರ ಸಮಿತಿ ಸದಸ್ಯರಾದ ಬಿ.ಶ್ರೀರಾಮುಲು, ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತರ ದೊಡ್ಡನಗೌಡ ಪಾಟೀಲ, ರೈತ ಮೋರ್ಚಾ ಅಧ್ಯಕ್ಷ ಎ.ಎಸ್.ಪಾಟೀಲ ನಡಹಳ್ಳಿ ಮತ್ತು ಇತರರು ಇದ್ದರು.

ಚಿಟಿಕೆ ಸುದ್ದಿ

ಬಾಗಿಲು ತೆರೆದ ಶಬರಿಮಲೆ ದೇಗುಲ



ಪತ್ತನಂತಿಟ್ಟ (ಪಿಟಿಐ): ವಾರ್ಷಿಕ ಮಂಡಲಂ– ಮಕರವಿಳಕ್ಕು ತೀರ್ಥಯಾತ್ರೆಯ ಋತುವಿನ ಪೂರ್ವಭಾವಿಯಾಗಿ ಶಬರಿಮಲೆಯ ಅಯ್ಯಪ್ಪ ದೇವಾಲಯವನ್ನು ಭಾನುವಾರ ಸಂಜೆ ತೆರೆಯಲಾಯಿತು.

ಎರಡು ತಿಂಗಳಿಗೂ ಹೆಚ್ಚು ಕಾಲ ನಡೆಯುವ ತೀರ್ಥಯಾತ್ರೆಯು ವೃಶ್ಚಿಕದ ಮಲಯಾಳಂ ಮಾಸದ ಮೊದಲ ದಿನವಾದ ಸೋಮವಾರದಂದು ಪ್ರಾರಂಭವಾಗುತ್ತದೆ.

ದೇಗುಲವನ್ನು ತೆರೆದಾಕ್ಷಣ ಪೂಜೆ ಸಲ್ಲಿಸಲು ನೂರಾರು ಭಕ್ತರು ಧಾವಿಸಿದ್ದರಿಂದ ಸನ್ನಿಧಾನ (ದೇವಾಲಯ ಸಂಕೀರ್ಣ), ಚಾರಣ ಮಾರ್ಗಗಳು ಮತ್ತು ಮೂಲ ಶಿಬಿರಗಳಲ್ಲಿ ಭಾನುವಾರ ಭಾರೀ ಜನದಟ್ಟಣೆ ಕಂಡುಬಂತು

'ಬಿಹಾರ: ಮತಪ್ರಮಾಣ ಬಗ್ಗೆ ಅನುಮಾನ'



ಪ್ರಿಯಾಂಕ್ ಖರ್ಗೆ

ಕಲಬುರಗಿ: 'ಮತದಾರರನ್ನು ಬಿಹಾರದಿಂದ ಕರೆಸುತ್ತಾರೆಯೇ? ರಾಜಕೀಯದಲ್ಲಿ ಗೆಲುವು–ಸೋಲು ಸಾಮಾನ್ಯ. ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಇಷ್ಟೊಂದು ಆಡಳಿತ ವಿರೋಧಿ ಅಲೆ ಇದ್ದಾಗಲೂ ಅವರು ಪಡೆದ ಮತಪ್ರಮಾಣದ ಬಗ್ಗೆ ಅನುಮಾನವಿದೆ. ದತ್ತಾಂಶ ಹೊರಗೆ ಬರಲಿ ನೋಡೋಣ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ 'ಬಿಹಾರ ಫಲಿತಾಂಶ ಕರ್ನಾಟಕದಲ್ಲೂ ಪರಿಣಾಮ ಬೀರಲಿದೆಯಾ' ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರಿಯಾಂಕ್ ಈ ರೀತಿ ಉತ್ತರಿಸಿದರು.

'ಇಲ್ಲೇ ಆಳಂದ ಹಾಗೂ ಮಹದೇವಪುರದಲ್ಲಿ ಏನು ನಡೆದಿದೆ ಎನ್ನುವುದನ್ನು ದಾಖಲೆ ಸಮೇತ ಕೊಡುತ್ತೇವೆ. ಚುನಾವಣೆ ಆಯೋಗದ ಪಾತ್ರ ಏನಿದೆ ಗೊತ್ತಾಗಲಿದೆ ಎಂದರು.

ಕರ್ಕಿ ಕಾವ್ಯ ಪ್ರಶಸ್ತಿ

ಪ್ರಜಾವಾಣಿ ಚಿತ್ರ



ಡಾ. ಡಿ.ಎಸ್. ಕರ್ಕಿ ಸಾಹಿತ್ಯ ವೇದಿಕೆ ಟ್ರಸ್ಟ್, ಜಗದೀಶ ಶೆಟ್ಟರ್ ದತ್ತಿ ವತಿಯಿಂದ ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕವಿಗಳಾದ ಸಂತೋಷ ಅಂಗಡಿ ಮತ್ತು ರಾಮಚಂದ್ರ ಕುಲಕರ್ಣಿ ಅವರಿಗೆ 'ಡಾ. ಡಿ.ಎಸ್. ಕರ್ಕಿ ಕಾವ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ವೇದಿಕೆ ಅಧ್ಯಕ್ಷ ಎಂ.ಎ. ಸುಬ್ರಹ್ಮಣ್ಯ, ಸಂಸದ ಜಗದೀಶ ಶೆಟ್ಟರ್, ಕವಿಗಳಾದ ಸತೀಶ ಕುಲಕರ್ಣಿ, ಚಂದ್ರಶೇಖರ ವಸ್ತ್ರದ, ಜಯಂತ ಕಾಯ್ಕಿಣಿ, ಸಂತೋಷ ಕರ್ಕಿ ಮತ್ತು ಉದಯ ರೇವಣಕರ ಪಾಲ್ಗೊಂಡಿದ್ದರು

ಸ್ವಯಂ ಸೇವಕರ ಸಮರ್ಪಣೆಯೇ ಸಂಘದ ಶಕ್ತಿ: ಮೋಹನ್ ಭಾಗವತ್

ಜೈಪುರ (ಪಿಟಿಐ): 'ಸ್ವಯಂಸೇವಕರ ಸಮರ್ಪಣೆ ಮತ್ತು ತ್ಯಾಗವೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಶಕ್ತಿ. ಇಲ್ಲಿ ಪ್ರತಿಯೊಬ್ಬ ಸ್ವಯಂಸೇವಕನೂ ಮಾನಸಿಕವಾಗಿ ಮತ್ತು ಸ್ವಾಭಾವಿಕವಾಗಿ ಪ್ರಚಾರಕನಾಗಿ ಕೆಲಸ ಮಾಡುತ್ತಾನೆ' ಎಂದು ಸರಸಂಘ ಚಾಲಕ ಮೋಹನ್ ಭಾಗವತ್ ಹೇಳಿದರು.

'ಔರ್ ಯಾ ಜೀವನ್ ಸಂಪ್ರೀತ್' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು, 'ರಾಜಸ್ಥಾನದ 24 ಮಂದಿ ದಿವಂಗತ ಪ್ರಚಾರಕರ ಜೀವನ ಪಯಣದ ಕಥಾಹಂದರವನ್ನು ಈ ಪುಸ್ತಕವು ಒಳಗೊಂಡಿದೆ' ಎಂದರು.

'ಸಂಘದ ವ್ಯಾಪ್ತಿ ವಿಸ್ತರಣೆ ಮತ್ತು ಕಾರ್ಯವಿಧಾನದಲ್ಲಿ ಸುಧಾರಣೆಗಳಾದರೂ ಅದರ ಮೂಲಭೂತ ಆಶಯವು ಬದಲಾಗದೆ ಹಾಗೆಯೇ ಉಳಿಯಲಿದೆ' ಎಂದು ಹೇಳಿದರು.

'ಇಂದು ಸಂಘವು ಬೆಳೆದಿದೆ. ಆದರೆ ಅದರದ್ದೇ ಆದ ಸವಾಲುಗಳನ್ನು ಎದುರಿಸುತ್ತಿದೆ. ವಿರೋಧ, ನಿರ್ಲಕ್ಷ್ಯ ಎದುರಿಸುತ್ತಿದ್ದ ಸಮಯದಲ್ಲಿ ಇದ್ದಂತೆಯೇ ನಾವು ಇರಬೇಕು. ಆ ಉತ್ಸಾಹ, ಚೈತನ್ಯವೇ ಸಂಘವನ್ನು ಮುಂದಕ್ಕೆ ಕೊಂಡೊಯ್ಯಲಿದೆ' ಎಂದು ಅಭಿಪ್ರಾಯಪಟ್ಟರು.

'ದೂರದಿಂದ ಆರ್‌ಎಸ್‌ಎಸ್ ಏನೆಂದು ಅರ್ಥವಾಗುವುದಿಲ್ಲ. ಹಲವರು ಸ್ಪರ್ಧೆಗಿಳಿದು ಆರ್‌ಎಸ್‌ಎಸ್ ರೀತಿಯ ಶಾಖೆಗಳನ್ನು ತೆರೆದರು. ಯಾರಿಗೂ 15 ದಿನಕ್ಕಿಂತ ಹೆಚ್ಚು ದಿನ ನಡೆಸಲಾಗಲಿಲ್ಲ. ನಮ್ಮ ಶಾಖೆಗಳು 100 ವರ್ಷಗಳಿಂದ ನಡೆಯುತ್ತಿವೆ ಮತ್ತು ಈಗಲೂ ಬೆಳೆಯುತ್ತಿವೆ' ಎಂದು ಹೇಳಿದರು.

ನಕಲಿ ಪತ್ರ ನೀಡಿದ್ದ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲು

ವಿಶೇಷ ಅನುದಾನ: ₹50 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ₹5 ಕೋಟಿ ಕೊಡಿಸುವುದಾಗಿ ಹೇಳಿ ₹50 ಲಕ್ಷ ಪಡೆದು ವಂಚಿಸಿರುವ ಆರೋಪದಡಿ ಅನ್ನಪೂರ್ಣೇಶ್ವರಿ ನಗರದ ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನಾಗರಬಾವಿ ನಿವಾಸಿ ವೆಂಕಟೇಶ್ ಬಾಬು ಅವರ ದೂರು ಆಧರಿಸಿ ಹರೀಶ್ ಹಾಗೂ ಸಂದೀಪ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

2024ರ ಅಕ್ಟೋಬರ್ ತಿಂಗಳಲ್ಲಿ ದೂರುದಾರ ಮನೆಗೆ ಹೋಗಿದ್ದ ಆರೋಪಿ ಹರೀಶ್, ಸರ್ಕಾರದ ಪ್ರಧಾನ ಕಾರ್ಯದರ್ಶಿ ಅವರ ಆಪ್ತ ಸಂದೀಪ್ ಎಂಬುವರ ಪರಿಚಯ ಇದೆ. ಶಾಸಕರ ಶಿಫಾರಸು ಪತ್ರದ ಆಧಾರದ ಮೇಲೆ ಸಿ.ಎಂ. ವಿಶೇಷ ಅನುದಾನದಲ್ಲಿ ₹5 ಕೋಟಿ ಬಿಡುಗಡೆ ಮಾಡಿಸಿಕೊಡಲಾಗುವುದು. ಅದಕ್ಕೆ ಶೇಕಡ 10ರಂತೆ ₹50 ಲಕ್ಷ ಕಮಿಷನ್ ನೀಡಬೇಕೆಂದು ಹೇಳಿದ್ದಾರೆ.

2024ರ ನವೆಂಬರ್‌ನಲ್ಲಿ ವೆಂಕಟೇಶ್ ಅವರಿಂದ ಆರೋಪಿಗಳು ₹25 ಲಕ್ಷ ಪಡೆದಿದ್ದಾರೆ. 2025ರ ಮಾರ್ಚ್‌ನಲ್ಲಿ ಪತ್ರ ಬಿಡುಗಡೆ ಹೆಸರಿನಲ್ಲಿ ಬಾಕಿ ಇದ್ದ ₹25 ಲಕ್ಷ ಹಣವನ್ನು ಸಹ ಸಂದೀಪ್, ಸರ್ಕಾರಿ ವಾಹನದಲ್ಲಿ ಡಬ್ಬಲ್ ರಸ್ತೆಯ ವಿಲ್ಸನ್ ಗಾರ್ಡನ್ ಬಸ್ ಡಿಪೋ ಹತ್ತಿರ ಬಂದು ಪಡೆದುಕೊಂಡು ಹೋಗಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಆರು ತಿಂಗಳ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂರು ಪತ್ರಗಳನ್ನು ನೀಡಿದ್ದಾರೆ.

ವಿಶೇಷ ಅನುದಾನ ಬಿಡುಗಡೆ ಮಾಡಿಸದೇ ಪ್ರತಿ ಬಾರಿ ಸಬೂಬು ಹೇಳುತ್ತಿದ್ದ ಪರಿಣಾಮ ಸೆಪ್ಟಂಬರ್ 19ರಂದು ವೆಂಕಟೇಶ್ ಅವರು ಆರ್‌ಡಿಪಿಆರ್ ಕಚೇರಿಗೆ ಹೋಗಿ ವಿಚಾರಿಸಿದಾಗ ಆರೋಪಿಗಳು ನೀಡಿರುವುದು ನಕಲಿ ಪತ್ರ ಎಂಬುದು ಗೊತ್ತಾಗಿದೆ. ಪ್ರಧಾನ ಕಾರ್ಯದರ್ಶಿ ಹೆಸರಿನಲ್ಲಿ ₹50 ಲಕ್ಷ ವಂಚನೆ ಮಾಡಿರುವ ಇಬ್ಬರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ದೂರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಎನ್‌ಆರ್‌ಐ ಕೋಟಾ ಕೈಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳಲ್ಲಿ ಶೇ15ರಷ್ಟನ್ನು ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೋಟಾ ಎಂದು ನಿಗದಿ ಮಾಡಿರುವ ನಿರ್ಧಾರವನ್ನು ರಾಜ್ಯ ಸರ್ಕಾರವು ಕೂಡಲೇ ಹಿಂಪಡೆಯಬೇಕು ಎಂಬ ಒತ್ತಾಯ ಎಐಡಿಎಸ್‌ಒ ವಿದ್ಯಾರ್ಥಿ ಸಮಾವೇಶದಲ್ಲಿ ವ್ಯಕ್ತವಾಯಿತು.

ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಸಮಾವೇಶದಲ್ಲಿ ಭಾಗಿಯಾಗಿದ್ದ ಎಲ್ಲರೂ, ಶೇ15ರಷ್ಟು ಎನ್‌ಆರ್‌ಐ ನೀತಿಯು ಬಡ ಕುಟುಂಬದ ವಿದ್ಯಾರ್ಥಿಗಳ ಓದುವ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು. ಈ ನೀತಿಯ ವಿರುದ್ಧ ಹೋರಾಟ ಸಂಘಟಿಸುವ ನಿರ್ಣಯವನ್ನು ಸಮಾವೇಶದಲ್ಲಿ ತೆಗೆದುಕೊಳ್ಳಲಾಯಿತು.

ಭಾರತೀಯ ವೈದ್ಯಕೀಯ ಸಂಘಟನೆಯ ಕರ್ನಾಟಕ ವೃತ್ತಪರರ ರಕ್ಷಣಾ ಕಾರ್ಯಕ್ರಮದ ಅಧ್ಯಕ್ಷ ಡಾ.ಮಧುಸೂದನ ಕರಿಗನೂರು, 'ಸರ್ಕಾರದ ಈ ನಡೆಯಿಂದ ವೈದ್ಯಕೀಯ ಸೀಟುಗಳ ಶುಲ್ಕ ₹25 ಲಕ್ಷದಷ್ಟಾಗುತ್ತದೆ. ಇದರಿಂದ ವೈದ್ಯಕೀಯ ಶಿಕ್ಷಣ ಇನ್ನಷ್ಟು ವ್ಯಾಪಾರೀಕರಣ ಆಗಲಿದೆ. ಅಷ್ಟು ದುಡ್ಡು ಕೊಟ್ಟು ವೈದ್ಯಕೀಯ ಪದವಿ ಪಡೆದವರು, ಜನರ ಸೇವೆ ಮಾಡುತ್ತಾರೆ ಎಂದು ನಿರೀಕ್ಷಿಸಲಾಗುವುದೇ' ಎಂದು ಪ್ರಶ್ನಿಸಿದರು.

ಎಐಡಿಎಸ್‌ಒ ಅಖಿಲ ಭಾರತ ಉಪಾಧ್ಯಕ್ಷ ಮೃದುಲ್ ಸರ್ಕಾರ್, 'ಪಶ್ಚಿಮ ಬಂಗಾಳದಲ್ಲಿ ಇದೇ ನೀತಿ ಜಾರಿಗೆ ಯತ್ನಿಸಿದಾಗ, ವಿದ್ಯಾರ್ಥಿ ಸಂಘಟನೆಗಳ ಹೋರಾಟದ ಫಲವಾಗಿ ಅದನ್ನು ಕೈಬಿಡಲಾಗಿತ್ತು. ಪರಿಣಾಮವಾಗಿ ಅದು ಜಾರಿಯಾಗಲಿಲ್ಲ. ಆದರೆ, ಈಗ ಸರ್ಕಾರ ಮತ್ತೆ ಎನ್‌ಆರ್‌ಐ ಕೋಟಾ ನೀತಿ ಜಾರಿಗೆ ತರುತ್ತಿದೆ. ಇದರ ವಿರುದ್ಧ ತೀವ್ರ ಹೋರಾಟ ನಡೆಸಬೇಕಿದೆ' ಎಂದರು.

ಪವನ ವಿದ್ಯುತ್ ಕಂಪನಿಗಳಿಗೆ ದಂಡ

ಪ್ರಜಾವಾಣಿ ವಾರ್ತೆ



548 ಎಕರೆ	112 ಎಕರೆ	₹40 ಕೋಟಿ	₹10 ಕೋಟಿ
ಅನುಮತಿ ಪಡೆದಿದ್ದು	ಹೆಚ್ಚುವರಿ ಬಳಕೆ	ದಂಡದ ಪ್ರಮಾಣ	ವಸೂಲಿಯಾಗಿರುವುದು

ಬೆಂಗಳೂರು: ಚಿತ್ರದುರ್ಗದ ಜೋಗಿ ಮಟ್ಟಿ ಹಾಗೂ ಮಾರಿಕಣಿವೆ ಮೀಸಲು ಅರಣ್ಯ ಪ್ರದೇಶದಲ್ಲಿ ಪವನ ವಿದ್ಯುತ್ ಘಟಕ ಸ್ಥಾಪನೆಗೆ ನಿಯಮ ಉಲ್ಲಂಘಿಸಿ ಹೆಚ್ಚುವರಿ ಭೂಮಿ ಬಳಸಿರುವ ಪ್ರಕರಣದಲ್ಲಿ ಖಾಸಗಿ ವಿದ್ಯುತ್ ಕಂಪನಿಗಳಿಂದ ಕರ್ನಾಟಕ ಅರಣ್ಯ ಇಲಾಖೆ ದಂಡ ವಸೂಲಿ ಪ್ರಕ್ರಿಯೆ ಆರಂಭಿಸಿದೆ.

ದಂಡ ವಸೂಲಿ ಮಾಡುವಂತೆ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಿದ ಬೆನ್ನಲ್ಲೇ ವಸೂಲಿ ಪ್ರಕ್ರಿಯೆಗೆ ಚಾಲನೆ ನೀಡಿದೆ.

ಬೆಟ್ಟ–ಗುಡ್ಡಗಳ ಸಾಲು ಇರುವ ರಾಜ್ಯದ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಪವನ ವಿದ್ಯುತ್ ಉತ್ಪಾದನೆಗೆ ಅನುಮತಿ ನೀಡಲಾಗಿದ್ದು, ದಶಕಗಳಿಂದ ಬಹುತೇಕ ಕಡೆಗಳಲ್ಲಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ಗುಡ್ಡದ ಪ್ರದೇಶಗಳಲ್ಲಿ ಕೆಲ ಭೂಮಿ ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದರಿಂದ ಅದಕ್ಕೆ ಇಲಾಖೆ ಅನುಮತಿ ಬೇಕು. ಅದರಲ್ಲೂ ಮೀಸಲು ಅರಣ್ಯವಾಗಿದ್ದರೆ ಕಡ್ಡಾಯವಾಗಿ ನಿಗದಿತ ಪ್ರದೇಶದಲ್ಲಿಯೇ ಪವನ ಯಂತ್ರಗಳನ್ನು ಅಳವಡಿಸಬೇಕು ಎನ್ನುವ ನಿಯಮಾವಳಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಕೆಲ ಯೋಜನೆ ಆರಂಭಗೊಂಡು ವಿಸ್ತರಣೆ ವೇಳೆ ಹೆಚ್ಚುವರಿ ಅರಣ್ಯ ಭೂಮಿ ಬಳಸಿ ವಿದ್ಯುತ್ ಉತ್ಪಾದಿಸುತ್ತಿರುವುದು ಪತ್ತೆಯಾಗಿತ್ತು.

ಎಲ್ಲೆಲ್ಲಿ ಉಲ್ಲಂಘನೆ: ಚಿತ್ರದುರ್ಗ ಜಿಲ್ಲೆಯ ಎರಡು ಕಡೆ ಮೀಸಲು ಅರಣ್ಯ ಪ್ರದೇಶದಲ್ಲಿ ಅನುಮತಿ ನೀಡಿದ್ದಕ್ಕಿಂತ ಹೆಚ್ಚುವರಿ ಅರಣ್ಯ ಪ್ರದೇಶವನ್ನು ಪವನ ವಿದ್ಯುತ್ ಘಟಕಗಳಿಗೆ ಬಳಕೆ ಮಾಡಿಕೊಳ್ಳಲಾಗಿತ್ತು. ಪವನ ವಿದ್ಯುತ್ ಘಟಕಗಳ ಸ್ಥಳ ಪರಿಶೀಲನೆ ನಡೆಸಿದಾಗ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚುವರಿ ಅರಣ್ಯ ಬಳಕೆಯಾಗಿರುವುದು ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ವೈಪರಿತ್ಯ ಸಚಿವಾಲಯದ ತಜ್ಞರ ತಂಡದ ಗಮನಕ್ಕೆ ಬಂದಿತ್ತು.

'ಜೋಗಿಮಟ್ಟಿ ಹಾಗೂ ಮಾರಿಕಣಿವೆ ಭಾಗದಲ್ಲಿ 548.07 ಎಕರೆ ಅರಣ್ಯ ಪ್ರದೇಶವನ್ನು ಪವನ ವಿದ್ಯುತ್ ಘಟಕಕ್ಕೆ ಬಳಸಲು ಎನರ್ ಕಾನ್ ಸಂಸ್ಥೆಗೆ ಅನುಮತಿ ನೀಡಿತ್ತು. ಆನಂತರ ಈ ಯೋಜನೆ ವಿಂಡ್ ವರ್ಲ್ಡ್ ಲಿಮಿಟೆಡ್ ಸಂಸ್ಥೆ ಪಡೆದುಕೊಂಡಿತ್ತು. ಆರು ಕಂಪೆನಿಗಳ ಹತ್ತು ಯೋಜನೆಗಳಲ್ಲಿಯೂ ಈ ರೀತಿ 112 ಎಕರೆ ಅರಣ್ಯ ಭೂಮಿಯನ್ನು ಹೆಚ್ಚುವರಿಯಾಗಿ ಬಳಕೆ ಮಾಡಿಕೊಂಡಿರುವುದು ಕಂಡು ಬಂದು ನಂತರ ನೋಟಿಸ್ ನೀಡಲಾಗಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ತಜ್ಞರ ಸಮಿತಿ ಸೂಚನೆ: ಅರಣ್ಯ ಭೂಮಿ ಬಳಕೆ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಬೇಕು ಎಂದು ವಿಸ್ತೃತವಾಗಿ ಸಮಿತಿ ಚರ್ಚಿಸಿತ್ತು. ಈ ರೀತಿ ನಿಗದಿತ ಪ್ರದೇಶಕ್ಕಿಂತ ಹೆಚ್ಚಿನ ಅರಣ್ಯ ಭೂಮಿ ಪಡೆಯುವುದು ಸ್ಪಷ್ಟ ನಿಯಮ ಉಲ್ಲಂಘನೆ. ಆದರೆ, ಭೂಮಿ ಬಳಕೆ ಮಾಡಿಕೊಂಡಿರುವುದರಿಂದ ದಂಡ ವಿಧಿಸಬೇಕು ಎಂದು ಕರ್ನಾಟಕ ಅರಣ್ಯಪಡೆಗಳ ಮುಖ್ಯಸ್ಥರಿಗೆ ಸಚಿವಾಲಯವು ಪತ್ರ ಬರೆದು ಸೂಚಿಸಿತ್ತು.

ಕಳೆದ ವರ್ಷವೇ ಅರಣ್ಯ ಪಡೆಗಳ ಮುಖ್ಯಸ್ಥರು ದಂಡ ವಸೂಲಿಗೆ ಚಿತ್ರದುರ್ಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ನಿರ್ದೇಶನ ನೀಡಿದ್ದರು. ಹೆಚ್ಚುವರಿ ಭೂಮಿ ಬಳಸಿ ನಿಯಮ ಉಲ್ಲಂಘಿಸಿದ್ದ ಸಂಸ್ಥೆಗಳು ದಂಡವನ್ನು ನಾಲ್ಕೈದು ವರ್ಷವಾದರೂ ಪಾವತಿಸಿರಲಿಲ್ಲ. ಯೋಜನೆ ರದ್ದುಪಡಿಸುವ ನೋಟಿಸ್ ಅನ್ನು ಜಾರಿಗೊಳಿಸಿತ್ತು. ಸಂಸ್ಥೆಗಳು ದಂಡ ಪಾವತಿಸದೇ ಇದ್ದರೆ ಹೆಚ್ಚುವರಿ ಶೇ 100ರಷ್ಟು ದಂಡ ವಿಧಿಸುವ ಎಚ್ಚರಿಕೆಯನ್ನು ನೀಡಲಾಗಿತ್ತು. ಬಳಿಕ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮದ ಎಚ್ಚರಿಕೆ ನೀಡಿದ ನಂತರ ಈಗ ವಸೂಲಿ ಪ್ರಕ್ರಿಯೆ ಚುರುಕುಗೊಂಡಿದೆ.

'ಅರಣ್ಯ ವಿಲೇವಾರಿ ವಿಭಾಗವು ದಂಡದ ಮೊತ್ತವನ್ನು ನಿಗದಿಪಡಿಸಿ ಪಾವತಿಸಲು ಸೂಚಿಸಿತ್ತು. ಅಲ್ಲದೇ ಹೆಚ್ಚುವರಿ ದಂಡದ ಎಚ್ಚರಿಕೆ ನೀಡಿದ ನಂತರ ಈಗ ₹10 ಕೋಟಿಯಷ್ಟು ದಂಡ ವಸೂಲಿಯಾಗಿದೆ. ಉಳಿದ ದಂಡದ ಬಾಕಿ ವಸೂಲಿಯನ್ನು ಒಂದೆರಡು ತಿಂಗಳಲ್ಲಿ ಮಾಡಲಾಗುವುದು' ಎಂದು ಚಿತ್ರದುರ್ಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋಪ್ಯಾನಾಯಕ್ ತಿಳಿಸಿದರು.

ದಂಡದ ಪ್ರಮಾಣ ಹೇಗೆ

ಅರಣ್ಯ ಭೂಮಿಯನ್ನು ಸರ್ಕಾರದ ಅನುಮತಿ ಪಡೆದು ವಾಣಿಜ್ಯ ಉದ್ದೇಶಗಳಿಗೆ ಬಳಸಿದ್ದರೆ ಭೂಮಿಯ ಒಟ್ಟು ಮೌಲ್ಯದ (ಎನ್‌ಪಿವಿ) ಮೇಲೆ ದಂಡದ ಪ್ರಮಾಣವನ್ನು ನಿಗದಿ ಮಾಡಲಾಗುತ್ತದೆ. ಅರಣ್ಯದ ಮಹತ್ವ, ಬಳಕೆ ಭೂಮಿ ಆಧರಿಸಿ ದಂಡ ನಿಗದಿಯಾಗಲಿದೆ. ಕೇಂದ್ರ ಪರಿಸರ, ಅರಣ್ಯ, ಹವಾಮಾನ ವೈಪರಿತ್ಯ ಸಚಿವಾಲಯದ ಸಮಿತಿ ಇದೇ ಮಾರ್ಗಸೂಚಿ ಅಡಿ ದಂಡ ವಿಧಿಸುವಂತೆ ಸೂಚಿಸಿತ್ತು.

'ಎಸ್‌ಐಆರ್; ಸಂವಿಧಾನ ಆಶಯ ವಿರೋಧಿ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಎಸ್‌ಐಆರ್ (ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ) ಮೂಲಕ ಸಾಧ್ಯವಾದಷ್ಟು ಮತದಾರರನ್ನು ಹೊರಗಿಡಲಾಗುತ್ತಿದೆ. ಎಸ್‌ಐಆರ್ ಜ್ಞಾನ, ಸಂಪತ್ತು ಶಿಕ್ಷಣ, ಆಸ್ತಿ ಇದ್ದವರಿಗೆ ಮಾತ್ರ ವೋಟಿನ ಹಕ್ಕು ನೀಡುವ ಹುನ್ನಾರ' ಎಂದು ಚಿಂತಕ ಶಿವಸುಂದರ್ ಹೇಳಿದರು.

ಎದ್ದೇಳು ಕರ್ನಾಟಕ, ಮುಸ್ಲಿಂ ಮುತ್ತಹದೇ ಮಹಾಜ್ ಹಾಗೂ ನಮ್ಮ ಓಟು ನಮ್ಮ ಹಕ್ಕು ಅಭಿಯಾನದ ವತಿಯಿಂದ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಭಾನುವಾರ ನಡೆದ ಎಸ್‌ಐಆರ್ ವಿರೋಧಿ ಮಂಥನಾ ಸಮಾವೇಶದಲ್ಲಿ ಮಾತನಾಡಿದರು.

'ಎಸ್‌ಐಆರ್‌ನಲ್ಲಿ ದಾಖಲೆ (ಆಯೋಗದವರು ಹೇಳಿದ 11 ದಾಖಲೆ) ನೀಡಿ ಮತದಾರ ಎಂದು ಸಾಬೀತು ಮಾಡಿಕೊಳ್ಳಬೇಕಾಗಿದೆ. ಎಸ್‌ಐಆರ್‌ನಲ್ಲಿ ನರೇಗಾ ಕಾರ್ಡ್, ರೇಷನ್ ಕಾರ್ಡ್ ಮೊದಲಾದ ದಾಖಲೆಗಳನ್ನು ಪರಿಗಣಿಸಲ್ಲ. ಎಸ್‌ಐಆರ್‌ನಲ್ಲಿ ಪಾರದರ್ಶಕತೆ ಇಲ್ಲ. ಸಂವಿಧಾನ ಮತ್ತು ಕಾನೂನಿನಲ್ಲಿ ಎಸ್‌ಐಆರ್ ಇಲ್ಲ' ಎಂದು ಹೇಳಿದರು.

'ಸಂವಿಧಾನದ ದೇಶದ ಎಲ್ಲ ಪ್ರಜೆಗಳಿಗೂ ಮತದಾನದ ಹಕ್ಕು ನೀಡಿದೆ. ಚುನಾವಣೆ ಆಯೋಗವೇ ಮನೆಮನೆಗೆ ತೆರಳಿ ಅರ್ಹ ಮತದಾರರನ್ನು (ವಯಸ್ಸು, ವಸತಿ ಆಧರಿಸಿ) ಮತಪಟ್ಟಿಗೆ ಸೇರ್ಪಡೆ ಮಾಡಬೇಕು ಎಂದು ಜನತಾ ಪ್ರಾತಿನಿಧ್ಯ ಕಾಯ್ದೆ ಹೇಳುತ್ತದೆ. ಆದರೆ, ಜನರೇ ಬಂದು ದಾಖಲೆ ನೀಡಿ ಮತದಾರರೆಂದು ಸಾಬೀತು ಮಾಡಿಕೊಳ್ಳಬೇಕು ಎಂದು ಎಸ್‌ಐಆರ್ ಹೇಳುತ್ತದೆ' ಎಂದರು.

'ಎಲ್ಲರನ್ನೂ ಒಳ್ಳಗೊಳ್ಳುವುದು, ಆಡಳಿತ ನಡೆಸುವುದು ಸಂವಿಧಾನದ ಆಶಯ. ಸಂವಿಧಾನ ಎಲ್ಲರಿಗೂ ಸಮಾನವಾಗಿ ವೋಟಿನ ಹಕ್ಕು ನೀಡಿದೆ. ಎಸ್‌ಐಆರ್ ಅದಕ್ಕೆ ತದ್ವಿರುದ್ಧವಾಗಿದೆ' ಎಂದರು.

ಒಂಬತ್ತು ಭಿನ್ನ ಪರಿಕಲ್ಪನೆಗಳ ಅಡಿಯಲ್ಲಿ ಪ್ರದರ್ಶನ, ಗೋಷ್ಠಿ ಆಯೋಜನೆ

ಬೆಂಗಳೂರು ತಂತ್ರಜ್ಞಾನ ಶೃಂಗ ನಾಳೆಯಿಂದ

ಪ್ರಜಾವಾಣಿ ವಾರ್ತೆ

BENGALURU TECH SUMMIT 2025
Bangalore International Exhibition Centre
November 18-20, 2025

60 ದೇಶಗಳ ಪ್ರತಿನಿಧಿಗಳು ಭಾಗಿ	100+ ತಂತ್ರಜ್ಞಾನ ಗೋಷ್ಠಿಗಳು	1,200+ ಪ್ರದರ್ಶನ ಮಳಿಗೆಗಳು
10,000+ ತಂತ್ರಜ್ಞಾನ ಕ್ಷೇತ್ರದ ಪರಿಣತರು ಮತ್ತು ಪ್ರತಿನಿಧಿಗಳು ಭಾಗಿ	50,000+ ಆಸಕ್ತರು, ವಿದ್ಯಾರ್ಥಿಗಳು, ವೀಕ್ಷಕರು ಭೇಟಿ ನೀಡುವ ನಿರೀಕ್ಷೆ	

ಬೆಂಗಳೂರು: 28ನೇ ಆವೃತ್ತಿಯ 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ' ಇದೇ 18ರಿಂದ (ಮಂಗಳವಾರ) ಆರಂಭವಾಗಲಿದ್ದು, ಒಟ್ಟು ಮೂರು ದಿನ ನಡೆಯಲಿದೆ.

ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ (ಬಿಐಇಸಿ) ಇದೇ ಮೊದಲ ಬಾರಿಗೆ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯನ್ನು (ಬಿಟಿಎಸ್) ಆಯೋಜಿಸಲಾಗುತ್ತಿದೆ. ಈ ಹಿಂದೆಂದಿಗಿಂತ ದೊಡ್ಡ ಮಟ್ಟದಲ್ಲಿ ಬಿಟಿಎಸ್ ಆಯೋಜಿಸಲು ಮಾಹಿತಿ ತಂತ್ರಜ್ಞಾನ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಡೀಪ್‌ಟೆಕ್, ಎಐ ಬ್ರಹ್ಮಾಂಡ, ಸೆಮಿಕಾನ್, ಡಿಜಿ–ಆರೋಗ್ಯ ಮತ್ತು ಜೈವಿಕ ತಂತ್ರಜ್ಞಾನ, ನವೋದ್ಯಮ ಪರಿಸರ, ರಕ್ಷಣೆ ಮತ್ತು ಬಾಹ್ಯಾಕಾಶ ಎಂಬ ಪರಿಕಲ್ಪನೆಗಳ ಅಡಿಯಲ್ಲಿ ಪ್ರದರ್ಶನ ಹಾಗೂ ಗೋಷ್ಠಿಗಳನ್ನು ರೂಪಿಸಲಾಗಿದೆ.

ಕೃತಕ ಬುದ್ಧಿಮತ್ತೆ (ಎಐ) ಎಂಬುದೇ ಮಾಹಿತಿ ತಂತ್ರಜ್ಞಾನ ಎಂದು ಸಂವಾದಿಯಾಗಿ ಬಳಕೆಯಾಗುತ್ತಿರುವ ಹೊತ್ತಿದು. ಬಿಟಿಎಸ್ ಎಐಗೆ ಹೆಚ್ಚು ಒತ್ತು ನೀಡಿದ್ದು, ಅದರ ಹತ್ತಾರು ಸ್ವರೂಪಗಳನ್ನು ತೆರೆದಿಡುವಂತಹ ಗೋಷ್ಠಿಗಳನ್ನು ರೂಪಿಸಲಾಗಿದೆ. ಜತೆಗೆ ಎಐ ಕ್ಷೇತ್ರಕ್ಕೆ ಸಂಬಂಧಿಸಿದ ನೂರಕ್ಕೂ ಹೆಚ್ಚು ಮಳಿಗೆಗಳು ಬಿಟಿಎಸ್‌ನಲ್ಲಿ ಇರಲಿವೆ.

1,200ಕ್ಕೂ ಹೆಚ್ಚು ಮಳಿಗೆಗಳಲ್ಲಿ ಪ್ರದರ್ಶನಗಳು ನಡೆಯಲಿವೆ. ದೇಶ–ವಿದೇಶಗಳ ತಂತ್ರಜ್ಞಾನ ಕ್ಷೇತ್ರದ 10,000ಕ್ಕೂ ಹೆಚ್ಚು ಪ್ರತಿನಿಧಿಗಳು, 50,000ಕ್ಕೂ ಅಧಿಕ ವೀಕ್ಷಕರು ಬಿಟಿಎಸ್‌ನಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ನವೋದ್ಯಮಗಳು, ಸಂಶೋಧಕರು, ಹೂಡಿಕೆದಾರರನ್ನು ಒಂದೆಡೆ ಸೇರಿಸಿ ಮುಖಾಮುಖಿಯಾಗಿಸುವ ಹಲವು ವೇದಿಕೆ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ನವೋದ್ಯಮ, ತಂತ್ರಜ್ಞಾನ ಉದ್ಯಮಗಳು ತಮ್ಮ ಉತ್ಪನ್ನಗಳನ್ನು ಬಿಟಿಎಸ್‌ನಲ್ಲಿಯೇ ಅನಾವರಣ ಮಾಡಲು ಮತ್ತು ಮಾರುಕಟ್ಟೆಗೆ ಬಿಡುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಪ್ರಮುಖ ಅಂಶಗಳು

- ನವೆಂಬರ್ 18, 19 ಮತ್ತು 20ರಂದು ಮೂರು ದಿನಗಳ ತಂತ್ರಜ್ಞಾನ ಶೃಂಗಸಭೆ
- ತುಮಕೂರು ರಸ್ತೆಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜನೆ
- ನವೋದ್ಯಮ ಪುರಸ್ಕಾರ, ಸುಸ್ಥಿರ ಮಳಿಗೆ ಪುರಸ್ಕಾರ, ಟಿಸಿಎಸ್ ಗ್ರಾಮೀಣ ರಸಪ್ರಶ್ನೆ ಕಾರ್ಯಕ್ರಮ

ಕೃಷಿ ಮೇಳಕ್ಕೆ ತೆರೆ: 17 ಲಕ್ಷ ಮಂದಿ ಭೇಟಿ

ರೈತರು, ಯುವಕರು, ಕೃಷಿ ಆಸಕ್ತರ ದಂಡು: ನಾಲ್ಕು ದಿನದಲ್ಲಿ ₹4.77 ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

ನಾಲ್ಕು ದಿನದಲ್ಲಿ 54 ಲಕ್ಷ ಮಂದಿ ಭೇಟಿ

'ನಾಲ್ಕು ದಿನಗಳಲ್ಲಿ 54.16 ಲಕ್ಷ ಮಂದಿ ಕೃಷಿ ಮೇಳಕ್ಕೆ ಭೇಟಿ ನೀಡಿದ್ದಾರೆ. ಮೊದಲ ದಿನವಾದ ಗುರುವಾರ 8.51 ಲಕ್ಷ, ಎರಡನೇ ದಿನ 11.85 ಲಕ್ಷ, ಮೂರನೇ ದಿನ 15.87 ಲಕ್ಷ ಮತ್ತು ನಾಲ್ಕನೇ ದಿನವಾದ ಭಾನುವಾರ 17.93 ಲಕ್ಷ ಮಂದಿ ಮೇಳಕ್ಕೆ ಭೇಟಿ ನೀಡಿದ್ದಾರೆ. ಈ ನಾಲ್ಕು ದಿನಗಳಲ್ಲಿ ₹4.77 ಕೋಟಿ ವಹಿವಾಟು ನಡೆದಿದ್ದು, ರಿಯಾಯಿತಿ ದರದಲ್ಲಿ ಒಟ್ಟು 55,498 ಜನ ಭೋಜನ ಸವಿದಿದ್ದಾರೆ' ಎಂದು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು: ಕೃಷಿಯಲ್ಲಿನ ತಾಂತ್ರಿಕತೆಯ ಅನಾವರಣ, ಹೊಸ ತಳಿಗಳು ಮತ್ತು ಆಧುನಿಕ ತಂತ್ರಜ್ಞಾನದ ಉಪಕರಣಗಳ ಪ್ರದರ್ಶನ ಒಳಗೊಂಡಿದ್ದ ಕೃಷಿ ಮೇಳಕ್ಕೆ ಭಾನುವಾರ 17.97 ಲಕ್ಷ ಜನ ಬಂದಿದ್ದರು. ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದ ಮುಖ್ಯ ಗೇಟ್‌ನಿಂದ ಕೃಷಿ ಮೇಳ ನಡೆಯುವ ಪ್ರದೇಶದವರೆಗೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಮೇಳಕ್ಕೆ ನಗರವಾಸಿಗಳು, ರೈತರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ನಾಲ್ಕು ದಿನಗಳಿಂದ ನಡೆಯುತ್ತಿದ್ದ ಈ ಮೇಳದಲ್ಲಿ ವಿವಿಧ ಕ್ಷೇತ್ರಗಳಲ್ಲಿನ ವೃತ್ತಿಪರರು ಪ್ರಾತ್ಯಕ್ಷಿಕೆ ತಾಕುಗಳು, ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಮೇಳದ ಕೊನೆಯ ದಿನವೂ ಜನ ಸಾಗರ ಹರಿದು ಬಂತು. ನಗರದ ಜನತೆ ಕುಟುಂಬದ ಸದಸ್ಯರೊಂದಿಗೆ ಬಂದಿದ್ದರು.


ಪೋಷಕರು ಮಕ್ಕಳಿಗೆ ವಿವಿಧ ಬೆಳೆಗಳನ್ನು ಪರಿಚಯಿಸಿದರು. ಸಾಂಪ್ರದಾಯಿಕ ಕೃಷಿ ಪರಿಕರಗಳನ್ನು ನಗರದ ಜನ ಕುತೂಹಲದಿಂದ ವೀಕ್ಷಿಸಿದರು.

ಪ್ರಾಣಿ ಪ್ರಪಂಚಕ್ಕೆ ಲಗ್ಗೆ ಇಟ್ಟ ಜನ: ಮೇಳದಲ್ಲಿ ಪಶುಸಂಗೋಪನೆಗೆ ಸಂಬಂಧಿಸಿದ ಮಳಿಗೆಗಳಲ್ಲಿ ವಿವಿಧ ತಳಿಗಳ ಕುರಿ, ಕೋಳಿ ಮತ್ತು ಅಲಂಕಾರಿಕ ಮೀನು , ಹಸು, ದನ, ಎಮ್ಮೆಗಳನ್ನು ನೋಡಲು ಸಾರ್ವಜನಿಕರು ಲಗ್ಗೆ ಇಟ್ಟಿದ್ದರು. ಹಳ್ಳಿಕಾರ್ ತಳಿ ಎತ್ತುಗಳ ಮುಂಭಾಗದಲ್ಲಿ ನಿಂತು ಸಾರ್ವಜನಿಕರು ಫೋಟೊ ತೆಗೆಸಿಕೊಂಡರು.

ಕೃಷಿ ಯಂತ್ರೋಪಕರಣಗಳ ವಿಭಾಗ, ಸಾವಯವ ಹಾಗೂ ಸಿರಿಧಾನ್ಯ ವಿಭಾಗ ಗಳಲ್ಲಿ ಹೆಚ್ಚು ಜನ ಕಂಡುಬಂದರು. ಸೂರ್ಯಕಾಂತಿ ತಾಕುಗಳ ಮುಂಭಾಗದಲ್ಲಿ ಹಲವರು ಸೆಲ್ಫಿ ತೆಗೆದು ಕೊಂಡರು. ಮಂಡ್ಯದ ತಾಜಾ ಬೆಲ್ಲವನ್ನು ನಗರವಾಸಿಗಳು ಸವಿದರು. ಇಲ್ಲಿರುವ ಕೆರೆಯಲ್ಲಿ ಸಾರ್ವಜನಿಕರು ಮೀನು ಹಿಡಿದು ಸಂಭ್ರಮಿಸಿದರು.

ಮಣ್ಣಿನ ಫಲವತ್ತತೆ ಹೆಚ್ಚಿಸುವುದು ಹೇಗೆ? ಯಾವ ಬೆಳೆ ಬೆಳೆದರೆ ಲಾಭದಾಯಕ? ರೋಗ ಹಾಗೂ ಕೀಟಗಳ ನಿವಾರಣೆಗೆ ಯಾವ ಔಷಧ ಸಿಂಪಡಿಸಬೇಕು? ಕೃಷಿ ಜೊತೆಯಲ್ಲೇ ಜೇನು ಸಾಕಿದರೆ ಹಾಗೂ ಕಿರು ಅರಣ್ಯ ಸೃಷ್ಟಿಸಿದರೆ ಲಾಭವೇ? ಈ ರೀತಿಯ ನೂರಾರು ಪ್ರಶ್ನೆಗಳಿಗೆ ಕೃಷಿ ತಜ್ಞರಿಂದ ರೈತರು ಉತ್ತರ ಪಡೆಯಲು 'ಕೃಷಿ ಮೇಳ' ವೇದಿಕೆಯಾಯಿತು.

ಹಾವು ಕಡಿತದ ಕುರಿತು ಜಾಗೃತಿ: ಹಾವು ಕಡಿತದಿಂದ ದೇಶದಲ್ಲಿ 50 ಸಾವಿರದಿಂದ 60 ಸಾವಿರ ಮಂದಿ ಮೃತಪಡುತ್ತಿದ್ದಾರೆ. ಹಾವು ಕಡಿದಾಗ ಅವೈಜ್ಞಾನಿಕವಾಗಿ ಆ ಭಾಗವನ್ನು ಕತ್ತರಿಸಲಾಗುತ್ತದೆ. ಇಂತಹ ಅವೈಜ್ಞಾನಿಕ ಕ್ರಮಗಳಿಂದ ಹಲವರು ಮೃತಪಡುತ್ತಿದ್ದಾರೆ. ಮಾನವ ವನ್ಯ ಜೀವಿ ಸಂಘರ್ಷವನ್ನು ತಡೆಯುವುದು ನಮ್ಮ ಉದ್ದೇಶವಾಗಿದೆ. ಅದರ ಭಾಗವಾಗಿ ರಾಜ್ಯದಾದ್ಯಂತ ಉಚಿತವಾಗಿ ಜಾಗೃತಿ ಮೂಡಿಸುತ್ತಿದ್ದೇವೆ' ಎಂದು ವೈಲ್ಡ್ ವರ್ಲ್ಡ್ ಕನ್ಸರ್ವೇಷನ್ ಟ್ರಸ್ಟ್ ಸಂಸ್ಥಾಪಕ ಟ್ರಸ್ಟಿ ರಾಜೇಶ್ 'ಪ್ರಜಾವಾಣಿ'ಗೆ ತಿಳಿಸಿದರು.



ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ 'ಕೃಷಿ ಮೇಳ'ದಲ್ಲಿ ಭಾನುವಾರ ಪ್ರದರ್ಶಿಸಲಾದ ಹಳ್ಳೀಕಾರ್ ಎತ್ತುಗಳು ಆಕರ್ಷಣೆಯ ಕೇಂದ್ರವಾಗಿದ್ದವು



ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಭಾನುವಾರ ಭೇಟಿ ನೀಡಿದ್ದ ಜನಸಾಗರ –ಚಿತ್ರಗಳು: ಪ್ರಶಾಂತ್ ಎಚ್‌.ಜಿ.

ಜಿಕೆವಿಕೆ ಆವರಣದ ಸುತ್ತಲೂ ಸಂಚಾರ ದಟ್ಟಣೆ

ಕೃಷಿ ಮೇಳದ ಅಂತಿಮ ದಿನವಾದ ಭಾನುವಾರ ಜಿಕೆವಿಕೆಗೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳಲ್ಲಿ ವಾಹನ ದಟ್ಟಣೆ ಕಂಡುಬಂತು. ಮೇಳ ನಡೆಯುತ್ತಿದ್ದ ಪ್ರದೇಶಕ್ಕೆ ತೆರಳಲು ಸಾರ್ವಜನಿಕರು ಪರದಾಡಿದರು. ಮುಖ್ಯ ಗೇಟ್‌ನಿಂದ ಮೇಳ ನಡೆಯುವ ಪ್ರದೇಶಕ್ಕೆ ಹೋಗಲು ವಿಶ್ವವಿದ್ಯಾಲಯದ ಬಸ್‌ಗಳನ್ನು ನಿಯೋಜಿಸಲಾಗಿತ್ತು. ಆದರೆ ಮೇಳಕ್ಕೆ ಲಕ್ಷಾಂತರ ಜನ ಭೇಟಿ ನೀಡಿದ್ದರು. ಬಸ್‌ಗಳ ಸಂಖ್ಯೆ ಕಡಿಮೆ ಇದ್ದ ಕಾರಣ ಮಹಿಳೆಯರು, ಮಕ್ಕಳು, ವೃದ್ಧರು ನಡೆದುಕೊಂಡು ಸಾಗುತ್ತಿದ್ದರು.

'ನಗರದ ಜನ ಸ್ವಂತ ವಾಹನಗಳ ಮೂಲಕ ಮೇಳಕ್ಕೆ ಬಂದಿದ್ದರು. ಇದು ಸಂಚಾರ ದಟ್ಟಣೆಗೆ ಕಾರಣವಾಯಿತು' ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದರು.



ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಐಸಿಎಆರ್ ಉಪಮಹಾನಿರ್ದೇಶಕ ಸಂಜಯ್ ಕುಮಾರ್ ಸಿಂಗ್ ಅವರಿಗೆ 'ಡಾ.ಎಂ.ಎಚ್‌. ಮರೀಗೌಡ ರಾಷ್ಟ್ರೀಯ ದತ್ತಿ ಅತ್ಯುತ್ತಮ ತೋಟಗಾರಿಕಾ ಸಂಶೋಧಾನ ಪ್ರಶಸ್ತಿ', ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಬೀಡಿಗಾನಹಳ್ಳಿಯ ರೈತ ಬಿ.ಆರ್‌. ಮಂಜುನಾಥ ಅವರಿಗೆ 'ಡಾ.ಎಂ.ಎಚ್‌. ಮರೀಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ', ಮೈಸೂರು ಜಿಲ್ಲೆಯ ಎಚ್‌.ಡಿ. ಕೋಟೆ ತಾಲ್ಲೂಕಿನ ರೈತ ಎಚ್‌.ಎಲ್‌. ಗೋವಿಂದಪ್ಪ ಅವರಿಗೆ 'ಡಾ.ಆರ್‌. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು. ಕೃಷಿ ಸಚಿವ ಎನ್‌. ಚಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ, ವಿಸ್ತರಣಾ ನಿರ್ದೇಶಕ ವೈ.ಎನ್‌. ಶಿವಲಿಂಗಯ್ಯ, ಕುಲಸಚಿವ ಕೆ.ಸಿ. ನಾರಾಯಣಸ್ವಾಮಿ ಉಪಸ್ಥಿತರಿದ್ದರು

ಬಹೂಪಯೋಗಿ ಫಾರ್ಮ್ ಎಕ್ಸ್–500, ಕ್ವಾಡ್ ಬೈಕ್

● ಖಲೀಲಅಹ್ಮದ ಶೇಖ

ಬೆಂಗಳೂರು: ಕೃಷಿ ಜಮೀನು ಹದ ಮಾಡಲು, ಕಳೆ ತೆಗೆಯಲು, ಗೊಬ್ಬರ ಸಾಗಿಸಲು ಟ್ರ್ಯಾಕ್ಟರ್ ಹಾಗೂ ಎತ್ತುಗಳನ್ನು ಬಳಸುವುದು ಸಾಮಾನ್ಯ. ಆದರೆ, ಇದಕ್ಕೆ ಪರ್ಯಾಯವಾಗಿ ವಿದ್ಯುತ್ ಚಾಲಿತ 'ಫಾರ್ಮ್ ಎಕ್ಸ್-500' ಎಂಬ ವಾಹನ ಅಭಿವೃದ್ಧಿಪಡಿಸಲಾಗಿದೆ. ಇದರ ಜೊತೆಗೆ ತೆಂಗು, ಅಡಿಕೆ, ಮಾವು ಸೇರಿದಂತೆ ತೋಟಗಾರಿಕೆ ಬೆಳೆಗಳಲ್ಲಿ ಕಳೆ, ರಾಸಾಯನಿಕಗಳ ಸಿಂಪಡಣೆ ಮಾಡಲು 'ಫಾರ್ಮ್‌ಲ್ಯಾಂಡ್ ಕ್ವಾಡ್ ಬೈಕ್' ವಿನ್ಯಾಸಗೊಳಿಸಿದ್ದು, ಈ ವಾಹನಗಳು ರೈತರ ಗಮನ ಸೆಳೆದವು.

ಬೆಂಗಳೂರಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಆಯೋಜಿಸಿದ್ದ ಕೃಷಿ ಮೇಳದಲ್ಲಿ ಕೀಳಂಬಿ ಅಗ್ರಿ ಟೂಲ್ಸ್ ಸಂಸ್ಥೆ ಈ ವಾಹನಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕೆ ಇಟ್ಟಿತ್ತು.

'ಎಕ್ಸ್ ಮ್ಯಾಟಿಕ್ ಎಂಬ ಕಂಪನಿಯು ವಿದ್ಯುತ್ ಚಾಲಿತ 'ಫಾರ್ಮ್ ಎಕ್ಸ್-500' ವಾಹನವನ್ನು ವಿನ್ಯಾಸಗೊಳಿಸಿದೆ. ಇದನ್ನು ರಿಮೋಟ್ ಮೂಲಕ ನಿಯಂತ್ರಿಸಬಹುದು. ಇದು ಚಿಕ್ಕ ಟ್ರ್ಯಾಕ್ಟರ್ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಎಲ್ಲ ರೀತಿಯ ಬೆಳೆಗಳು ಹಾಗೂ ಕೃಷಿ ಭೂಮಿಯಲ್ಲಿ ಇದನ್ನು ಬಳಸಿಕೊಳ್ಳಬಹುದು. 500 ಕೆ.ಜಿ. ಭಾರವನ್ನು ಹೊತ್ತು ಸಾಗಲಿದ್ದು, ಕಳೆ ಹಾಗೂ ಬೆಳೆಗಳಿಗೆ ಔಷಧಿ ಸಿಂಪಡಣೆಗೆ ಸಹಕಾರಿ ಆಗಿದೆ' ಎಂದು ಕಂಪನಿಯ ಸಿಇಒ ಮಿಥುನ್ ತಿಳಿಸಿದರು.

'ಈ ವಾಹನಕ್ಕೆ ಒಂದು ವರ್ಷದ ವಾರಂಟಿ, ಎಲೆಕ್ಟ್ರಿಕ್ ಉಪಕರಣಗಳು ಸೇರಿದಂತೆ ಬ್ಯಾಟರಿಗೆ ಮೂರು ವರ್ಷದವರೆಗೆ ವಾರಂಟಿ ಇರಲಿದೆ. ಇದರ ಆರಂಭಿಕ ಬೆಲೆ ₹4.95 ಲಕ್ಷದಿಂದ ₹8.50 ಲಕ್ಷದವರೆಗೆ ಇದೆ. ಈ ವಾಹನ ಖರೀದಿಸಲು ಸಬ್ಸಿಡಿಯೂ ಇದೆ. ನಿರ್ವಹಣೆ ವೆಚ್ಚ ಕಡಿಮೆ, ಹಲವಾರು ಅಟ್ಯಾಚ್‌ಮೆಂಟ್‌ಗಳನ್ನು ಮಾಡಿಕೊಳ್ಳಬಹುದು. ಹೈಡ್ರಾಲಿಕ್ ಅನ್ ಲೋಡಿಂಗ್ ವ್ಯವಸ್ಥೆಯೂ ಇದೆ' ಎಂದು ವಿವರಿಸಿದರು.

'ಒಂದು ಬಾರಿ ಚಾರ್ಜ್ ಮಾಡಿದರೆ ಐದು ಗಂಟೆ ನಿರಂತರವಾಗಿ ಕಾರ್ಯನಿರ್ವಹಿಸಲಿದೆ. 4.8 ಕಿಲೋ ವಾಟ್ ಸಾಮರ್ಥ್ಯದ ಮೋಟಾರ್ ಅಳವಡಿಸಲಾಗಿದೆ' ಎಂದರು.

ಫಾರ್ಮ್‌ಲ್ಯಾಂಡ್ ಕ್ವಾಡ್ ಬೈಕ್: ಇದನ್ನು ಟಿವಿಎಸ್ ಅಪಾಚೆ ವಾಹನದ 180 ಸಿ.ಸಿ ಸಾಮರ್ಥ್ಯದ ಎಂಜಿನ್ ಬಳಸಿ, ವಿನ್ಯಾಸಗೊಳಿಸಲಾಗಿದೆ. ಇದು 600 ಕೆ.ಜಿ.ಯಿಂದ 800 ಕೆ.ಜಿ. ವರೆಗಿನ ಭಾರ ಎಳೆದುಕೊಂಡು ಹೋಗುತ್ತದೆ. ಈ ವಾಹನದ ಜೊತೆಗೆ ಟ್ರಾಲಿ, ಕಳೆ ತೆಗೆಯುವ ಯಂತ್ರ ಹಾಗೂ ಔಷಧ ಸಿಂಪಡಣೆ ಮಾಡುವ ಸಲಕರಣೆಗಳನ್ನು ನೀಡಲಾಗುತ್ತದೆ. ₹2.90 ಲಕ್ಷ ಬೆಲೆ ನಿಗದಿಪಡಿಸಲಾಗಿದೆ' ಎಂದು ಈ ವಾಹನ ವಿನ್ಯಾಸಗೊಳಿಸಿದ ಎಂಜಿನಿಯರ್ ಕೆ.ಎಸ್. ವಿಶ್ವನಾಥ್ ತಿಳಿಸಿದರು.



ವಿದ್ಯುತ್ ಚಾಲಿತ 'ಫಾರ್ಮ್ ಎಕ್ಸ್–500'

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ಬಸ್ ಶೆಲ್ಟರ್ ನಿರ್ಮಿಸಿ'



ರಾಜರಾಜೇಶ್ವರಿ ನಗರದ ಲಗ್ಗೆರೆಯ ಎಸ್‌ಬಿಐ ಬ್ಯಾಂಕ್ ಬಳಿ ಬಿಎಂಟಿಸಿ ಬಸ್ ನಿಲ್ದಾಣವಿದ್ದು, ಪ್ರತಿದಿನ ಇಲ್ಲಿ ಐದಕ್ಕೂ ಹೆಚ್ಚು ಮಾರ್ಗಗಳಿಗೆ ಸಂಪರ್ಕ ಕಲ್ಪಿಸುವ ಬಸ್‌ಗಳು ಸಂಚರಿಸಲಿವೆ. ಲಗ್ಗೆರೆಯ ಈ ನಿಲ್ದಾಣದಲ್ಲಿ ಶಾಲಾ-ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಗಾರ್ಮೆಂಟ್ಸ್‌ಗೆ ಹೋಗುವ ಮಹಿಳೆಯರು ಬಸ್‌ಗೆ ಇಲ್ಲಿ ನಿಂತೇ ಕಾಯಬೇಕಾಗಿದೆ. ಕುಳಿತುಕೊಳ್ಳಲು ಅಥವಾ ಮಳೆ–ಬಿಸಿಲಿನಿಂದ ರಕ್ಷಿಸಿಕೊಳ್ಳಲು ಶೆಲ್ಟರ್ ನಿರ್ಮಿಸಿಲ್ಲ. ಈಗಲಾದರೂ ಸಂಬಂಧಪಟ್ಟವರು ಗಮನಹರಿಸಿ, ಇಲ್ಲಿ ಬಸ್ ಶೆಲ್ಟರ್ ನಿರ್ಮಿಸಿಕೊಡಬೇಕು.

ಸಿದ್ದಗನಾಗಯ್ಯ ಜಿ., ಚೌಡೇಶ್ವರಿ ನಗರ

'ಬೆಳಿಗ್ಗೆ 11 ಗಂಟೆಗೆ ಮುಚ್ಚುವ ಉದ್ಯಾನ'



ಜೆ.ಪಿ.ನಗರ ಮೊದಲನೆ ಹಂತದಲ್ಲಿರುವ ಎಸ್.ಕೆ. ನಟರಾಜ್ ಉದ್ಯಾನ (ಆಕ್ಸ್‌ಫರ್ಡ್ ಶಾಲೆ ಸಮೀಪ) ಮತ್ತು ಸುತ್ತಲಿನ ಸಣ್ಣ ಉದ್ಯಾನಗಳನ್ನು ಬೆಳಿಗ್ಗೆ 11 ಗಂಟೆಗೆ ಮುಚ್ಚಲಾಗುತ್ತಿದೆ. ಸಾರ್ವಜನಿಕರನ್ನು ಬಲವಂತದಿಂದ ಹೊರಗೆ ಕಳುಹಿಸಲಾಗುತ್ತಿದೆ. ಸಂಜೆ 4 ಗಂಟೆಯವರೆಗೂ ಗೇಟ್‌ಗೆ ಬೀಗ ಹಾಕಿರುತ್ತಾರೆ. ನಗರದ ಬಹಳಷ್ಟು ಉದ್ಯಾನಗಳು ದಿನವಿಡೀ ತೆರೆದಿರುತ್ತವೆ. ಅದೇ ರೀತಿ, ಇಲ್ಲಿನ ಉದ್ಯಾನಗಳು ತೆರೆದಿರುವಂತೆ ಸಂಬಂಧಪಟ್ಟವರು ಕ್ರಮವಹಿಸಬೇಕು.

ಎಸ್. ರಮೇಶ್, ಜೆ.ಪಿ.ನಗರ

'ಪಾದಚಾರಿ ಮಾರ್ಗದಲ್ಲಿ ಕಸ'



ಉತ್ತರಹಳ್ಳಿ ಮುಖ್ಯರಸ್ತೆಯ ನಿತ್ಯಶ್ರೀ ಸಂಕಲ್ಪ ಅಪಾರ್ಟ್‌ಮೆಂಟ್ ಮುಂದಿನ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಹಾಕಲಾಗಿದೆ. ದಿನದಿಂದ ದಿನಕ್ಕೆ ಇಲ್ಲಿ ಕಸ ಹೆಚ್ಚಾಗುತ್ತಿದೆ. ಇದರಿಂದ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಮತ್ತು ಸ್ಥಳೀಯರಿಗೆ ತೊಂದರೆಯಾಗುತ್ತಿದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಗಾಳಿ ಬೀಸಿದಾಗ, ಈ ಕಸ ರಸ್ತೆಗಳಿಗೂ ಹರಡಿಕೊಳ್ಳುತ್ತದೆ. ಆದ್ದರಿಂದ ಇಲ್ಲಿ ಕಸ ಹಾಕದಂತೆ ಹಾಗೂ ಈಗ ಇರುವ ಕಸವನ್ನು ತುರ್ತಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು.

ಶಶಾಂಕ, ಗೌಡನಪಾಳ್ಯ

'ರಸ್ತೆಯಲ್ಲಿ ಹರಿವ ತ್ಯಾಜ್ಯ ನೀರು'



ಕಾಡುಗೋಡಿಯ ಬೆಳತೂರು ಸರ್ಕಾರಿ ಶಾಲೆಯ ಮುಂಭಾಗದ ಮುಖ್ಯರಸ್ತೆಯಲ್ಲಿ ತ್ಯಾಜ್ಯ ನೀರು ಹರಿಯುತ್ತಿದೆ. ಇದರಿಂದ ಶಾಲೆಗೆ ತೆರಳುವ ಮಕ್ಕಳು ಸೇರಿದಂತೆ ಸ್ಥಳೀಯ ನಾಗರಿಕರಿಗೆ ಸಮಸ್ಯೆ ಆಗಿದೆ. ವಿದ್ಯಾರ್ಥಿಗಳು ಹಾಗೂ ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಮುಖ್ಯ ರಸ್ತೆಯಲ್ಲಿಯೇ ತ್ಯಾಜ್ಯ ನೀರು ಹರಿಯುವುದರಿಂದ ವಾಹನ ಸಂಚಾರಕ್ಕೂ ತೊಂದರೆ ಆಗಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಇದನ್ನು ಸರಿಪಡಿಸುವಂತೆ ಬೆಂಗಳೂರು ಜಲಮಂಡಳಿ ಹಾಗೂ ಪಾಲಿಕೆಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ಮುನೀಂದ್ರ, ಬೆಳತೂರು

'ನಾಮಫಲಕ ಬರೆಯಿಸಿ'



ಜಂಬೂಸವಾರಿ ದಿಣ್ಣೆ ಮುಖ್ಯರಸ್ತೆಯ ಬಸ್ ತಂಗುದಾಣದಲ್ಲಿ ಗೌರವ ನಗರ ಎಂಬ ನಾಮಫಲಕ ಬರೆದಿಲ್ಲ. ನಗರದಲ್ಲಿ ಇಂತಹ ಹಲವಾರು ಬಸ್ ತಂಗುದಾಣಗಳಿವೆ. ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಸುವವರು ಯಾವ ತಂಗುದಾಣದಲ್ಲಿ ಇಳಿಯಬೇಕು ಎಂಬ ಗೊಂದಲ ಉಂಟಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಬಸ್ ತಂಗುದಾಣಗಳಲ್ಲಿ ಆಯಾ ಪ್ರದೇಶದ ಹೆಸರನ್ನು ಬರೆಯಿಸಬೇಕು.

ಎಚ್. ದೊಡ್ಡ ಮಾರಯ್ಯ, ಸಂತೃಪ್ತಿ ನಗರ

'ಕಳಪೆ ಕಾಮಗಾರಿಯಿಂದ ಗುಂಡಿ'

ಕೆಂಗೇರಿ ಮೆಟ್ರೊ ನಿಲ್ದಾಣದಿಂದ ದೊಡ್ಡಬೆಲೆಗೆ ಹೋಗುವ ಮುಖ್ಯರಸ್ತೆಗೆ ಇತ್ತೀಚೆಗೆ ಹೊಸದಾಗಿ ಡಾಂಬರ್ ಹಾಕಲಾಗಿದೆ. ಆದರೆ, ಕಳಪೆ ಕಾಮಗಾರಿಯಿಂದಾಗಿ ರಸ್ತೆ ಮಧ್ಯದಲ್ಲಿಯೇ ದೊಡ್ಡ ಗುಂಡಿ ಕಾಣಿಸಿಕೊಂಡಿದೆ. ಸಂಬಂಧಪಟ್ಟ ಜಿಬಿಎ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿದರೂ ರಸ್ತೆ ಮಧ್ಯದಲ್ಲಿ ಇರುವ ಗುಂಡಿಯನ್ನು ಮುಚ್ಚಿಲ್ಲ. ಕಿರಿದಾದ ಈ ರಸ್ತೆಯಲ್ಲಿ ಬಸ್‌ಗಳು, ಶಾಲಾ ವಾಹನಗಳು ಸಂಚರಿಸುತ್ತವೆ. ಇದೇ ರಸ್ತೆಗೆ ಹೊಂದಿಕೊಂಡು ಕಾರ್ಖಾನೆಗಳೂ ಇರುವುದರಿಂದ ಬೃಹತ್ ಗಾತ್ರದ ಲಾರಿಗಳು ಸಹ ಇಲ್ಲಿ ಸಾಗುತ್ತವೆ. ಇದರಿಂದಾಗಿ ದ್ವಿಚಕ್ರ ವಾಹನ ಸವಾರರು ಸಮಸ್ಯೆ ಎದುರಿಸುತ್ತಿದ್ದಾರೆ. ಗುಂಡಿಯಲ್ಲಿ ಬಿದ್ದು ಗಾಯಗೊಳ್ಳುವ ಸಾಧ್ಯತೆಯಿದೆ. ಆದ್ದರಿಂದ ಜಿಬಿಎ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಗುಂಡಿ ಮುಚ್ಚಲು ಕ್ರಮವಹಿಸಬೇಕು.

ಸದಾಶಿವ, ದೊಡ್ಡಬೆಲೆ ನಿವಾಸಿ

ಬ್ಯಾಟರಾಯನಪುರ: ಕ್ರೀಡಾ ಉತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: 'ಸಮಾಜದಲ್ಲಿ ಪ್ರತಿಯೊಬ್ಬರನ್ನೂ ಒಂದುಗೂಡಿಸಿ, ದೈಹಿಕವಾಗಿ ಸದೃಢರನ್ನಾಗಿ ಮಾಡುವ ಶಕ್ತಿ ಕ್ರೀಡೆಗೆ ಇದೆ. ಅದಕ್ಕಾಗಿಯೇ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿವರ್ಷ ಅಂತರ ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವ ಆಯೋಜಿಸಲಾಗುತ್ತಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಕಾಂಗ್ರೆಸ್ ತಂಡ, ಯುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ಸ್ವಯಂ ಸೇವಕರ ಸಂಘದ ಆಶ್ರಯದಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವಿವಿಧ ಬಡಾವಣೆಗಳಲ್ಲಿ ಆಯೋಜಿಸಿದ್ದ ಮೂರನೇ ವರ್ಷದ 'ಇಂಟರ್ ಅಪಾರ್ಟ್‌ಮೆಂಟ್ ಸ್ಪೋರ್ಟ್ಸ್ ಫೆಸ್ಟ್-2025'ರ ಸಮಾರೋಪ ಸಮಾರಂಭದಲ್ಲಿ ವಿಜೇತ ಕ್ರೀಡಾಪಟುಗಳು ಹಾಗೂ ತಂಡಗಳಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

'ಬೆಂಗಳೂರಿನ ಮಟ್ಟಿಗೆ ಸ್ಥಳೀಯರ ಸಂಖ್ಯೆಗಿಂತ ವೃತ್ತಿ ಕಾರಣಕ್ಕಾಗಿ ಹೊರ ಜಿಲ್ಲೆ-ರಾಜ್ಯಗಳಿಂದ ಇಲ್ಲಿಗೆ ಆಗಮಿಸಿ ನೆಲಸಿದವರೇ ಹೆಚ್ಚು. ಒಂದೇ ಅಪಾರ್ಟ್‌ಮೆಂಟ್‌ನಲ್ಲಿದ್ದರೂ ಒಬ್ಬರಿಗೊಬ್ಬರು ಪರಿಚಯವಿಲ್ಲದ ಸ್ಥಿತಿ ಇದೆ. ಸಮಾಜದ ಪ್ರತಿಯೊಬ್ಬರನ್ನೂ ಬೆಸೆಯುವ ಶಕ್ತಿ ಇರುವುದು ಕ್ರೀಡೆಗೆ ಮಾತ್ರ. ಕಳೆದ ಮೂರು ವರ್ಷದಲ್ಲಿ ನಮ್ಮ ಕ್ರೀಡಾ ಉತ್ಸವದಲ್ಲಿ ಪಾಲ್ಗೊಂಡ ಹಲವರು ಈ ಉತ್ಸವದ ಕಾರಣಕ್ಕೆ ತಮಗೆ ಹೊಸ ಗೆಳೆಯರು-ಗೆಳತಿಯರ ಪರಿಚಯವಾಗಿದೆ ಎಂದಿದ್ದಾರೆ. ಸಮಾಜದಲ್ಲಿ ಹೀಗೆ ಅಪರಿಚಿತರೆಲ್ಲರೂ ಪರಸ್ಪರ ಹತ್ತಿರವಾದಾಗ ಹಾಗೂ ದೈಹಿಕವಾಗಿ ಆರೋಗ್ಯದಿಂದ ಇದ್ದಾಗ ಮಾತ್ರ ಶಕ್ತಿಯುತ ಹಾಗೂ ಸದೃಢ ಸಮಾಜದ ನಿರ್ಮಾಣ ಸಾಧ್ಯ' ಎಂದರು.

ಸಂಘಟಕಿ ಮೀನಾಕ್ಷಿ ಶೇಷಾದ್ರಿ ಮಾತನಾಡಿ, 'ಅಪಾರ್ಟ್‌ಮೆಂಟ್ ನಿವಾಸಿಗಳಿಗಾಗಿ ಇಂತಹ ವಿನೂತನ ಕ್ರೀಡಾಕೂಟ ಏರ್ಪಡಿಸಿರುವುದು ಬೆಂಗಳೂರಿನಲ್ಲಿಯೇ ಪ್ರಪ್ರಥಮವಾಗಿದೆ. ಇದರಲ್ಲಿ 6 ವರ್ಷದಿಂದ 80 ವರ್ಷದವರೆಗಿನ ವಿವಿಧ ವಯೋಮಾನದವರಿಗಾಗಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು' ಎಂದರು.

ಶೋಭಾ ಸಿಟಿ ಅಪಾರ್ಟ್‌ಮೆಂಟ್ ತಂಡಕ್ಕೆ ಸಮಗ್ರ ತಂಡ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗೋದ್ರೇಜ್ ವುಡ್‌ಮೆನ್ಸ್ ಅಪಾರ್ಟ್‌ಮೆಂಟ್‌ನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಿಗಳು ಭಾಗವಹಿಸಿದ್ದರು. ವಜ್ರಂ ಅಪಾರ್ಟ್‌ಮೆಂಟ್‌ನ ಇಬ್ಬರು ಅದೃಷ್ಟಶಾಲಿ ವಿಜೇತರು ಥಾಯ್ಲೆಂಡ್ ಪ್ರವಾಸಕ್ಕೆ ಆಯ್ಕೆಯಾದರು. 80 ವರ್ಷದ ವೃದ್ಧೆಯೊಬ್ಬರು ಕೇರಂ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.



ಅಪಾರ್ಟ್‌ಮೆಂಟ್ ಕ್ರೀಡಾ ಉತ್ಸವದ ಕ್ರಿಕೆಟ್ ಟೂರ್ನಿಯಲ್ಲಿ ಪ್ರಥಮ ಸ್ಥಾನ ಪಡೆದ ಎಂಸಿಇಸಿಎಚ್‌ಎಸ್ ತಂಡಕ್ಕೆ ಬಹುಮಾನ ನೀಡಲಾಯಿತು. ಸಚಿವ ಕೃಷ್ಣ ಬೈರೇಗೌಡ ಉಪಸ್ಥಿತರಿದ್ದರು

ಸುರಂಗ ರಸ್ತೆ: ಇಬ್ಬರು ಬಿಡ್‌ದಾರರು ಅನರ್ಹ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸುರಂಗ ರಸ್ತೆ ಯೋಜನೆಗೆ ನಾಲ್ಕು ಕಂಪನಿಗಳು ಬಿಡ್ ಸಲ್ಲಿಸಿವೆಯಾದರೂ, ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ (ಬಿ–ಸ್ಮೈಲ್) ಒಡ್ಡಿರುವ ಷರತ್ತಿನ ಕಾರಣಕ್ಕೆ ಎರಡು ಕಂಪನಿಗಳ ಬಿಡ್ ತಿರಸ್ಕೃತವಾಗುವ ಸಾಧ್ಯತೆ ಇದೆ.

ಬಿ–ಸ್ಮೈಲ್, 'ಬಿಡ್ ಸಲ್ಲಿಸುವ ಕಂಪನಿಗಳು 5 ವರ್ಷಗಳ ಅವಧಿಯಲ್ಲಿ ನಿರ್ಮಿಸಿದ ರಸ್ತೆ, ಸುರಂಗ, ಸೇತುವೆ, ಮೇಲ್ಸೇತುವೆ, ಮೆಟ್ರೊ ರೈಲು ಮಾರ್ಗಗಳು ಕುಸಿದಿರಬಾರದು' ಎಂದು ಷರತ್ತು ಒಡ್ಡಿದೆ. ಈ ಯೋಜನೆಗೆ ಅದಾನಿ ಗ್ರೂಪ್, ದಿಲೀಪ್ ಬಿಲ್ಡ್‌ಕಾನ್, ವಿಶ್ವ ಸಮುದ್ರ ಎಂಜಿನಿಯರಿಂಗ್, ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ಬಿಡ್ ಸಲ್ಲಿಸಿದ್ದು, ಮೇಲಿನ ಷರತ್ತಿನ ಕಾರಣಕ್ಕೆ ಎರಡು ಕಂಪನಿಗಳು ತಾಂತ್ರಿಕ ಅರ್ಹತೆ ಕಳೆದುಕೊಳ್ಳುತ್ತವೆ.

ದಿಲೀಪ್ ಬಿಲ್ಡ್‌ಕಾನ್ ಕಂಪನಿಯು ಆಂಧ್ರಪ್ರದೇಶದಲ್ಲಿ ನಿರ್ಮಿಸಿದ್ದ ಅಂಕಪಲ್ಲಿ ಮೇಲ್ಸೇತುವೆಯು 2021ರ ಜುಲೈನಲ್ಲಿ ಕುಸಿದಿತ್ತು. ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದರು. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ₹3 ಕೋಟಿ ದಂಡ ವಿಧಿಸಿತ್ತು.

ಅದಾನಿ ಗ್ರೂಪ್, ಕೇರಳದಲ್ಲಿ ನಿರ್ಮಿಸಿದ್ದ ಅಳಿಯೂರ್-ವೆಂಗಲಮ್ ರಾಷ್ಟ್ರೀಯ ಹೆದ್ದಾರಿ ಒಂದು ಭಾಗವು ಕುಸಿದಿತ್ತು. ಈ ಬಗ್ಗೆ ಪರಿಶೀಲನೆ ನಡೆಸಿದ್ದ ಎನ್‌ಎಚ್‌ಎಐ, ಕಂಪನಿಯನ್ನು ಒಂದು ವರ್ಷ ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಶಿಫಾರಸು ಮಾಡಿತ್ತು. ಇದಲ್ಲದೆ, ಬಿ–ಸ್ಮೈಲ್, 2024–25ನೇ ಸಾಲಿನಲ್ಲಿ ಒಟ್ಟು ಮೌಲ್ಯ ₹2,192 ಕೋಟಿಯಷ್ಟಿರುವ ಕಂಪನಿಗಳು ಮಾತ್ರ ಬಿಡ್ ಸಲ್ಲಿಸಬೇಕು ಎಂದು ಇನ್ನೊಂದು ಷರತ್ತು ಹಾಕಿದೆ. ಬಿಡ್ ಸಲ್ಲಿಸಿರುವ ಎಲ್ಲ ಕಂಪನಿಗಳ ಮೌಲ್ಯ ಇಷ್ಟು ಇಲ್ಲ. ಈ ಕಾರಣಗಳಿಂದಾಗಿ ಬಿಡ್ ತಿರಸ್ಕೃತವಾಗಬಹುದು ಎನ್ನಲಾಗಿದೆ.

ಜತೆಗೆ ಶೇ 60ರಷ್ಟು ಹೂಡಿಕೆಯನ್ನು ಕಂಪನಿಗಳೇ ಮಾಡಬೇಕಿದ್ದು, ಅದನ್ನು ಬಳಕೆದಾರರ ಶುಲ್ಕ ಮತ್ತು ವಾಣಿಜ್ಯ ಕೇಂದ್ರಗಳ ಅಭಿವೃದ್ಧಿಯಿಂದ ಗಳಿಸಿಕೊಳ್ಳಬೇಕು ಎಂಬ ಷರತ್ತು ಇದೆ. ಇದು ಕಾರ್ಯಸಾಧುವಲ್ಲ. ಹೀಗಾಗಿ ಸುರಂಗ ರಸ್ತೆ ನಿರ್ಮಾಣದಲ್ಲಿ ಅನುಭವ ಹೊಂದಿರುವ ಎಲ್ ಆ್ಯಂಡ್ ಟಿ, ಟಾಟಾ ಗ್ರೂಪ್, ಆಫ್ಕಾನ್ಸ್, ಎಚ್‌ಸಿಸಿ ಕಂಪನಿಗಳು ಟೆಂಡರ್‌ನಿಂದ ದೂರ ಉಳಿದಿವೆ ಎಂದು ಬಿ–ಸ್ಮೈಲ್ ಅಧಿಕಾರಿಯೊಬ್ಬರು ಹೇಳಿದರು.

ಬೆಂಕಿಯಲ್ಲಿ ಬೆಂದ ತುಂಟ ಕಂಗಳ ವನಗೂಸುಗಳು

30 ಕೃಷ್ಣಮೃಗಗಳ ಸಾವಿನ ಪ್ರಕರಣ: ಆರೋಗ್ಯ ಸಲಹಾ ಸಮಿತಿಯತ್ತ ಪರಿಸರವಾದಿಗಳ ಬೊಟ್ಟು

• ಸಂತೋಷ ಈ. ಚಿನಗುಡಿ

ಬೆಳಗಾವಿ: ಇಲ್ಲಿನ ಭೂತರಾಮನಹಟ್ಟಿಯಲ್ಲಿರುವ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ 30 ಕೃಷ್ಣಮೃಗಗಳು ಉಸಿರು ಚೆಲ್ಲಿವೆ. ಎಲ್ಲರೂ ಸಾವಿಗೆ ಕಾರಣ ಹುಡುಕುತ್ತಿದ್ದಾರೆ ಹೊರತು; ಹೊಣೆ ಯಾರು ಎಂದು ನಿರ್ಧರಿಸಲು ಆಗಿಲ್ಲ. ಇದರ ಮಧ್ಯೆಯೇ ಮೃಗಾಲಯದ ಆರೋಗ್ಯ ಸಲಹಾ ಸಮಿತಿ ಕ್ರಿಯಾಶೀಲವಾಗಿಲ್ಲ ಎಂಬ ತಕರಾರನ್ನು ಪರಿಸರವಾದಿಗಳು ಮುಂದಿಟ್ಟಿದ್ದಾರೆ.

ಎರಡು ದಿನಗಳ ಹಿಂದಷ್ಟೇ ತುಂಟ ಕಣ್ಣುಗಳನ್ನು ಪಿಳಕಿಸುತ್ತ, ಉದ್ದ ಕೊಂಬು ಬೀಸುತ್ತ, ಚೆಲ್ಲಾಟವಾಡುತ್ತಿದ್ದ ಮುದ್ದು ಮುಖದ ವನಗೂಸುಗಳು ಬೆಂಕಿಯಲ್ಲಿ ಉರಿದುಹೋಗಿವೆ. ಜನರಂಜನೆಗೆ, ಮನರಂಜನೆಗೆ ಅರ್ಪಿತಕೊಂಡಿದ್ದ ಈ ತುಂಟ ಜೀವಗಳ ಸಾಮೂಹಿಕ ಸಾವು ದಿಗಿಲುಗೊಳಿಸಿದೆ.

'ಹೆಮರೇಜಿಕ್ ಸೆಪ್ಟಿಸೇಮಿಯಾ (HS- ರಕ್ತಸ್ರಾವ ರೋಗ)' ಎಂಬ ರೋಗದಿಂದ ಕೃಷ್ಣಮೃಗಗಳು ಸತ್ತ ಅಂದಾಜಿದೆ. ಇದು ಅತ್ಯಂತ ಗಂಭೀರ ಪರಿಣಾಮ ಬೀರುವ ಬ್ಯಾಕ್ಟೀರಿಯಾ ಸೋಂಕು. ತಗಲಿದ 24 ಗಂಟೆಗಳಲ್ಲೇ ಪ್ರಾಣಿಗಳ ಜೀವ ಚೆಲ್ಲುತ್ತವೆ. ಸದ್ಯ ಕೃಷ್ಣಮೃಗಗಳ ಸಾವಿನ ರೀತಿ ಇದಕ್ಕೆ ಹೋಲಿಕೆ ಆಗುತ್ತಿದೆ. ಮಾದರಿಗಳನ್ನು ಬೆಂಗಳೂರಿನ ಪಶು ವೈದ್ಯಕೀಯ ಜೈವಿಕ ಸಂಶೋಧನಾ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ವೆಟರ್ನರಿ ಬಯಾಲಜಿಕಲ್ಸ್)ಗೆ ಕಳಿಸಲಾಗಿದೆ. ಬಳಕವೇ ನಿಖರ ಕಾರಣ ಗೊತ್ತಾಗಲಿದೆ' ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಸುನೀಲ್ ಪನ್ವಾರ್ 'ಪ್ರಜಾವಾಣಿ'ಗೆ ವಿವರಿಸಿದರು.

ಬ್ಯಾಕ್ಟೀರಿಯಾ ಹುಟ್ಟಲು ಕಾರಣವೇನು?: ರಾಜ್ಯದ ಯಾವುದೇ ಮೃಗಾಲಯದಲ್ಲಿ ಕಾಣಿಸಿಕೊಳ್ಳದ ಮಾರಣಾಂತಿಕ ಬ್ಯಾಕ್ಟೀರಿಯಾ ಇಲ್ಲಿ ಏಕೆ ಕಾಣಿಸಿಕೊಂಡಿದೆ ಎಂಬ ಪ್ರಶ್ನೆಯನ್ನೂ ಪರಿಸರವಾದಿಗಳು ಎತ್ತಿದ್ದಾರೆ. ಏಕಾಏಕಿ ತಾಪಮಾನದ ಕುಸಿತ, ಹವಾಮಾನದಲ್ಲಿ ವಿಷಮ ಬದಲಾವಣೆಯ ಕಾರಣ ಪ್ರಾಣಿಗಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ. ಆಗ ಇಂಥ ಬ್ಯಾಕ್ಟೀರಿಯಾ ದಾಳಿ ಮಾಡುತ್ತವೆ ಎಂಬ ಉತ್ತರವನ್ನು ಸೂಕ್ಷ್ಮಜೀವಿ ತಜ್ಞರು ಕೊಟ್ಟಿದ್ದಾರೆ.

ಸಮಿತಿ ಏನು ಮಾಡುತ್ತಿದೆ?: ಕೇಂದ್ರ ಮೃಗಾಲಯ ಪ್ರಾಧಿಕಾರ ಹೊರಡಿಸಿದ 'ಭಾರತದಲ್ಲಿ ಮೃಗಾಲಯಗಳ ಸ್ಥಾಪನೆ ಮತ್ತು ವೈಜ್ಞಾನಿಕ ನಿರ್ವಹಣೆಯ(2019) 'ಮಾರ್ಗಸೂಚಿಗಳ ಪ್ರಕಾರ ಆರೋಗ್ಯ ಸಲಹಾ ಸಮಿತಿ ರಚನೆ ಮಾಡುವುದು ಕಡ್ಡಾಯ. ಮೃಗಾಲಯದ ಸ್ಥಿತಿಗತಿ, ಪ್ರಾಣಿಗಳ ಆರೋಗ್ಯ, ಹವಾಮಾನ ವೈಪರೀತ್ಯ, ಆಹಾರ, ಚುಚ್ಚುಮದ್ದು ಆದಿಯಾಗಿ ಪ್ರತಿಯೊಂದರಲ್ಲೂ ಈ ಸಮಿತಿ ನಿರ್ದೇಶನ ನೀಡಬೇಕಾದುದು ಅಗತ್ಯ.

ಪೋಷಣೆ ಕೊರತೆ, ಅನಾರೋಗ್ಯ, ಸೋಂಕು, ನಂಜು ಮುಂತಾದ ತುರ್ತು ಸಂದರ್ಭಗಳಲ್ಲಿ ಈ ಸಮಿತಿ ಮುನ್ನೆಲೆಗೆ ಇರಬೇಕು ಎಂಬುದು ನಿಯಮದಲ್ಲಿದೆ.

ಆದರೆ, ಭೂತರಾಮನಹಟ್ಟಿ ಮೃಗಾಲಯ ದಲ್ಲಿ ಇದೂವರೆಗೆ ಇಂಥ ಪ್ರಯತ್ನ ಆಗಿಲ್ಲ ಎಂಬುದು ಪರಿಸರವಾದಿಗಳ ದೂರು.

ಅನುಭವಿ ಪಶುವೈದ್ಯರು, ಪಶು ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರು, ವನ್ಯಜೀವಿ ತಜ್ಞರು, ಮೃಗಾಲಯದ ಪಶುವೈದ್ಯರು, ಮೃಗಾಲಯದ ಹಿರಿಯ ಪಶು ವೈದ್ಯಾಧಿಕಾರಿ ಹೀಗೆ ತಜ್ಞರೇ ಈ ಸಮಿತಿಯಲ್ಲಿ ಇರುತ್ತಾರೆ. ಇವರು ನೀಡುವ ಎಲ್ಲ ಸಲಹೆಗಳನ್ನೂ ಮೃಗಾಲಯ ಪಾಲಿಸಬೇಕು. ಮೃಗಾಲಯದ ನಿರ್ದೇಶಕರು ಮತ್ತು ಮೇಲ್ವಿಚಾರಕರು (ಪ್ರಾಣಿ) ಆರೋಗ್ಯ ಸಲಹಾ ಸಮಿತಿಯ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂಬುದು ಕಾಯ್ದೆಯಲ್ಲಿದೆ.



ಕೃಷ್ಣಮೃಗ (ಸಂಗ್ರಹ ಚಿತ್ರ)

ಜಿಂಕೆ, ಕಡವೆಗಳ ಆರೋಗ್ಯದ ಮೇಲೆ ನಿಗಾ

ಬೆಳಗಾವಿ: ಕಿರು ಮೃಗಾಲಯದಲ್ಲಿ ಜಿಂಕೆ, ಕಡವೆಗೂ ಸೋಂಕು ಹರಡುವ ಅಪಾಯವಿದ್ದು, ಅವುಗಳ ಆರೋಗ್ಯದ ಮೇಲೂ ನಿಗಾ ವಹಿಸಲಾಗಿದೆ. ಕೃಷ್ಣಮೃಗ, ಜಿಂಕೆ ಮತ್ತು ಕಡವೆ ಇರುವ ಸ್ಥಳ ಮುಚ್ಚಿ, ಸಾರ್ವಜನಿಕರ ವೀಕ್ಷಣೆಗೆ ನಿರ್ಬಂಧ ಹೇರಲಾಗಿದೆ.

'ಈ ಮೂರು ಪ್ರಬೇಧಗಳ ಪ್ರಾಣಿಗಳ ಆರೈಕೆ ಮತ್ತು ಆಹಾರ ನೀಡುವಿಕೆಗೆ ಪ್ರತ್ಯೇಕ ಸಿಬ್ಬಂದಿ ಇದ್ದಾರೆ. ಕೃಷ್ಣಮೃಗ ಆರೈಕೆ ಮಾಡುವ ಸಿಬ್ಬಂದಿ ಉಳಿದ ಪ್ರಾಣಿಗಳು ಇರುವ ಸ್ಥಳದ ಕಡೆ ತೆರಳದಂತೆ ಸೂಚಿಸಿದ್ದೇವೆ. ಬದುಕುಳಿದ 8 ಕೃಷ್ಣಮೃಗಗಳ ಆರೋಗ್ಯ, ಚಲನ-ವಲನದ ಮೇಲೆ ನಾಲ್ವರು ಸಿಬ್ಬಂದಿ ನಿರಂತರವಾಗಿ ನಿಗಾ ಇರಿಸಿದ್ದಾರೆ' ಎಂದು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಬನ್ನೇರುಘಟ್ಟ ಶಾಖೆ ತಜ್ಞ ಡಾ.ಮಂಜುನಾಥ ವಿ. 'ಪ್ರಜಾವಾಣಿ'ಗೆ ತಿಳಿಸಿದರು.

'ಕೃಷ್ಣಮೃಗಗಳಿಗೆ ಆಹಾರ ನೀಡುವ ತಟ್ಟೆ, ಅವುಗಳ ಆರೈಕೆಗೆ ಬಳಸುವ ವಸ್ತುಗಳನ್ನು ಜಿಂಕೆ, ಕಡವೆಗಳ ಬಳಿ ಒಯ್ಯದಂತೆ ಸಿಬ್ಬಂದಿಗೆ ತಿಳಿಸಿದ್ದೇವೆ' ಎಂದರು.

ಕೃಷ್ಣಮೃಗಗಳ ಮರಣೋತ್ತರ ಪರೀಕ್ಷೆ

ಬೆಳಗಾವಿ: ತಾಲ್ಲೂಕಿನ ಭೂತರಾಮನಹಟ್ಟಿಯ ರಾಣಿ ಚನ್ನಮ್ಮ ಕಿರು ಮೃಗಾಲಯಕ್ಕೆ ಭಾನುವಾರ ಭೇಟಿ ನೀಡಿದ ಬೆಂಗಳೂರಿನ ತಜ್ಞರ ತಂಡದ ಸಮ್ಮುಖದಲ್ಲಿ ನಾಲ್ಕು ಕೃಷ್ಣಮೃಗಗಳ ಮರಣೋತ್ತರ ಪರೀಕ್ಷೆ ನಡೆಸಿ, ಅಂತ್ಯಕ್ರಿಯೆ ನೆರವೇರಿಸಲಾಯಿತು.

ಗುರುವಾರ 8, ಶನಿವಾರ ನಸುಕಿನಲ್ಲಿ 20 ಸೇರಿ 28 ಕೃಷ್ಣಮೃಗ ಸಾವನ್ನಪ್ಪಿದ್ದವು. ಸ್ಥಳೀಯ ಪಶುವೈದ್ಯರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ನೇತೃತ್ವದಲ್ಲಿ 25 ಕೃಷ್ಣಮೃಗಗಳ ಮರಣೋತ್ತರ ಪರೀಕ್ಷೆ ನಡೆಸಿ, ಅಂತ್ಯಕ್ರಿಯೆ ನಡೆಸಲಾಗಿತ್ತು. ತಜ್ಞರ ನೇತೃತ್ವದಲ್ಲಿ ಪರೀಕ್ಷೆ ನಡೆಸುವುದಕ್ಕಾಗಿ ಮೂರು ಕೃಷ್ಣಮೃಗಗಳ ಕಳೇಬರಗಳನ್ನು ಸಂಗ್ರಹಿಸಿ ಇಡಲಾಗಿತ್ತು.

ಈ ನಡುವೆ ಶನಿವಾರ ತಡರಾತ್ರಿಯೂ ಒಂದು ಕೃಷ್ಣಮೃಗ ಮೃತಪಟ್ಟಿತು. ಇದೂ ಸೇರಿ, ಸಂಗ್ರಹಿಸಿದ್ದ ಮೂರು ಕಳೇಬರಗಳ ಮರಣೋತ್ತರ ಪರೀಕ್ಷೆಯನ್ನು ತಜ್ಞರ ಸಮ್ಮುಖದಲ್ಲಿ ಭಾನುವಾರ ನಡೆಸಲಾಯಿತು.

'ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶದಂತೆ ತನಿಖೆ ನಡೆಸಿದ ನಂತರ ಕೃಷ್ಣಮೃಗಗಳ ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

'ಈ ಪ್ರಕರಣದಲ್ಲಿ ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಸಂಸದ ಜಗದೀಶ ಶೆಟ್ಟರ್ ಒತ್ತಾಯಿಸಿದರು

ದಾಳಿ, ನಿರ್ಲಕ್ಷ್ಯ, ವಿಷಪ್ರಾಶನವಾಗಿದ್ದರೆ ನೇರ ಹೊಣೆ ಮಾಡಬಹುದು. ಆದರೆ, ಇದು ರೋಗಕ್ಕೆ ಸಂಬಂಧಿಸಿದ ಘಟನೆ. ಪೂರ್ಣ ತನಿಖೆ ಮುಗಿದ ಮೇಲೆ ನಿರ್ಧಾರ ತೆಗೆದುಕೊಳ್ಳುತ್ತೇವೆ

ಅನೀಲ ಪನ್ವಾರ್, ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ

ಮೃಗಾಲಯದಲ್ಲಿ ವಾರಕ್ಕೊಮ್ಮೆ ಪ್ರಾಣಿ– ಪಕ್ಷಿಗಳ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ. ಕೃಷ್ಣಮೃಗಗಳಿಗೆ ಸೋಂಕು ತಗಲಿದಾಗ ಯಾವುದೇ ಲಕ್ಷಣಗಳು ಕಂಡುಬಂದಿರಲಿಲ್ಲ. ಹೀಗಾಗಿ ಹೆಚ್ಚು ಅನಾಹುತವಾಗಿದೆ

ಕ್ರಾಂತಿಕುಮಾರ್ ಡಿಸಿಎಫ್, ಬೆಳಗಾವಿ

ಮೃಗಾಲಯದ ಪ್ರಾಣಿಗಳ ಆವರಣದ ಸ್ವಚ್ಛತೆ, ಆಹಾರ ನೀಡುವಿಕೆ, ಆರೋಗ್ಯ, ಲಸಿಕೆ ನೀಡುವಿಕೆ, ಆಡಳಿತ, ರಕ್ಷಣೆ ಕುರಿತು 2 ವರ್ಷಗಳಲ್ಲಿ ಅಧಿಕಾರಿಗಳು ಎಷ್ಟು ಬಾರಿ ತಪಾಸಣೆ ನಡೆಸಿದ್ದಾರೆ ಎಂಬ ವಿವರ ಬಹಿರಂಗಪಡಿಸಬೇಕು

ರಾಘವೇಂದ್ರ, ಆರ್‌ಟಿಐ ಕಾರ್ಯಕರ್ತ

ಮತ್ತೊಂದು ಕೃಷ್ಣಮೃಗ ಸಾವು

ತಾಲ್ಲೂಕಿನ ಭೂತರಾಮನಹಟ್ಟಿಯ ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಭಾನುವಾರ ಸಂಜೆ ಮತ್ತೊಂದು ಕೃಷ್ಣಮೃಗ ಮೃತಪಟ್ಟಿದ್ದು, ಸಾವಿನ ಸಂಖ್ಯೆ 30ಕ್ಕೆ ಏರಿಕೆಯಾಗಿದೆ.

'ಸ್ಥಳೀಯ ಪಶುವೈದ್ಯರ ನೇತೃತ್ವದಲ್ಲಿ ಮರಣೋತ್ತರ ಪರೀಕ್ಷೆ ಮಾಡಿ, ಅದರ ಅಂತ್ಯಕ್ರಿಯೆ ನಡೆಸಿದ್ದೇವೆ' ಎಂದು ಮೃಗಾಲಯದ ವಲಯ ಅರಣ್ಯಾಧಿಕಾರಿ ಪವನ ಕುರನಿಂಗ 'ಪ್ರಜಾವಾಣಿ'ಗೆ ತಿಳಿಸಿದರು.

ಸುದ್ದಿ 2 ನಿಮಿಷ

ರಾಜ್ಯ ರಾಜಕಾರಣದ ಚರ್ಚೆ ಆಗಿಲ್ಲ: ಸತೀಶ ಜಾರಕಿಹೊಳಿ

ಬೆಳಗಾವಿ: 'ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಉಪಾಧ್ಯಕ್ಷರಾಗಿ ಸುನೀಲ ಹನುಮಣ್ಣವರ ಆಯ್ಕೆಯಾದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ಭೇಟಿಯಾಗಿದ್ದೇವೆಯೇ ಹೊರತು, ರಾಜ್ಯ ರಾಜಕಾರಣದ ಬಗ್ಗೆ ಚರ್ಚಿಸಿಲ್ಲ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾಯಕತ್ವ ಗೊಂದಲದ ವಿಚಾರವಾಗಿ ಎಲ್ಲ ವಿದ್ಯಮಾನಗಳನ್ನು ವರಿಷ್ಠರು ಗಮನಿಸುತ್ತಿದ್ದಾರೆ. ಈ ಬಗ್ಗೆ ಅವರೇ ಸ್ಪಷ್ಟಪಡಿಸಿದರೆ ಉತ್ತಮ' ಎಂದರು.

'ಸತೀಶ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷರಾಗಲಿದ್ದಾರೆ' ಎಂದು ಚರ್ಚೆ ನಡೆಯುತ್ತಿರುವ ಕುರಿತು ಪ್ರತಿಕ್ರಿಯಿಸಿದ ಸತೀಶ, 'ಹೀಗೆ ಚರ್ಚೆ ನಡೆಯುವುದು ಸ್ವಾಭಾವಿಕ. ಅದಕ್ಕೆ ಕಡಿವಾಣ ಹಾಕಲಾಗದು' ಎಂದರು.

'ಬಿಹಾರ ವಿಧಾನಸಭೆಯಲ್ಲಿ ಗೆಲ್ಲುತ್ತೇವೆ ಎಂಬ ನಮ್ಮ ಆಶಯ ಈಡೇರಿಲ್ಲ. ಇವಿಎಂ ಕುರಿತಾಗಿ ಅನುಮಾನ ಸದಾ ಇದೆ. ಕೇಂದ್ರ ಸರ್ಕಾರ ಮತ್ತು ಚುನಾವಣೆ ಆಯೋಗ ಈ ಬಗ್ಗೆ ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದರು.

'ಬೆಳಗಾವಿಯಲ್ಲಿ ಡಿ.8ರಿಂದ ಆರಂಭವಾಗಲಿರುವ ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದರು.

ಗರ್ಭಕೋಶದಲ್ಲಿತ್ತು 10 ಕೆ.ಜಿ ಗಡ್ಡೆ



ಹರಿಹರ (ದಾವಣಗೆರೆ): ಮಹಿಳೆಯೊಬ್ಬರ ಗರ್ಭಕೋಶದಲ್ಲಿ ಬೆಳೆದಿದ್ದ ಬೃಹತ್ ಗಾತ್ರದ ಗಡ್ಡೆಯನ್ನು ಇಲ್ಲಿನ ಶುಭೋದಯ ನರ್ಸಿಂಗ್ ಹೋಂನಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಹೊರ ತೆಗೆಯಲಾಗಿದೆ.

ಹೊಟ್ಟೆನೋವಿನ ಕಾರಣಕ್ಕೆ ಆಸ್ಪತ್ರೆಗೆ ಬಂದಿದ್ದ 46 ವರ್ಷದ ಮಹಿಳೆಯನ್ನು ತಪಾಸಣೆಗೆ ಒಳಪಡಿಸಿದಾಗ, ಗರ್ಭಕೋಶದಲ್ಲಿ ಗಡ್ಡೆ ಇರುವುದು ಕಂಡುಬಂದಿದೆ. ಶನಿವಾರ ಶಸ್ತ್ರಚಿಕಿತ್ಸೆ ನಡೆಸಲಾಯಿತು.

'ಕಲ್ಲಂಗಡಿ ಆಕಾರದಲ್ಲಿದ್ದ ಗಡ್ಡೆಯು 45 ಇಂಚು ಸುತ್ತಳತೆ ಹೊಂದಿದ್ದು, 10.5 ಕೆ.ಜಿ. ತೂಕವಿದೆ. ಮಹಿಳೆ ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ನರ್ಸಿಂಗ್ ಹೋಂನ ಪ್ರಸೂತಿ ತಜ್ಞೆ ಸವಿತಾ ಜೆ. ತಿಳಿಸಿದರು.

'ಈ ಗಡ್ಡೆಗೆ ಫೈಬ್ರಾಸ್ ಎನ್ನಲಾಗುತ್ತದೆ. ಇದು ಗೋಲಿ ಆಕಾರದಿಂದ ಕಲ್ಲಂಗಡಿ ಹಣ್ಣಿನ ಗಾತ್ರದವರೆಗೂ ಬೆಳೆಯುತ್ತದೆ. ಆದರೆ ಕ್ಯಾನ್ಸರ್ ಕಾರಕವಲ್ಲ' ಎಂದು ಹೇಳಿದರು.

ವೈದ್ಯರಾದ ಹಾಲೇಶ್ ಬಿ., ಸುರೇಶ್ ಬಸರಕೋಡ್ ಹಾಗೂ ನವೀನ್ ಅವರೂ ಶಸ್ತ್ರಚಿಕಿತ್ಸೆ ನಡೆಸಿದ ತಂಡದಲ್ಲಿದ್ದರು.

ಕಾರು ಬೈಕ್ ಡಿಕ್ಕಿ: ಇಬ್ಬರು ಸಜೀವ ದಹನ

ಕಮಲಾಪುರ(ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಹಾಗಾಂವ ಕ್ರಾಸ್ ಬಳಿ ಶನಿವಾರ ರಾತ್ರಿ ಕಾರು-ಬೈಕ್ ನಡುವೆ ಡಿಕ್ಕಿಯಾಗಿ ಬೈಕ್‌ಗೆ ಬೆಂಕಿ ಹೊತ್ತಿಕೊಂಡಿದ್ದರಿಂದ ಇಬ್ಬರು ಯುವಕರು ಬೆಂಕಿಯ ಕೆನ್ನಾಲಿಗೆಗೆ ಸಿಲುಕಿ ಸಾವಿಗೀಡಾಗಿದ್ದಾರೆ.

ಕಮಲಾಪುರ ತಾಲ್ಲೂಕಿನ ಸಿರಗಾಪುರ ಗ್ರಾಮದ ಆಕಾಶ ಚಂದ್ರಕಾಂತ ಧನವಂತ (19), ಭೂಸಣಗಿ ಗ್ರಾಮದ ಸುಶೀಲ್ ಮಲ್ಲಿಕಾರ್ಜುನ (28) ಮೃತ ಯುವಕರಾಗಿದ್ದಾರೆ.

ಆಕಾಶ ಸ್ಥಳದಲ್ಲೆ ಮೃತಪಟ್ಟಿದ್ದು, ಸುಶೀಲ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಕೊನೆಯುಸಿರೆಳೆದಿದ್ದಾರೆ. ಆಕಾಶ ಹಾಗೂ ಸುಶೀಲ್ ಇಬ್ಬರು ದುಬಾರಿ ಸ್ಪೋರ್ಟ್ಸ್ ಬೈಕ್ ಮೇಲೆ ಸಿರಗಾಪುರದಿಂದ ಮಹಾಗಾಂವ ಕ್ರಾಸ್‌ಗೆ ತೆರಳುತ್ತಿದ್ದರು.

ಹೈದರಾಬಾದ್‌ನಿಂದ ಕಲಬುರಗಿಗೆ ಕಾರು ತೆರಳುತ್ತಿತ್ತು. ಎರಡರ ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಬೈಕ್‌ಗೆ ಬೆಂಕಿ ಹೊತ್ತಿಕೊಂಡಿದೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸರು ಸುಶೀಲನನ್ನು ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಿದ್ದು ಫಲ ನೀಡಲಿಲ್ಲ.

ಮುದ್ರಣ ಲೇಖನ ಸಾಮಗ್ರಿ, ಪ್ರಕಟಣೆಗಳ ಇಲಾಖೆಗೆ ದರ ನಿಗದಿಯ ಹೊಣೆ

ಪುಟವಾರು ದರ ಪರಿಷ್ಕರಣೆ ಕಗ್ಗಂಟು

• ವರುಣ ಹೆಗಡೆ

ಬೆಂಗಳೂರು: ರಾಜ್ಯ ಸರ್ಕಾರವು ಎಂಟು ವರ್ಷಗಳ ಬಳಿಕ ಪುಸ್ತಕಗಳ ಪುಟವಾರು ದರ ಪರಿಷ್ಕರಣೆಗೆ ಕ್ರಮ ಕೈಗೊಂಡಿದೆ. ಇದೇ ಮೊದಲ ಬಾರಿಗೆ ದರ ಪರಿಷ್ಕರಣೆಯ ಹೊಣೆ ಹೊತ್ತಿರುವ ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ ಮೂರು ತಿಂಗಳು ಕಳೆದರೂ ಗೊತ್ತುಪಡಿಸಬಹುದಾದ ಬೆಲೆಯ ವಿವರವನ್ನು ಸರ್ಕಾರಕ್ಕೆ ಸಲ್ಲಿಸಿಲ್ಲ.

ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯು ಸರ್ಕಾರಿ ಮುದ್ರಣಾಲಯವನ್ನು ನಿರ್ವಹಣೆ ಮಾಡುತ್ತಿದೆ. ಪುಸ್ತಕದ ಪುಟಗಳ ದರ ನಿಗದಿ ಮಾಡಿದ ಅನುಭವ ಈ ಇಲಾಖೆಗೆ ಇಲ್ಲ. 2017ರಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದಲೇ ದರ ಪರಿಷ್ಕರಣೆ ಮಾಡಲಾಗಿತ್ತು. ಈ ಬಾರಿ ಗ್ರಂಥಾಲಯ ಇಲಾಖೆಯು ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಗೆ ದರ ಪರಿಷ್ಕರಣೆಯ ಜವಾಬ್ದಾರಿ ನೀಡಿರುವುದು ಪ್ರಕಾಶಕರ ಅಸಮಾಧಾನಕ್ಕೆ ಕಾರಣವಾಗಿದೆ. ಇದಕ್ಕೆ ಪೂರಕ ಎಂಬಂತೆ ಆದೇಶ ಮಾಡಿ ಮೂರು ತಿಂಗಳು ಕಳೆದರೂ ನಿಗದಿಪಡಿಸಬಹುದಾದ ಬೆಲೆಯ ಮಾಹಿತಿಯನ್ನು ಇಲಾಖೆ ಒದಗಿಸಿಲ್ಲ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಖರೀದಿಸುವ ಪುಸ್ತಕಗಳಿಗೆ ಸದ್ಯ ಪುಟವೊಂದಕ್ಕೆ 70 ಪೈಸೆಯಿದೆ. ಕಾಗದ ಹಾಗೂ ಮುದ್ರಣದ ದರ, ಪೆಟ್ರೋಲ್ ಮತ್ತು ಡಿಸೇಲ್ ದರ ಏರಿಕೆ, ಸಾಗಾಣಿಕೆ ವೆಚ್ಚ ಹೆಚ್ಚಳ ಹಾಗೂ ಕಾಗದಕ್ಕೆ ಶೇ 18ರಷ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸುತ್ತಿರುವ ಕಾರಣ ಪುಟವಾರು ದರ ಏರಿಕೆಗೆ ಪ್ರಕಾಶಕರು ಪಟ್ಟು ಹಿಡಿದಿದ್ದಾರೆ. ಪ್ರತಿ ಪುಟಕ್ಕೆ 50 ಪೈಸೆ ಹೆಚ್ಚಿಸುವಂತೆ ಸರ್ಕಾರಕ್ಕೆ ಮನವಿ ಮಾಡುತ್ತಾ ಬಂದಿದ್ದಾರೆ.

ದರದ ಗೊಂದಲ: ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಮುದ್ರಣಾಲಯವು ಸರ್ಕಾರಿ ಕಿರು ಹೊತ್ತಿಗೆಗಳು ಸೇರಿ ಆಯ್ದ ಸರ್ಕಾರಿ ಪುಸ್ತಕಗಳನ್ನು ಮಾತ್ರ ಮುದ್ರಿಸುತ್ತಿದೆ. ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ಪುಟವಾರು ದರ ಪರಿಷ್ಕರಣೆಗೆ ಸೂಕ್ತ ಮಾನದಂಡ ಗೊತ್ತುಪಡಿಸದ ಕಾರಣ, ಇಲಾಖೆಯ ಅಧಿಕಾರಿಗಳು ಗೊಂದಲಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಈವರೆಗೂ ದರದ ಬಗ್ಗೆ ಯಾವುದೇ ಕ್ರಮಕೈಗೊಂಡಿಲ್ಲ. ಇದರಿಂದಾಗಿ ದರ ಪರಿಷ್ಕರಣೆ ಕಗ್ಗಂಟಾಗಿ ಪರಿಣಮಿಸಿದೆ.

'ಮುದ್ರಣ ಸೇರಿ ವಿವಿಧ ಬೆಲೆಗಳು ಹೆಚ್ಚಿರುವ ಪರಿಣಾಮ, ಪುಟವಾರು ದರ ಹೆಚ್ಚಳಕ್ಕೆ ಸರ್ಕಾರಕ್ಕೆ ಮನವಿ ಮಾಡಲಾಗುತ್ತಿದೆ. ಕಾಗದದ ಅಳತೆ ಹಾಗೂ ಗುಣಮಟ್ಟಕ್ಕೆ ಅನುಗುಣವಾಗಿ ದರ ನಿಗದಿ ಮಾಡಬೇಕಿದೆ. ಈ ದರ ನಿಗದಿಯನ್ನು ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಗೆ ನೀಡುವ ಮೂಲಕ ಅನಗತ್ಯವಾಗಿ ವಿಳಂಬ ಮಾಡಲಾಗುತ್ತಿದೆ' ಎಂದು ಪ್ರಕಾಶಕ ಸೃಷ್ಟಿ ನಾಗೇಶ್ ಬೇಸರ ವ್ಯಕ್ತಪಡಿಸಿದರು.



ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯು ಪುಟವಾರು ದರದ ವಿವರ ಸಲ್ಲಿಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ

ಬಸವರಾಜೇಂದ್ರ ಎಚ್., ಸಾರ್ವಜನಿಕ ಗ್ರಂಥಾಲಯ ಇಲಾಖೆ ಆಯುಕ್ತ

ಖರೀದಿಯಾಗದ ಪುಸ್ತಕಗಳು

ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಖರೀದಿಸಲಾದ 2020ನೇ ಸಾಲಿನ ಪುಸ್ತಕಗಳ ಹಣ ಪೂರ್ಣ ಪ್ರಮಾಣದಲ್ಲಿ ಇನ್ನೂ ಪಾವತಿಯಾಗಿಲ್ಲ. ಈ ಯೋಜನೆಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಿರದ ಕಾರಣ ಯೋಜನೆಯನ್ನು ಸ್ಥಗಿತ ಮಾಡಲಾಗಿದೆ.

2022ನೇ ಸಾಲಿಗೆ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನು ಪ್ರದರ್ಶಿಸಿದ್ದರೂ, ಅಂತಿಮ ಪಟ್ಟಿ ಬಿಡುಗಡೆ ಮಾಡಿಲ್ಲ. ಯೋಜನೆಯಡಿ ಕೃತಿಯೊಂದರ 300 ಪ್ರತಿಗಳನ್ನು ಖರೀದಿಸಲಾಗುತ್ತಿತ್ತು. ಈಗ ಖರೀದಿ ನಡೆಯದ ಪರಿಣಾಮ ಯೋಜನೆಯನ್ನೇ ನಂಬಿದ್ದ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಎ.ಸಿ ಕೋರ್ಟ್ ಪ್ರಕರಣ ವಾಪಸ್

ಒಂದನೇ ಪುಟದಿಂದ...

ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ರಾಮನಗರ, ಮಧುಗಿರಿ, ಕೋಲಾರ, ತುಮಕೂರು, ಕುಂದಾಪುರ, ತಿಪಟೂರು, ಶಿವಮೊಗ್ಗ ಈ ಒಂಬತ್ತು ಉಪ ವಿಭಾಗಾಧಿಕಾರಿಗಳು ಹೆಚ್ಚಿನ ಸಂಖ್ಯೆಯ (ಒಟ್ಟು 2,290) ಪ್ರಕರಣಗಳನ್ನು ಮರು ವಿಚಾರಣೆಗಾಗಿ ತಹಶೀಲ್ದಾರ್‌ಗಳಿಗೆ ಹಿಂದಿರುಗಿಸಿದ್ದಾರೆ. ಈ ಉಪ ವಿಭಾಗಗಳಲ್ಲಿ ತಹಶೀಲ್ದಾರ್‌ಗಳಿಗೆ ಹಿಂದಿರುಗಿಸಿರುವ ಪ್ರಕರಣಗಳನ್ನು ಸಮರ್ಪಕ ಕಾರಣಗಳೊಂದಿಗೆ ಹಿಂದಿರುಗಿಸಲಾಗಿದೆಯೇ ಎಂದು ವಿವರವಾದ ವರದಿಯನ್ನು ಏಳು ದಿನಗಳ ಒಳಗೆ ನೀಡುವಂತೆ ಆಯಾ ಜಿಲ್ಲಾಧಿಕಾರಿಗಳಿಗೆ ಸಚಿವರು ಟಿಪ್ಪಣಿ ರವಾನಿಸಿದ್ದಾರೆ.

ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ಇರುವ ಆರ್‌ಆರ್‌ಟಿ (ರೆವೆನ್ಯೂ ರೆಕಾರ್ಡ್ಸ್ ಟ್ರಾನ್ಸಾಕ್ಷನ್) ಮತ್ತು ಪಿಟಿಸಿಎಲ್ (ಪರಿಶಿಷ್ಟರ ಜಮೀನುಗಳ ಅಕ್ರಮ ಪರಭಾರೆ ತಡೆಯುವ ಕಾಯ್ದೆ) ತಕರಾರು ಪ್ರಕರಣಗಳನ್ನು ಆರು ತಿಂಗಳ ಒಳಗೆ ವಿಲೇವಾರಿ ಮಾಡಬೇಕು ಎಂಬುದು ಕಾನೂನು. ಆದರೆ, ಈ ಅವಧಿ ಮೀರಿದ ಸಾವಿರಾರು ಪ್ರಕರಣಗಳು ಇತ್ಯರ್ಥವಾಗದೆ ಎ.ಸಿ ಕೋರ್ಟ್‌ಗಳಲ್ಲಿ ಇವೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರ ವಹಿಸಿಕೊಂಡಾಗ, ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ಒಂದು ವರ್ಷಕ್ಕಿಂತ ಹೆಚ್ಚಿನ 59,339 ಪ್ರಕರಣಗಳು ವಿಲೇ ಆಗದೆ ಬಾಕಿ ಇದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಬಾಕಿ ಪ್ರಕರಣಗಳ ವಿಲೇವಾರಿಗೆ ಅಭಿಯಾನ ಮಾದರಿಯಲ್ಲಿ ಕ್ರಮ ತೆಗೆದುಕೊಂಡಿದ್ದರು. ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ವಿಶೇಷ ಉಪ ವಿಭಾಗಾಧಿಕಾರಿಗಳನ್ನು ನೇಮಕ ಮಾಡಿದ್ದರು. ಕಳೆದ ಜನವರಿ ವೇಳೆಗೆ ಶೇ 55ರಷ್ಟು ಪ್ರಕರಣಗಳನ್ನು ವಿಲೇ ಮಾಡಲು ಅವರು ಸಫಲರಾಗಿದ್ದರು. ಉಳಿದಿದ್ದ 29 ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ಆರು ತಿಂಗಳ ಒಳಗೆ ಇತ್ಯರ್ಥಗೊಳಿಸಬೇಕೆಂದು ಉಪ ವಿಭಾಗಾಧಿಕಾರಿಗಳಿಗೆ ಗಡುವು ವಿಧಿಸಿದ್ದರು. ಆದರೂ ಪ್ರಕರಣಗಳ ವಿಲೇವಾರಿ ನಿರೀಕ್ಷೆಯಂತೆ ಆಗಿಲ್ಲ.

ಹೆಚ್ಚು ಪ್ರಕರಣಗಳನ್ನು ಹೊಂದಿರುವ (ಎ.ಸಿ ಕೋರ್ಟ್‌ಗಳು) ಆಯ್ದ ಉಪ ವಿಭಾಗಾಧಿಕಾರಿಗಳ ಸಭೆಯನ್ನು ಕೃಷ್ಣ ಬೈರೇಗೌಡ ಅವರು ಅ. 31ರಂದು ನಡೆಸಿದ್ದರು. ಈ ವೇಳೆ ಕೆಲವು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣಗಳ ವಿಲೇವಾರಿಯ ಗುಣಮಟ್ಟದ ಬಗ್ಗೆ ಕೆಲವು ಆತಂಕಕಾರಿ ವಿಷಯಗಳನ್ನು ಗಮನಿಸಿದ್ದ ಅವರು, ಆ ಉಪ ವಿಭಾಗಗಳಿರುವ ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಟಿಪ್ಪಣಿ ಕಳುಹಿಸಿ, ಸಮಗ್ರ ವರದಿ ನೀಡುವಂತೆ ಸೂಚಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್

ORCHIDS The International School Presents ಪ್ರಜಾವಾಣಿ QUIZ CHAMPIONSHIP

ಬೆಂಗಳೂರು: ವಿದ್ಯಾರ್ಥಿಗಳಲ್ಲಿನ ಜ್ಞಾನದ ಮಟ್ಟವನ್ನು ಪರೀಕ್ಷಿಸಲು 'ಪ್ರಜಾವಾಣಿ– ರಸಪ್ರಶ್ನೆ ಚಾಂಪಿಯನ್‌ಶಿಪ್' ಮತ್ತೆ ಬಂದಿದ್ದು, ಈ ಸ್ಪರ್ಧೆಯ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ.

ಈ ಚಾಂಪಿಯನ್‌ಶಿಪ್‌ನಲ್ಲಿ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು. ಸ್ಪರ್ಧೆಯು ಆರು ವಲಯಗಳಲ್ಲಿ ಮೊದಲ ಹಂತದಲ್ಲಿ ನಡೆಯಲಿದೆ. ಮೈಸೂರು, ಹುಬ್ಬಳ್ಳಿ, ಬಾಗಲಕೋಟೆ, ಬೀದರ್, ದಾವಣಗೆರೆ ಮತ್ತು ಬೆಂಗಳೂರು ವಲಯಗಳಲ್ಲಿ ಗೆಲುವು ಸಾಧಿಸಿದವರು ರಾಜ್ಯಮಟ್ಟದ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ವಲಯಗಳಲ್ಲಿ ವಿಜೇತರಾದ ಎಲ್ಲರಿಗೂ ಒಂದು ದಿನದ ಆವಿಷ್ಕಾರ ಕಾರ್ಯಾಗಾರವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರದಲ್ಲಿ ಸಮೃದ್ಧ ಕಲಿಕೆಯ ಅನುಭವ ಪಡೆಯಬಹುದು. ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ ಹೊರಹೊಮ್ಮಲು ಈ ಆವಿಷ್ಕಾರ ಕಾರ್ಯಾಗಾರವು ವೇದಿಕೆಯನ್ನು ಕಲ್ಪಿಸಲಿದೆ.

ಪ್ರಕ್ರಿಯೆ ಹೇಗೆ?: ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು.

ನೋಂದಣಿಗೆ ಸ್ಕ್ಯಾನ್ ಮಾಡಿ

ನೋಂದಾಯಿತ ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ವಲಯದಲ್ಲಿ 6 ಅಗ್ರ ತಂಡಗಳು ವಲಯ ಮಟ್ಟದ ಅಂತಿಮ ಹಂತಕ್ಕೆ ತಲುಪುತ್ತವೆ. ಆರು ವಲಯಗಳ ವಿಜೇತರು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯುತ್ತಾರೆ. ಅಂತಿಮ ಹಂತದ ಎಲ್ಲ ಸ್ಪರ್ಧಿಗಳಿಗೆ ಆವಿಷ್ಕಾರ ಕಾರ್ಯಾಗಾರ ನಡೆಸಲಾಗುತ್ತದೆ. ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿದೆ.

ನೋಂದಣಿ ಉಚಿತವಾಗಿದ್ದು, ಆಸಕ್ತರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ 'ಪ್ರಜಾವಾಣಿ– ರಸಪ್ರಶ್ನೆ ಚಾಂಪಿಯನ್‌ಶಿಪ್'ಗೆ ನೋಂದಾಯಿಸಿಕೊಳ್ಳಬಹುದು.

ಸಂಪರ್ಕಕ್ಕೆ: 7338018541 (ಕಚೇರಿ ಅವಧಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಲಭ್ಯ)

ಚಿತ್ತಾಪುರ: ಪಥಸಂಚಲನಕ್ಕೆ ಸರ್ಪಗಾವಲು

ಒಂದನೇಪುಟದಿಂದ...

ಹೈಕೋರ್ಟ್ 'ಅಂಗಳ'ದಲ್ಲಿ ಚಿತ್ತಾಪುರ ತಾಲ್ಲೂಕು ಆಡಳಿತ ನೀಡಿದ್ದ ಷರತ್ತುಗಳಿಗೆ ಬದ್ಧವಾಗಿ 50 ಮಂದಿ 'ಘೋಷ್'ನವರು ಹಾಗೂ 300 ಗಣವೇಷಧಾರಿಗಳು ಹಲವು ತಂಡಗಳಾಗಿ ಪಥಸಂಚಲನದಲ್ಲಿ ಹೆಜ್ಜೆಹಾಕಿದರು. ಮಧ್ಯಾಹ್ನ 3.45ಕ್ಕೆ ಆರಂಭವಾದ ಪಥಸಂಚಲನ 45 ನಿಮಿಷಗಳಲ್ಲಿ ಮುಗಿಯಿತು.

ರಸ್ತೆಯ ಇಕ್ಕೆಲಗಳಲ್ಲಿ ಜಮಾಯಿಸಿದ್ದ ಮಹಿಳೆಯರೂ ಸೇರಿದಂತೆ ಸಾರ್ವಜನಿಕರು ಗಣವೇಷಧಾರಿಗಳ ಮೇಲೆ ಪುಷ್ಪವೃಷ್ಟಿಗೈದು, ಸ್ವಾಗತಿಸಿದರು.

ಗಣವೇಷಧಾರಿಗಳು ಬಜಾಜ್ ಕಲ್ಯಾಣ ಮಂಟಪದಿಂದ ಹೊರಟು ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ, ಬಸವ ಆಸ್ಪತ್ರೆ, ಹಳೇ ಗಂಜ್ ವೃತ್ತ, ಕೆನರಾ ಬ್ಯಾಂಕ್ ಎದುರಿನಿಂದ ತಾಲ್ಲೂಕು ಪಂಚಾಯಿತಿ ವೃತ್ತ, ಬಸವೇಶ್ವರ ವೃತ್ತದ ಮೂಲಕ ಮರಳಿ ಬಜಾಜ್ ಕಲ್ಯಾಣ ಮಂಟಪ ತಲುಪಿದರು. 1200 ಪೊಲೀಸರು, ಡ್ರೋನ್ ಹಾಗೂ 56 ಸಿಸಿ ಟಿವಿ ಕ್ಯಾಮೆರಾಗಳ ನಿಗಾದಲ್ಲಿ 'ಪಥಸಂಚಲನ' ಜರುಗಿತು. ಹಲವು ಬಾಲಕಿಯರು ಭಾರತ ಮಾತೆಯ ವೇಷದಲ್ಲಿ ಕಂಗೊಳಿಸಿದರು. ಕೆಲ ಬಾಲಕರಿಗೂ ಗಣವೇಷ ತೊಡಿಸಲಾಗಿತ್ತು.

ಅ.19ರಂದು ನಡೆಯಬೇಕಿದ್ದ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಚಿತ್ತಾಪುರ ತಾಲ್ಲೂಕು ಆಡಳಿತ ಅನುಮತಿ ನಿರಾಕರಿಸಿತ್ತು. ಅದನ್ನು ಪ್ರಶ್ನಿಸಿ ಆರ್‌ಎಸ್‌ಎಸ್ ಜಿಲ್ಲಾ ಸಂಘಚಾಲಕ ಅಶೋಕ ಪಾಟೀಲ ಹೈಕೋರ್ಟ್ ಮೆಟ್ಟಿಲೇರಿದ್ದರು. ಬಳಿಕ ಈ ಪ್ರಕರಣವು ಸಂಘಟನೆಗಳ 'ಶಕ್ತಿ' ಪ್ರದರ್ಶನ, ರಾಜಕೀಯ ಮೇಲಾಟಕ್ಕೂ ಕಾರಣವಾಗಿತ್ತು. ಎರಡು ಸುತ್ತಿನ ಶಾಂತಿಸಭೆ, ಒಂದು ತಿಂಗಳ ಹಗ್ಗಜಗ್ಗಾಟದ ಬಳಿಕ ಹೈಕೋರ್ಟ್ ಸಮ್ಮುಖದಲ್ಲಿ ಪಥಸಂಚಲನಕ್ಕೆ ಆರ್‌ಎಸ್‌ಎಸ್‌ಗೆ ಷರತ್ತುಬದ್ಧ ಅನುಮತಿ ದೊರೆತಿತ್ತು.

ಕೆರಳಿಸುವ ಪೋಸ್ಟ್: ವ್ಯಕ್ತಿ ವಶಕ್ಕೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಪಥಸಂಚಲನ ಮುಗಿದ ಬೆನ್ನಲ್ಲೆ, 'ಗೆಲುವು ನಿಶ್ಚಿತ ಅಂದ ಮೇಲೆ ತಾಳ್ಮೆ ಸಹ ಅಗತ್ಯ. ಜೈ ಶ್ರೀರಾಮ. ನಿಲ್ಸಿದ್ರಿ ಅಂತ ನಿಲ್ಲುತ್ತೆ ಅನ್ಕೊಂಡ ನೀಲಿ ಬಣ್ಣಕ್ಕೆ ಏನು ಗೊತ್ತು ಕೇಸರಿ ಬಣ್ಣಗತ್ತು' ಎಂದು ಸಾಮಾಜಿಕ ಜಾಲತಾಣದಲ್ಲಿ ಸ್ಟೇಟಸ್ ಹಾಕಿಕೊಂಡಿದ್ದ ಯುವಕ ಪ್ರಶಾಂತ ಬಸವರಾಜ ಸಿಂಧೆ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದರು.

'ಸಂಚಲನ ಸೃಷ್ಟಿಸಿದ ಪಥಸಂಚಲನ'

'ಚಿತ್ತಾಪುರದಲ್ಲಿ ಅ.19ರಂದು ಗಣವೇಷಧಾರಿಗಳ ಪಥಸಂಚಲನ ನಡೆಯಬೇಕಿತ್ತು. ಸುಮಾರು ಒಂದು ತಿಂಗಳು ವಿಳಂಬವಾಗಿ ನ.16ಕ್ಕೆ ನಡೆದಿದೆ. ಕಾರಣಗಳ ಹಿನ್ನೆಲೆಗೆ ನಾನು ಹೋಗಲ್ಲ. ಆದರೆ, ಭಾನುವಾರ ನಡೆದ ಪಥಸಂಚಲನವು 'ಸಂಚಲನ' ಮೂಡಿಸಿದೆ. ಮಾರ್ಗದಲ್ಲಿ ಸಿಕ್ಕ ಸ್ವಾಗತ, ಪುಷ್ಪವೃಷ್ಟಿ, ತಾಯಂದಿರ ಸಮ್ಮುಖ, ಪೊಲೀಸರ ಬಿಗಿ ಭದ್ರತೆ ಎಲ್ಲವೂ ಪಥಸಂಚಲನದ ಸಂಭ್ರಮ ಹೆಚ್ಚಿಸಿದೆ' ಎಂದು ಆರ್‌ಎಸ್‌ಎಸ್ ಉತ್ತರ ಪ್ರಾಂತ ಪ್ರಚಾರ ಪ್ರಮುಖ ಕೃಷ್ಣ ಜೋಶಿ ಹೇಳಿದರು.

ಪಥಸಂಚಲನದ ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಸಂಘ 100 ವರ್ಷಗಳಲ್ಲಿ ಮಾಡಿದ ಸಾಧನೆಯನ್ನು ಅನೇಕರು ಪ್ರಶ್ನಿಸುತ್ತಿದ್ದಾರೆ. ಸಂಘವು 100 ವರ್ಷ ಒಂದು ವಿಚಾರಕ್ಕಾಗಿ, ಅಖಂಡವಾಗಿ, ಅವಿಚ್ಛಿನ್ನವಾಗಿ ದುಡಿಯುತ್ತಿದೆ. ದೇಶಕ್ಕೋಸ್ಕರ ಕೆಲಸ ಮಾಡುವ ಲಕ್ಷಾಂತರ ಜನರ ಸಂಘಟನೆಯನ್ನು ಕಟ್ಟಿದೆ. 100 ವರ್ಷಗಳ ಹಿಂದೆ ಅಸಂಘಟಿತರಾಗಿದ್ದ ಹಿಂದೂಗಳನ್ನು ಆರ್‌ಎಸ್‌ಎಸ್ ಸಂಘಟಿಸಿದೆ' ಎಂದರು.

ಟ್ರ್ಯಾಕ್ಟರ್‌ಗೆ ಬೆಂಕಿ: 10 ಜನರ ವಿಚಾರಣೆ

ಬಾಗಲಕೋಟೆ: ಜಿಲ್ಲೆಯ ಸಮೀರವಾಡಿ ಗೋದಾವರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಇತ್ತೀಚೆಗೆ ನಡೆದ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಜನರನ್ನು ವಶಕ್ಕೆ ಪಡೆದು, ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಮಹಾಲಿಂಗಪುರ ಪೊಲೀಸ್ ಠಾಣೆಯಲ್ಲಿ ಪೊಲೀಸರು ಸ್ವಯಂಪ್ರೇರಿತರಾಗಿ ಮೂರು ಪ್ರಕರಣ ದಾಖಲಿಸಿದ್ದರು. ವಿಡಿಯೊ ಆಧರಿಸಿ 10 ಜನರ ವಿಚಾರಣೆ ನಡೆಸಲಾಗುತ್ತಿದೆ.

'ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗಳ ಒತ್ತಡಕ್ಕೆ ಮಣಿದು ಕೆಲ ರೈತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಕರಣವನ್ನೂ ದಾಖಲಿಸಿದ್ದಾರೆ. ಬಂಧಿಸುವುದಾದರೆ ಎಲ್ಲರನ್ನೂ ಬಂಧಿಸಲಿ. ಜೈಲ್ ಭರೊ ಚಳವಳಿ ಮಾಡುತ್ತೇವೆ' ಎಂದು ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಅಧ್ಯಕ್ಷ ಬಸವಂತ ಕಾಂಬಳೆ ತಿಳಿಸಿದರು

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಬಹು ಆಯ್ಕೆ ಪ್ರಶ್ನೆಗಳು

33) ಕಿತ್ತೂರು ರಾಣಿ ಚೆನ್ನಮ್ಮ ಯಾವುದರ ವಿರುದ್ದ ಹೋರಾಡಿದಳು?

ಎ) ಖಾಯಂ ಜಮಿನುದಾರಿ ಪದ್ದತಿ ಬಿ) ರೈತುವಾರಿ ಪದ್ದತಿ
ಸಿ) ಸಹಾಯಕ ಸೈನ್ಯ ಪದ್ದತಿ ಡಿ) ದತ್ತು ಮಕ್ಕಳಿಗೆ ಹಕ್ಕಿಲ್ಲ

ಉತ್ತರ:– ಡಿ

34) ಕಿತ್ತೂರಿನ ಚೆನ್ನಮ್ಮಳನ್ನು ಬೆಂಬಲ ನೀಡುತ್ತಿದ್ದ ಸಂಗೊಳ್ಳಿ ರಾಯಣ್ಣನ ವಿರುದ್ದ ಸಂಚನ್ನು ರೂಪಿಸಿದವರು ಯಾರು?

ಎ) ಅಮಲ್ದಾರನಾಗಿದ್ದ ಕೃಷ್ಣರಾಯ ಬಿ) ಪೊಲೀಸ್ ಪರಮಪ್ಪ
ಸಿ) ದಿವಾನ್ ಚೆಮ್ಮಪ್ಪ ಡಿ) ಚಿಪ್ಪುರಂಡ ಸೊಮಣ್ಣ

ಉತ್ತರ:– ಎ

35)ಬ್ರಿಟಿಷರು ಚಿಕ್ಕವೀರರಾಜೇಂದ್ರನನ್ನು 1834ರಲ್ಲಿ ಪದಚ್ಯುತಗೊಳಿಸಿ ಅವನನ್ನು ಬೆಂಗಳೂರಿನ ಮೂಲಕ ಅಂತಿಮ ವಾಗಿ ಎಲ್ಲಿಗೆ ಸಾಗಿಸಿದರು?

ಎ) ಕಾಶಿ ಬಿ) ಮದ್ರಾಸ್
ಸಿ) ಕೋಲ್ಕತ್ತಾ ಡಿ) ದ್ವಾರಕಾ

ಉತ್ತರ:– ಎ

36)ರಾಜಮುಡಿ ಎಂಬ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಅರ್ಪಿಸಿದವರು ಯಾರು?

ಎ) ಚಿಕ್ಕದೇವರಾಜ ಒಡೆಯರ್ ಬಿ) ರಾಜ ಒಡೆಯರು
ಸಿ) ಜಯಚಾಮರಾಜೇಂದ್ರ ಒಡೆಯರ್ ಡಿ) ಯಾರೂ ಅಲ್ಲ

ಉತ್ತರ:– ಬಿ

ಪ್ರಶ್ನೋತ್ತರ:–

1) ಯಾವ ಕಾರಣಕ್ಕಾಗಿ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು?

ಉತ್ತರ:– 18ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರು ರಾಜಕೀಯ ಅಧಿಪತ್ಯವನ್ನು ಸಾಧಿಸುವ ಜೊತೆಜೊತೆಯಲ್ಲಿ ವ್ಯಾಪಾರ ಮತ್ತು ಕೃಷಿ ಕ್ಷೇತ್ರಗಳಲ್ಲಿ ಜನರನ್ನು ತಮ್ಮ ಹಿತಾಸಕ್ತಿಗಳಿಗಾಗಿ ಶೋಷಿಸಲು ತೊಡಗಿದರು. ಈ ಶೋಷಣೆಗಳು ಕರ್ನಾಟಕವೂ ಸೇರಿದಂತೆ ವಿವಿಧ ಭಾಗಗಳಲ್ಲಿ ಅಸ್ಥಿರತೆಯನ್ನು ಸೃಷ್ಟಿಸಿದವು. ದೇಶೀ ರಾಜರು ರಾಜಕೀಯ ಅಸ್ಥಿರತೆಯನ್ನು ಅನುಭವಿಸತೊಡಗಿದರು. ಇದರಿಂದ ಕರ್ನಾಟಕದ ಬಹುತೇಕ ಭಾಗಗಳು ಬ್ರಿಟಿಷರ ವಿರುದ್ಧ ಬಂಡೇಳಲು ಆರಂಭಿಸಿದವು.

2) ಗುಜರಾತಿನ ದ್ವಾರಕೆಯಿಂದ ಬಂದ ಯದುರಾಯನಿಗೆ ಶ್ರೀರಂಗಪಟ್ಟಣದ ರಾಣಿ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವ ಪರಿಸ್ಥಿತಿ ಯಾಕೆ ಉದ್ಭವವಾಯಿತು?

ಉತ್ತರ:– ವಿಜಯನಗರ ಸಾಮ್ರಾಜ್ಯದ ಪತನಾನಂತರ ಮೈಸೂರು ನಗರದ ಬಳಿಯ ಹದಿನಾಡು ಎಂಬ ಪಾಳೆಯಪಟ್ಟಿನಲ್ಲಿ ಶ್ರೀರಂಗಪಟ್ಟಣದ ಮಾಂಡಲಿಕನಿಗೆ ಅಧೀನನಾಗಿ ಚಾಮರಾಜ ಎಂಬುವನು ಆಳುತ್ತಿದ್ದನು. ಗಂಡು ಮಕ್ಕಳಿಲ್ಲದ ಇವನ ಕಾಲಾನಂತರ ಅವನ ದಳವಾಯಿ ಕಾರುಗಳ್ಳಿಯ ಮಾರನಾಯಕನು ರಾಜ್ಯಾಡಳಿತ ಮಾಡುತ್ತಿದ್ದ ಈತ ರಾಜಕುಮಾರಿಯನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಒತ್ತಾಯ ಮಾಡಿದನು. ಆದರೆ ಇದಕ್ಕೆ ಯಾರೂ ಒಪ್ಪಿಗೆ ನೀಡಲಿಲ್ಲ. ಇದೇ ವೇಳೆಗೆ ಗುಜರಾತಿನ ದ್ವಾರಕೆಯಿಂದ ಯದುರಾಯನು ತನ್ನ ತಮ್ಮ ಕೃಷ್ಣರಾಯನೊಂದಿಗೆ ಮೈಸೂರಿಗೆ ಬಂದನು. ತಾನಾಗಿಯೇ ಮುಂದೆ ಬಂದು ರಾಣಿಗೆ ಸಹಾಯ ಮಾಡಲು ಒಪ್ಪಿ ಮಾರನಾಯಕನನ್ನು ಕೊಂದನು. ಇದರಿಂದ ಸಂತೋಷಗೊಂಡ ರಾಣಿಯು ತನ್ನ ಮಗಳನ್ನು ಯದುರಾಯರಿಗೆ ವಿವಾಹ ಮಾಡಿಕೊಟ್ಟುಳು.

3) ಗುಜರಾತಿನ ದ್ವಾರಕೆಯಿಂದ ಯದುರಾಯನು ತನ್ನ ತಮ್ಮ ಕೃಷ್ಣರಾಯನೊಂದಿಗೆ ಮೈಸೂರಿಗೆ ಬಂದು. ತಾನಾಗಿಯೇ ಮುಂದೆ ಬಂದು ರಾಣಿಗೆ ಸಹಾಯ ಮಾಡಿದ ಪರಿಣಾಮ ಏನಾಯಿತು?

ಉತ್ತರ:– ಇದರ ಪರಿಣಾಮ:–

1) ಮಾರನಾಯಕನ ಉಪಟಳದಿಂದ ರಾಜ್ಯ ಮುಕ್ತವಾಯಿತು
2) ಮೈಸೂರಿನಲ್ಲಿ ಒಡೆಯರ ಪರಂಪರೆ ಆರಂಭವಾಯಿತು

4) ಮೈಸೂರಿನಲ್ಲಿ ಎಷ್ಟು ಒಡೆಯರು ಆಳ್ವಿಕೆ ಮಾಡಿದ್ದಾರೆ?

ಉತ್ತರ:– ಮೈಸೂರಿನಲ್ಲಿ ಯದುರಾಯರಿಂದ ಜಯಚಾಮರಾಜ ಒಡೆಯರ್‌ವರೆಗೆ 25 ಒಡೆಯರು ಆಳಿದ್ದಾರೆ

5) ಯಾರು ಶ್ರೀರಂಗಪಟ್ಟಣವನ್ನು ವಿಜಯನಗರದ ರಾಜ ಪ್ರತಿನಿಧಿಯಿಂದ ವಶಪಡಿಸಿಕೊಂಡು ರಾಜಧಾನಿಯನ್ನಾಗಿ ಮಾಡಿದರು?

ಉತ್ತರ:– ರಾಜ ಒಡೆಯರು

6) ಮೈಸೂರಿನಲ್ಲಿ ನವರಾತ್ರಿ ಉತ್ಸವ ಆರಭಿಸಿದವರು ಯಾರು?

ಉತ್ತರ:– ರಾಜ ಒಡೆಯರು

7) ರಾಜಮುಡಿ ಎಂಬ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಅರ್ಪಿಸಿದವರು ಯಾರು?

ಉತ್ತರ:– ರಾಜ ಒಡೆಯರು

8) ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ ಮತ್ತು ಬಿಜಾಪುರಗಳಲ್ಲಿ ಹಿಮ್ಮೆಟಿಸಿ, ಮಾಗಡಿ, ಮಧುಗಿರಿ, ಕೊರಟಗೆರೆ ಮತ್ತಿತರ ಪ್ರಾಂತ್ಯಗಳನ್ನು ವಶಪಡಿಸಿಕೊಂಡವರು ಯಾರು?

ಉತ್ತರ:– ಚಿಕ್ಕದೇವರಾಜ ಒಡೆಯರು

9) ಚಿಕ್ಕದೇವರಾಜ ಒಡೆಯರಿಗೆ ಇರುವ ಬಿರುದುಗಳು ಯಾರು?

ಉತ್ತರ:– ಚಿಕ್ಕದೇವರಾಜ ಒಡೆಯರಿಗೆ ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ, ನವಕೋಟಿ ನಾರಾಯಣ ಎಂಬ ಬಿರುದುಗಳಿದ್ದವು.

10) ಚಿಕ್ಕದೇವರಾಜ ಒಡೆಯರ ಸಾಧನೆಗಳೇನು?

ಉತ್ತರ:– ಇವರು ಒಂದು ಸಚಿವ ಸಂಪುಟ(ಅಠಾರ ಕಛೇರಿ)ವನ್ನು ನೇಮಕ ಮಾಡಿದ್ದರು. ಅಂಚೆ ವ್ಯವಸ್ಥೆಯು ಇವರ ಕಾಲದಲ್ಲಿ ಜಾರಿಯಾಯಿತು. ಕಾವೇರಿ ನದಿಗೆ ಅಣೆಕಟ್ಟು ಕಟ್ಟಿ ಚಿಕ್ಕದೇವರಾಜ ನಾಲೆ ಮತ್ತು ದೊಡ್ಡ ದೇವರಾಜ ನಾಲೆ ಎಂಬ ಎರಡು ಕಾಲುವೆಗಳನ್ನು ನಿರ್ಮಿಸಿ ಅಧಿಕ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರೆಯುವಂತೆ ಮಾಡಿದರು.

11) **ಚಿಕ್ಕದೇವರಾಜ ಒಡೆಯರು ಯಾರು ಯಾರಿಗೆ ಆಶ್ರಯ ನೀಡಿದರು?**

ಉತ್ತರ:– ಅನೇಕ ಕವಿಗಳಿಗೆ ಮತ್ತು ಪಂಡಿತರಿಗೆ ಆಶ್ರಯ ನೀಡಿದರು. ಉದಾ:– ತಿರುಮಲಾರ್ಯ, ಸಂಚಿ ಹೊನ್ನಮ್ಮ ಮುಂತಾದವರು

12) ದಕ್ಷಿಣ ಭಾರತದಲ್ಲಿ ಮೊಘಲರ ರಾಜಕೀಯ ಹತೋಟಿ ತಪ್ಪಿದ್ದು ಯಾವಾಗ?

ಉತ್ತರ:– ಮೊಘಲ್ ಚಕ್ರವರ್ತಿ ಔರಂಗಜೇಬ್‌ನ ಮರಣ 1707ರಲ್ಲಿ ಸಂಭವಿಸಿತು ಇದರೊಂದಿಗೆ ದಕ್ಷಿಣ ಭಾರತದಲ್ಲಿ ಮೊಘಲರ ರಾಜಕೀಯ ಹತೋಟಿ ತಪ್ಪಿತು.

13) ಯಾವ ವರ್ಷ ಚಿಕ್ಕದೇವರಾಜ ಒಡೆಯರ ಮರಣ ಹೊಂದಿದರು?

ಉತ್ತರ:– 1704

14) ಹೈದರಾಲಿಯು ಅರಸರಾಗಿದ್ದ ಯಾರನ್ನು ಗೃಹ ಬಂಧನದಲ್ಲಿರಿಸಿ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡನು?

ಉತ್ತರ:– ಎರಡನೇ ಕೃಷ್ಣರಾಜ ಒಡೆಯ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

CURRENT ELECTRICITY

23. Write a brief note on the grouping of cells in parallel.

Ans: - Grouping of cells in parallel

(……Contd)

If the combination is connected to an external resistance R, current I flowing through R is given by,


$$I = \frac{E}{(R + r_e)} = \frac{E}{\left\{R + \left(\frac{r}{n}\right)\right\}}$$

$$\therefore I = \frac{nE}{(nR + r)}$$

24. Write a brief note on the grouping of cells in multiple arc.

Ans: - Grouping of cells in multiple arc

An arrangement of n branches of m cells each, sends a current I through an external resistance R.



The total internal resistance in each branch is mr and the effective resistance is given by,

$$\frac{1}{r_e} = \left(\frac{1}{mr}\right) + \left(\frac{1}{mr}\right) + \left(\frac{1}{mr}\right) + \left(\frac{1}{mr}\right) + \ldots n \text{ terms}$$

If there are 'n' cells,

$$\frac{1}{r_e} = \left(\frac{n}{mr}\right) \Rightarrow r_e = \frac{mr}{n}$$

If combination is connected to an external resistance R, current I flowing through R is given by,

$$I = \frac{mE}{\left\{R + \left(\frac{mr}{n}\right)\right\}}$$

(The total emf in the branch is mE)

$$\therefore I = \frac{mnE}{(nR + mr)}$$

For a given number of cells mnE is constant.

Hence, the current I is maximum when nR + mr is minimum. It can be possible when R = mr/n.

Hence the current drawn from a set of cells in multiple arc will be a maximum when the external resistance is equal to the effective internal resistance of the combination of cells.

25. What is a thermistor? How is it manufactured?

Ans:- A thermistor is a heat sensitive resistor. It is a non–ohmic device. It is usually made of a semi conducting material. Its resistance varies appreciably with small changes in temperature.

They are manufactured by heating the embedded oxides of manganese, iron, cobalt and nickel in ceramic binders to very high temperatures to form a hard mass. They are shaped into the form of beads, discs or rods and enclosed in capsules with epoxy surface. A pair of platinum wires is fused into the capsule for making electrical connections.

The size of the thermistor is very small. It may have resistance - ranging from 0.1Ω to 10MΩ depending upon its composition. It can be used over a wide range of temperatures from as small a value as 10 K to as high values of 1400 K.

The change in the resistance of a thermistor can be caused by –

(i) a change in temperature of the surroundings (or)
(ii) the heat dissipated in it when current flows through it.

26. What are the uses of thermistors?

Ans:- The uses of the thermistors are –

(1) Thermistors are used as resistance thermometers to measure very low temperatures.
(2) To detect small temperature change.
(3) To protect electronic equipments against surge currents when the supply voltage is switched on.
(4) In vacuum gauges, time- delay switches, voltage regulators, temperature control units (thermostats), microwave detectors etc.,
(5) To measure altitude and wind velocity.
(6) To protect the windings of motors, generators and transformers.
(7) To safeguard the heater of the picture tube of a television set against voltage and current fluctuations.
(8) In remote sensing.

27. What are the uses of superconductors?

Ans:- The uses of superconductors are -

(1) They are used in making large electromagnets.
(2) They are used in the construction of the super conducting magnets which produce high magnetic fields, greater than several Tesla.
(3) They are used in super conducting power line for efficient transmission and distribution of electrical power.

(Contd……)

ಕಲಿಸುವ ವಿದ್ಯಾರ್ಥಿನಿ



ಇದು ಇಶಾನಿ ಕಹಾನಿ

• ವಿಶಾಖ ಎನ್.

ಜೆನ್ ಝೀ ತಲೆಮಾರಿನ ಧಾವಂತ, ನಿರ್ಭಾವುಕ ಮನಃಸ್ಥಿತಿ, ಅತಿ ಆತ್ಮವಿಶ್ವಾಸದಂತಹ ಧೋರಣೆಗಳ ಬಗ್ಗೆ ಹಿರಿತಲೆಗಳು ಟೀಕಿಸುವುದನ್ನು ಕೇಳುತ್ತಾ ಬಂದಿದ್ದೇವೆ. ಆದರೆ, ಹೀಗೆ ಯಾವುದೇ ಆರೋಪವನ್ನು ಸಾಮಾನ್ಯೀಕರಣಗೊಳಿಸಕೂಡದು ಎನ್ನುವುದನ್ನು ಹೊಸ ತಲೆಮಾರಿನ ಸಾಧಕರು ಪದೇಪದೇ ರುಜುವಾತುಪಡಿಸುತ್ತಲೇ ಇದ್ದಾರೆ. ಅಂತಹವರ ಸಾಲಿಗೆ ಸೇರುತ್ತಾರೆ ದೆಹಲಿಯ ತರುಣಿ ಇಶಾನಿ ಶರ್ಮಾ.

ವಾರದ ಹಿಂದೆ ಇಶಾನಿ ಶರ್ಮಾ ಹಾಕಿದ್ದ ಲಿಂಕ್ಡ್‌ಇನ್ ಪೋಸ್ಟ್ ಒಂದು ಸಾಕಷ್ಟು ಚರ್ಚೆಗೆ ಇಂಬುಗೊಟ್ಟಿತು. ಅದು ಬಹಳ ಸರಳವೂ ಸುಂದರವೂ ಪ್ರೇರಕವೂ ಆದ ವಿಷಯ. ಇಶಾನಿ ಹಾಗೇ ಸುಮ್ಮನೆ ಎನ್ನುವಂತೆ ಶುರುಮಾಡಿದ್ದ ಯೂಟ್ಯೂಬ್ ಚಾನೆಲ್‌ನಿಂದ ಬಂದ ಗಳಿಕೆಯಿಂದ ಆಕೆಯ ಮೊದಲ ವರ್ಷದ ಕಾಲೇಜು ಶುಲ್ಕವನ್ನು ಸಂಪೂರ್ಣವಾಗಿ ಭರಿಸಲು ಸಾಧ್ಯವಾಯಿತು ಎನ್ನುವುದೇ ಆ ಸಂಗತಿ. ಅದನ್ನು ಬಹಳ ಹೆಮ್ಮೆಯಿಂದ ಆಕೆ ಬರೆದುಕೊಂಡರು.

ದೆಹಲಿಯ ಕಿರೋಡಿ ಮಲ್ ಕಾಲೇಜಿನಲ್ಲಿ ಮೊದಲ ವರ್ಷದ ಬಿ.ಕಾಂ. ಪದವಿ ಓದುತ್ತಿರುವ ಹುಡುಗಿ ಇಶಾನಿ. ಅವರು ಹತ್ತನೇ ತರಗತಿಯಲ್ಲಿ ಓದುತ್ತಿದ್ದಾಗಲೇ, ಸಹಪಾಠಿಗಳಿಗೆ 'ಪರೀಕ್ಷೆ ಎದುರಿಸುವುದು ಹೇಗೆ?' ಎನ್ನುವುದನ್ನು ಸರಳವಾಗಿ ಹೇಳುತ್ತಿದ್ದರು. ಅವರ ಸಲಹೆ ಕೇಳಿದ ಎಷ್ಟೋ ಮಕ್ಕಳಿಗೆ ಅನುಕೂಲ ಆಗಿತ್ತು. ಹೀಗೆ ಸಂವಾದ ನಡೆಸುವಾಗ ಅವರಿಗೆ ತಾವು ನೀಡುವ ಸಲಹೆಗಳನ್ನೇ ಒಳಗೊಂಡ ಒಂದು ವಿಡಿಯೊ ಮಾಡಿದರೆ ಹೇಗೆ ಎನ್ನುವ ಯೋಚನೆ ಬಂತು. ಅದನ್ನು ಬಹಳ ಮುಗ್ಧವಾಗಿ ಮಾಡಿದರು. ಹೀಗೆಯೇ ವಿಡಿಯೊ ಚಿತ್ರೀಕರಿಸಬೇಕು, ಅದನ್ನು ಸಂಕಲನ ಮಾಡುವ ಕ್ರಮ ಇಂತು ಎಂಬ ಹೋಂವರ್ಕ್ ಇಲ್ಲದೇ ಮಾಡಿದ ವಿಡಿಯೊ ಅದು. ಅದನ್ನು ಅಪ್‌ಲೋಡ್ ಮಾಡಿದ ಮೇಲೆ ಕೆಲವು ವಿದ್ಯಾರ್ಥಿಗಳು ನೋಡಿದರಷ್ಟೆ. ಕೆಲವರು ಮೆಚ್ಚಿ ಕಾಮೆಂಟ್ ಹಾಕಿದರು. ಸಹಪಾಠಿಗಳಿಗೆ ಏನೋ ಒಂದಿಷ್ಟು ಅನುಕೂಲ ಆಯಿತಲ್ಲ ಎಂದು ಇಶಾನಿ ಸಮಾಧಾನಪಟ್ಟರು.

ಪ್ರೀ ಬೋರ್ಡ್ ಪರೀಕ್ಷೆಗೆ ಮುಂಚೆ ಹಾಕಿದ್ದ ಆ ವಿಡಿಯೊ ಶೈಕ್ಷಣಿಕವಾಗಿ ಬಹಳ ಮಹತ್ವದ್ದಾಗಿತ್ತು ಎನ್ನುವುದು ಅವರಿಗೆ ಆಗ ಗೊತ್ತಿರಲಿಲ್ಲ. ಕ್ರಮೇಣ ಅವರು ಹಾಗೆ ಹಾಕುವ ವಿಡಿಯೊಗಳ ಸಂಖ್ಯೆಯನ್ನು ಹೆಚ್ಚಿಸಿದರು. ಪಿಯು ಹಂತ ದಾಟಿ, ಪದವಿಗೆ ಬರುವ ಹೊತ್ತಿಗೆ ಅವರ ಯೂಟ್ಯೂಬ್ ಚಾನೆಲ್ ಒಂದಿಷ್ಟು ಆದಾಯ ತಂದುಕೊಡುವಷ್ಟು ವೀಕ್ಷಕರನ್ನು ಪಡೆದುಕೊಂಡಿತ್ತು. ಹಾಗೆ ಬಂದ ಹಣದಲ್ಲೇ ಅವರು ಕಾಲೇಜು ಶುಲ್ಕ ಕಟ್ಟಿದ್ದು.

'ನಾನು ಓದುತ್ತಿರುವುದು ಸರ್ಕಾರಿ ಕಾಲೇಜಿನಲ್ಲಿ. ಅದಕ್ಕೆ ದೊಡ್ಡ ಶುಲ್ಕವೇನೂ ಇಲ್ಲ. ಆದರೂ ನನ್ನ ಶುಲ್ಕವನ್ನು ನಾನೇ ಒಳ್ಳೆಯ ಕಂಟೆಂಟ್ ಹಾಕಿ ಹುಟ್ಟಿಸಿಕೊಂಡೆ ಎನ್ನುವುದು ಹೆಮ್ಮೆಯ ಸಂಗತಿ. ನಾವು ಯಾವುದನ್ನು ಇಷ್ಟಪಡುತ್ತೇವೋ ಅದನ್ನು ಅಚ್ಚುಕಟ್ಟಾಗಿ ಮಾಡಿದರೆ ಫಲ ಸಿಕ್ಕೇ ಸಿಗುತ್ತದೆ ಎನ್ನುವುದಕ್ಕೆ ನಾನೇ ಉದಾಹರಣೆ' ಎಂದು ಇಶಾನಿ ವಿನಯದಿಂದ ಹೇಳುತ್ತಾರೆ. ಈ ಸಾಧಕಿಯ ಯೂಟ್ಯೂಬ್ ಚಾನೆಲ್ ಹೆಸರು Ishani Sharma ಎಂದೇ ಇದೆ. ಅದರಲ್ಲಿನ ವಿಡಿಯೊಗಳ ಶೀರ್ಷಿಕೆ ಕೂಡ ನೇರ, ಸರಳ: 'ನಾನು ಅಕೌಂಟೆನ್ಸಿ ಪರೀಕ್ಷೆಯಲ್ಲಿ ಶೇ 98 ಅಂಕ ತೆಗೆದದ್ದು ಹೇಗೆ?', 'ಹತ್ತನೇ ತರಗತಿಯ ಮಕ್ಕಳು ಓದಲು ಹೇಗೆ ಟೈಮ್ ಟೇಬಲ್ ಹಾಕಿಕೊಳ್ಳಬೇಕು?', 'ವಿಜ್ಞಾನ ವಿಷಯದಲ್ಲಿ ಒಂದೂ ಅಂಕ ಕಳೆದುಕೊಳ್ಳದಂತೆ ಸ್ಕೋರ್ ಮಾಡಲು ಓದಬೇಕಾದ ಕ್ರಮ ಯಾವುದು?'... ಇಂಥವು.

ಸ್ವಂತ ಅನುಭವ ಪ್ರಣೀತ ವಿಡಿಯೊಗಳನ್ನು ಕನಿಷ್ಠ 40 ಸಾವಿರ ಮಂದಿ ವೀಕ್ಷಿಸಿದ್ದಾರೆ. ಯಾರೇ ಆಗಲಿ, ಯಾವುದರಲ್ಲಿ ಉತ್ಕಟತೆ ಇದೆಯೋ ಅದನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟಪಡಿಸಲು ಹಿಂದೇಟು ಹಾಕಬಾರದು, ಮೊದಲ ಅಳುಕನ್ನು ಮೀರಿದರೆ ಮುಂದೆ ಒಳ್ಳೆಯ ದಿನ ಬಂದೇ ಬರುತ್ತದೆ ಎನ್ನುವುದಕ್ಕೆ ತಾನೇ ಉದಾಹರಣೆ ಎಂದು ಇಶಾನಿ ನಗುತ್ತಾರೆ. ಅದು ವಿದ್ಯಾರ್ಥಿನಿಯೊಬ್ಬಳ ಹೆಮ್ಮೆಯ ನಗು ಎನ್ನುವುದನ್ನು ನಾವು ಗಮನಿಸಬೇಕು ಅಷ್ಟೇ.

ಆಚರಿಸಿದಿರಾ ಶಿಕ್ಷಣ ದಿನ?



• ಮಹಮ್ಮದ್ ನಝೀರ್ ಹುಸೈನ್

ಭಾರತಕ್ಕೆ ನವೆಂಬರ್ 11 ಮಹತ್ವದ ದಿನ. 2008ರಿಂದ ಆರಂಭಿಸಿ ಪ್ರತಿವರ್ಷ ಈ ದಿನವನ್ನು 'ರಾಷ್ಟ್ರೀಯ ಶಿಕ್ಷಣ ದಿನ'ವನ್ನಾಗಿ ಆಚರಿಸಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟಗಾರ, ವಿದ್ವಾಂಸ ಹಾಗೂ ದೇಶದ ಮೊದಲ ಶಿಕ್ಷಣ ಸಚಿವ ಅಬುಲ್ ಕಲಾಂ ಆಜಾದ್ ಗೌರವಾರ್ಥವಾಗಿ ಅವರ ಜನ್ಮ ದಿನವನ್ನು ಶಿಕ್ಷಣ ದಿನವನ್ನಾಗಿ ಆಚರಿಸಿ, ಅವರ ಕೊಡುಗೆಯನ್ನು ಸ್ಮರಿಸಲಾಗುತ್ತದೆ.

1888ರ ನ. 11ರಂದು ಮೆಕ್ಕಾದಲ್ಲಿ ಜನಿಸಿದ ಆಜಾದ್ ಅವರ ಪೂರ್ಣ ಹೆಸರು ಅಬುಲ್ ಕಲಾಂ ಗುಲಾಂ ಮುಹಿಯುದ್ದೀನ್. ನಂತರ ಅವರ ಕುಟುಂಬ ಕೋಲ್ಕತ್ತದಲ್ಲಿ ನೆಲಸಿತು. ಆಜಾದ್ ಅವರು ಪಾಶ್ಚಾತ್ಯ ತತ್ವಶಾಸ್ತ್ರ, ವಿಜ್ಞಾನ, ಸಾಹಿತ್ಯದ ಅಧ್ಯಯನದಿಂದ ಪ್ರಗತಿಪರ ಮನೋಭಾವ ರೂಢಿಸಿಕೊಂಡರು. ಪತ್ರಕರ್ತರೂ ಆಗಿದ್ದ ಅವರು ಗಾಂಧೀಜಿಯವರ ನಿಕಟವರ್ತಿಯಾಗಿದ್ದರು. ತಮ್ಮ 35ನೇ ವಯಸ್ಸಿನಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದರು. ಸ್ವಾತಂತ್ರ್ಯ ಹೋರಾಟದ ವೇಳೆ ಹಲವು ಬಾರಿ ಕಾರಾಗೃಹ ವಾಸ ಅನುಭವಿಸಿದರು.

ದೇಶವು ಸ್ವಾತಂತ್ರ್ಯ ಪಡೆದ ನಂತರ ಭಾರತದ ಮೊದಲ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದ ಆಜಾದ್, ಆಧುನಿಕ ಭಾರತದ ಶಿಕ್ಷಣದ ಚೌಕಟ್ಟನ್ನು ರೂಪಿಸಿದವರು. ಅವರು ಪ್ರಾಥಮಿಕ, ಪ್ರೌಢ, ತಾಂತ್ರಿಕ ಹಾಗೂ ವಯಸ್ಕರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ), ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ), ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ (ಎಐಸಿಟಿಇ) ಬಲವರ್ಧನೆಯ ಜೊತೆಗೆ ಸಾಹಿತ್ಯ ಅಕಾಡೆಮಿ, ಲಲಿತಕಲಾ ಅಕಾಡೆಮಿ ಮತ್ತು ಸಂಗೀತ ನಾಟಕ ಅಕಾಡೆಮಿಯ ಸ್ಥಾಪನೆಗೂ ಕೊಡುಗೆ ನೀಡಿದರು.

ಆಜಾದ್ ಅವರ ದೃಷ್ಟಿಯಲ್ಲಿ ಶಿಕ್ಷಣ ಎಂದರೆ ಸಮಾಜದ ಪ್ರಗತಿಯ ಶಕ್ತಿ. ಜಾತಿ, ಧರ್ಮ, ವರ್ಗ ಅಥವಾ ಲಿಂಗಭೇದ ಇಲ್ಲದೆ ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ ದೊರೆಯಬೇಕು ಎಂಬುದು ಅವರ ಆಶಯ. ಮಹಿಳಾ ಶಿಕ್ಷಣವಿಲ್ಲದೆ ಯಾವ ಶಿಕ್ಷಣ ನೀತಿಯೂ ಪೂರ್ಣವಾಗುವುದಿಲ್ಲ ಎಂದು ಅವರು ಎಚ್ಚರಿಸಿದರು. ಮಕ್ಕಳಿಗೆ 14 ವರ್ಷ ವಯಸ್ಸಿನ ತನಕ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ದೊರೆಯಬೇಕು, ಅದು ಅವರ ಮಾತೃಭಾಷೆಯಲ್ಲಿ ಮತ್ತು ಮನೆಯ ಹತ್ತಿರದಲ್ಲೇ ಸಿಗುವಂತಾಗಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಇಂದು ನೂರಾರು ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚುತ್ತಿವೆ, ಶಿಕ್ಷಣ ದುಬಾರಿಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಆಜಾದ್ ಅವರು ಬಿತ್ತಿದ 'ಸಮಾನ ಶಿಕ್ಷಣ'ದ ಕನಸನ್ನು ಸರ್ಕಾರಗಳು ನೆನಪಿಸಿಕೊಳ್ಳಬೇಕಿದೆ. ಶಿಕ್ಷಣವನ್ನು ಬರೀ ಉದ್ಯೋಗ ಗಳಿಕೆಯ ಸಾಧನವಾಗಿ ಕಾಣದೆ, ರಾಷ್ಟ್ರದ ಸಾಮಾಜಿಕ ಪುನರ್‌ನಿರ್ಮಾಣದ ಸಾಧನವೆಂದು ಪರಿಗಣಿಸಬೇಕಾಗಿದೆ. ಆಜಾದ್ ಕನಸಿನ 'ಎಲ್ಲರಿಗೂ ಶಿಕ್ಷಣ' ಎಂಬ ಧ್ಯೇಯವನ್ನು ಜೀವಂತವಾಗಿ ಇಡುವುದು ಮತ್ತು ಅದನ್ನು ಸಾಕಾರಗೊಳಿಸುವುದು ಎಲ್ಲರ ಕರ್ತವ್ಯವಾಗಿದೆ.

ಸಮಾಧಾನ



ಡಾ. ಡಿ.ಎಂ. ಹೆಗಡೆ, ಸಮಾಲೋಚಕ

ಬೆಚ್ಚಿಬೀಳುವ ಮಗ ಪರಿಹಾರವೇನು?

● **ನನ್ನ ಒಬ್ಬನೇ ಮಗ ಎಸ್ಸೆಸ್ಸೆಲ್ಸಿ ಓದುತ್ತಿದ್ದಾನೆ. ಒಂದು ತಿಂಗಳಿಂದ, ನಿದ್ರೆಯಲ್ಲಿ ಇದ್ದಾಗ ಬೆಚ್ಚಿಬೀಳುತ್ತಾನೆ. ತೀರಾ ಅನ್ಯಮನಸ್ಕನಾಗಿರುತ್ತಾನೆ. ಏನಾಯಿತು ಎಂದು ಕೇಳಿದರೆ ಹೇಳುತ್ತಿಲ್ಲ. ಏನು ಮಾಡಬೇಕೋ ತೋಚುತ್ತಿಲ್ಲ. ಸಿಂಗಲ್ ಮದರ್ ಆಗಿರುವ ಕಾರಣದಿಂದ ಕುಟುಂಬದಿಂದಲೂ ಸಹಕಾರ ಅಷ್ಟಕ್ಕಷ್ಟೆ. ಪರಿಹಾರ ತಿಳಿಸುವಿರಾ?**

ಶೋಭಾ ಡಿ., ಉಡುಪಿ

ಕನಸಿನಲ್ಲಿ ಬೆಚ್ಚಿಬೀಳುವುದು, ಕೆಲವೊಮ್ಮೆ ಕೂಗುವುದು, ಅರ್ಥವಾಗದಂತೆ ಮಾತನಾಡುವುದು ಇವೆಲ್ಲ ಸಾಮಾನ್ಯ ಸಂಗತಿಗಳು. ಇವು ಯಾವ ವಯಸ್ಸಿನವರಿಗಾದರೂ ಆಗಬಹುದು. ಕೆಲವು ಸಲ ಹೀಗಾಗಿ, ನಂತರ ತನ್ನಿಂತಾನೇ ಕಡಿಮೆಯಾಗಲೂಬಹುದು. ಇಂಥದ್ದಕ್ಕೆಲ್ಲ ಇಂಥದ್ದೇ ಕಾರಣ ಎಂದು ಇರುವುದಿಲ್ಲ.

ಇನ್ನು, ನಿಮ್ಮ ಮಗನಿಗೆ ಹದಿಹರೆಯ. ಸಹಜವಾದ ಮನೋದೈಹಿಕ ಬದಲಾವಣೆಯಾಗುತ್ತಿರುವ ವಯಸ್ಸು. ಕೆಲವನ್ನು ಹೇಳಿಕೊಳ್ಳಲಿಕ್ಕೆ ಯಾರೂ ಇಲ್ಲದಿರುವಾಗ ಆತಂಕವಾಗುತ್ತದೆ. ಕೆಲವು ಹುಡುಗರಿಗೆ ಸ್ವಪ್ನಸ್ಖಲನ ಶುರುವಾದಾಗ ಹೀಗಾಗುವುದುಂಟು. ಕನಸಿನಲ್ಲಿ ತಪ್ಪು ಮಾಡಿಬಿಟ್ಟೆ ಎನ್ನುವ ಪಾಪಪ್ರಜ್ಞೆಯಿಂದಲೂ, ಇದರಿಂದ ತನಗೇನೋ ಕೆಟ್ಟದ್ದಾಗುತ್ತಿದೆ ಎನ್ನುವ ಭಯದಿಂದಲೂ ಹೀಗಾಗುತ್ತದೆ.

ಭಯ, ಕೀಳರಿಮೆ, ಖಿನ್ನತೆ, ನಿದ್ರೆ ಕಡಿಮೆಯಾದಾಗ, ಮಲಗುವ ಸಮಯವಾಗಲೀ ಜಾಗವಾಗಲೀ ಬದಲಾದಾಗ, ಒಂಟಿತನ ಕಾಡುವಾಗ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಅಶಕ್ತರಾದಾಗಲೂ ಹೀಗಾಗುವುದುಂಟು. ಕೆಲವು ಔಷಧ ಸೇವನೆಯಿಂದ, ಆಹಾರದಲ್ಲಿ ವ್ಯತ್ಯಯವಾದಾಗ, ವಿಟಮಿನ್‌ಗಳ ವೈಪರೀತ್ಯದಿಂದಲೂ ಹೀಗಾಗಬಹುದು. ಇನ್ನು ಕೆಲವು ಜನರಿಗೆ ವಂಶವಾಹಿಯ ಕಾರಣದಿಂದಲೂ ಹೀಗಾಗುತ್ತದೆ. ನೀವು ಸಿಂಗಲ್ ಪೇರೆಂಟ್ ಅಗಿರುವುದರಿಂದಲೂ ಅವನಿಗೆ ಅವ್ಯಕ್ತವಾದ ಆತಂಕವಾಗಿರಬಹುದು. ತಂದೆಯನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತಿರುವ ಆತ ಅದನ್ನೆಲ್ಲ ನಿಮ್ಮ ಬಳಿ ಹೇಳಿಕೊಳ್ಳಲು ಸಾಧ್ಯವಾಗದೆ ಚಡಪಡಿಸುತ್ತಿರಬಹುದು. ಇದರಿಂದ ಮಾಡಬೇಕಾದ ಕೆಲಸದಲ್ಲಿ ಅವನಿಗೆ ಏಕಾಗ್ರತೆ ಕ್ಷೀಣಿಸುತ್ತಿರಬಹುದು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ತಂದೆ ಹಾಗೂ ತಾಯಿ ಇಬ್ಬರ ಸಾಮೀಪ್ಯ ಮತ್ತು ಸಾಂಗತ್ಯದ ಅವಶ್ಯಕತೆ ಇರುತ್ತದೆ.

ಮಗನನ್ನು ಸಮಾಧಾನದಿಂದ ಮಾತನಾಡಿಸಿ. ಅವನ ಬೇಕು ಬೇಡಗಳ ಬಗ್ಗೆ ವಿಚಾರಿಸಿ. ಒಬ್ಬರಿಗೊಬ್ಬರು ಆಸರೆಯಾಗಿ ಇರಬೇಕಾದ ಅಗತ್ಯದ ಬಗ್ಗೆ ಅವನೊಂದಿಗೆ ಮನಸ್ಸು ಬಿಚ್ಚಿ ಚರ್ಚಿಸಿ. ಯಾವುದೇ ಕಾರಣಕ್ಕೂ ಕೋಪತಾಪ, ಅಸಹಾಯಕತೆ, ಗೊಂದಲ ಅವನ ಮೇಲೆ ವ್ಯಕ್ತವಾಗದಿರಲಿ. ಪ್ರತಿದಿನ ಸಾಯಂಕಾಲ ಒಂದರ್ಧ ಗಂಟೆ ಸಮುದ್ರ ತೀರಕ್ಕೆ ಹೋಗಿ ನೀರಾಟವಾಡಿಕೊಂಡು, ಉಸುಕಿನಲ್ಲಿ ಓಡಾಡಿಕೊಂಡು ಬರಲಿ. ನಿತ್ಯ ರಾತ್ರಿ ನಿಗದಿತ ಸಮಯಕ್ಕೆ ಮಲಗಲಿ. ಏಳರಿಂದ ಎಂಟು ತಾಸು ನಿದ್ರಿಸಲಿ. ಸಂಪೂರ್ಣ ನಿದ್ರೆ ಮಾಡಿ ಮುಗಿಸಿದ ಮೇಲೆ ಓದುವುದು/ ಅಧ್ಯಯನ ಮಾಡುವುದು ಹಿತವಾಗಿರುತ್ತದೆ. ಮಲಗುವುದಕ್ಕೆ ಕನಿಷ್ಠ ಅರ್ಧಗಂಟೆ ಮೊದಲು ಟಿ.ವಿ, ಮೊಬೈಲ್ ಸ್ಕ್ರೀನ್ ನೋಡದಿದ್ದರೆ ಒಳ್ಳೆಯದು. ಊಟ ಮುಗಿಸಿದ ನಂತರ ಕನಿಷ್ಠ ಒಂದೂವರೆಯಿಂದ ಎರಡು ತಾಸುಗಳಾದ ಮೇಲೆ ಮಲಗುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಮಲಗುವ ಮೊದಲು ಸ್ವಲ್ಪ ಬಿಸಿನೀರು ಕುಡಿಯುವುದು ಒಳ್ಳೆಯದು. ಮಲಗುವ ಮೊದಲು, ಹಾಸಿಗೆಯಲ್ಲಿ ಕುಳಿತುಕೊಂಡು, ಒಂದೈದು ನಿಮಿಷವಾದರೂ ಕಣ್ಮುಚ್ಚಿಕೊಂಡು ಉಸಿರಾಟವನ್ನು ಗಮನಿಸುವುದು, ದೀರ್ಘವಾಗಿ ಉಸಿರಾಡುವುದು ಒಳ್ಳೆಯ ನಿದ್ರೆ ಬರುವುದಕ್ಕೆ ಉಪಯೋಗವಾಗುತ್ತದೆ.

ಹೀಗಿದ್ದೂ ನಿರೀಕ್ಷಿಸಿದಷ್ಟು ಸಕಾರಾತ್ಮಕವಾದ ಬದಲಾವಣೆ ಕಾಣದಿದ್ದರೆ, ತಜ್ಞ ವೈದ್ಯರನ್ನು ಭೇಟಿಯಾಗುವುದು ಒಳ್ಳೆಯದು.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಮಾನವ ಸಂಪನ್ಮೂಲ ವಿಭಾಗ: ದೇವ್‌ಟೌನ್ ಸಂಸ್ಥೆಯು ಮಾನವ ಸಂಪನ್ಮೂಲ (ಹ್ಯೂಮನ್ ರಿಸೋರ್ಸ್‌– ಎಚ್‌ಆರ್) ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ವಿದ್ಯಾರ್ಥಿಗಳು ಎಂಎಸ್–ಎಕ್ಸೆಲ್, ಇಂಗ್ಲಿಷ್‌ನಲ್ಲಿ ಸಂವಹನ ಮತ್ತು ಬರಹ ಸಾಮರ್ಥ್ಯ ಉಳ್ಳವರಾಗಿರಬೇಕು. ಡಿ.11 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ₹4,000– ₹5,000. ಸಂಪರ್ಕ: https://tinyurl.com/yn4c56fy.

ಗ್ರಾಫಿಕ್ ಡಿಸೈನ್: ಜಾಬ್ಸ್ ಟೆರಿಟರಿ ಸಂಸ್ಥೆಯು ಗ್ರಾಫಿಕ್ ಡಿಸೈನ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಅಡೋಬ್ ಆಫ್ಟರ್ ಎಫೆಕ್ಟ್ಸ್, ಅಡೋಬ್ ಕ್ರಿಯೇಟಿವ್ ಸೂಟ್, ಅಡೋಬ್ ಇಲಸ್ಟ್ರೇಟರ್, ಅಡೋಬ್ ಇನ್‌ಡಿಸೈನ್, ಅಡೋಬ್ ಫೋಟೊಶಾಪ್, ವಿಡಿಯೊ ಎಡಿಟಿಂಗ್…ಜ್ಞಾನ ಇರುವ ವಿದ್ಯಾರ್ಥಿಗಳು ಡಿ.11ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್: ₹5,000. ಸಂಪರ್ಕ: https://shorturl.at/bACxo.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಮಾರ್ಕೆಟಿಂಗ್ ಇಂಟರ್ನ್‌ಷಿಪ್: ಈಜ್‌ಕನ್ಸಲ್ಟ್ ಎಲ್‌ಎಲ್‌ಪಿ ಸಂಸ್ಥೆಯು ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್, ಇ–ಮೇಲ್ ಮಾರ್ಕೆಟಿಂಗ್ ಮತ್ತು ಪರಿಣಾಮಕಾರಿ ಸಂವಹನದಲ್ಲಿ ಸಾಮರ್ಥ್ಯ ಹೊಂದಿರುವವರು ಡಿ.11ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹5,000– ₹10,000. ಸಂಪರ್ಕ: https://shorturl.at/mLLbZ.

ಬಿಸಿನೆಸ್ ಡೆವಲಪ್‌ಮೆಂಟ್ (ಸೇಲ್ಸ್): ಟ್ಯುಲಾಟ್ ಟೆಕ್ ಲ್ಯಾಬ್ಸ್ ಸಂಸ್ಥೆಯು ಬಿಸಿನೆಸ್ ಡೆವಲಪ್‌ಮೆಂಟ್ (ಸೇಲ್ಸ್) ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಗ್ರಾಹಕರ ಮೇಲೆ ಪ್ರಭಾವ ಬೀರುವ, ಗ್ರಾಹಕರೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಮತ್ತು ಗ್ರಾಹಕರನ್ನು ಸೆಳೆಯುವ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ನ. 20ರೊಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹12,000– ₹20,000. ಸಂಪರ್ಕ: https://shorturl.at/JOINQ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಶಾಂತಿ ಎನ್ನುವುದು ಬದುಕಿನಲ್ಲಿ ಒಂದು ಕಿರೀಟ; ಉಳಿದೆಲ್ಲ ಸಂತೋಷಗಳು ನೋವು ತರುವಂತಹವು.

–ಸಂತ ತುಕಾರಾಂ

ಸಂಪಾದಕೀಯ

ಶಾಸನಸಭೆ: ಮಹಿಳಾ ಪ್ರಾತಿನಿಧ್ಯ ರಾಜಕೀಯ ಇಚ್ಛಾಶಕ್ತಿಯ ಕೊರತೆ

ಮಹಿಳೆಯರನ್ನು ವೋಟ್ ಬ್ಯಾಂಕ್‌ಗಳಾಗಿ ರೂಪಿಸಿಕೊಳ್ಳಲು ಸ್ಪರ್ಧೆ ನಡೆಸುತ್ತಿರುವ ರಾಜಕೀಯ ಪಕ್ಷಗಳು, ಶಾಸನಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸುವ ವಿಷಯದಲ್ಲಿ ಎಡಬಿಡಂಗಿ ಧೋರಣೆ ಅನುಸರಿಸುತ್ತಿವೆ. ಮಹಿಳಾ ಮೀಸಲಾತಿ ಕಾಯ್ದೆ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಕಳವಳ ವ್ಯಕ್ತಪಡಿಸಿದೆ. ಆ ಕಳವಳವನ್ನು ಕೇಂದ್ರ ಸರ್ಕಾರ ಹಾಗೂ ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸಂಸತ್ತು ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಪ್ರಾತಿನಿಧ್ಯ ಕಡ್ಡಾಯಗೊಳಿಸುವ ಕಾಯ್ದೆ ಜಾರಿಗೆ ಬಂದು ಎರಡು ವರ್ಷವಾಗಿದ್ದರೂ, ಅದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಜನಗಣತಿಯ ನಂತರ ನಡೆಯುವ ಕ್ಷೇತ್ರಗಳ ಪುನರ್ ವಿಂಗಡಣೆಯ ನಂತರ ಅನುಷ್ಠಾನಗೊಳ್ಳಬೇಕು ಎನ್ನುವ ನಿಬಂಧನೆಯ ಕಾರಣದಿಂದಾಗಿ, ಮುಂದಿನ ಕೆಲವು ವರ್ಷಗಳವರೆಗೆ ಮಹಿಳಾ ಮೀಸಲಾತಿ ಕಾಯ್ದೆ ಕಾಗದದ ಮೇಲಷ್ಟೇ ಉಳಿಯುವ ಸಾಧ್ಯತೆ ಹೆಚ್ಚಾಗಿದೆ. 2027ರಲ್ಲಿ ಜನಗಣತಿ ಪೂರ್ಣಗೊಳ್ಳಲಿದೆ. ಆದರೆ, ಜನಗಣತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಪ್ರಕ್ರಿಯೆಗೆ ಸಂಬಂಧಿಸಿದ ಸಿದ್ಧತೆಗಳು ಇನ್ನಷ್ಟೇ ಆರಂಭಗೊಳ್ಳಬೇಕಾದ ಕಾರಣದಿಂದಾಗಿ, 2029ರ ಲೋಕಸಭಾ ಚುನಾವಣೆಯ ವೇಳೆಗಾದರೂ ಕಾಯ್ದೆ ಅನುಷ್ಠಾನಗೊಳ್ಳಬಹುದೇ ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ.

ಮಹಿಳಾ ಮೀಸಲಾತಿ ಕಾಯ್ದೆಯನ್ನು ತಕ್ಷಣವೇ ಅನುಷ್ಠಾನಗೊಳಿಸಬೇಕೆಂಬ ಅರ್ಜಿಯ ಬಗ್ಗೆ ನ್ಯಾಯಮೂರ್ತಿ ಮಾಧವನ್ ಅವರೊಂದಿಗೆ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು, ಕಾಯ್ದೆ ವಿಳಂಬವಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವುದು ಸೂಕ್ತವಾಗಿದೆ. ದೇಶದ ಜನಸಂಖ್ಯೆಯಲ್ಲಿ ಶೇ 48ರಷ್ಟು ಮಹಿಳೆಯರಿದ್ದು, ಅವರು ದೇಶದ ಅತಿದೊಡ್ಡ ಅಲ್ಪಸಂಖ್ಯಾತರಾಗಿದ್ದಾರೆ ಎಂದು ನ್ಯಾಯಮೂರ್ತಿ ನಾಗರತ್ನ ಅವರು ಅಭಿಪ್ರಾಯಪಟ್ಟಿದ್ದಾರೆ. ಚುನಾವಣೆಗಳಲ್ಲಿ ಮೂರನೇ ಒಂದು ಭಾಗದಷ್ಟು ಉಮೇದುವಾರಿಕೆಯನ್ನು ಮಹಿಳೆಯರಿಗೆ ನೀಡುತ್ತಿಲ್ಲವೇಕೆ ಎನ್ನುವ ಅವರ ಪ್ರಶ್ನೆ ರಾಜಕೀಯ ಪಕ್ಷಗಳ ಆತ್ಮಾವಲೋಕನಕ್ಕೆ ಒತ್ತಾಯಿಸುವಂತಿದೆ. ಮಹಿಳಾ ಪ್ರಾತಿನಿಧ್ಯದ ಬಗ್ಗೆ ರಾಜಕೀಯ ಪಕ್ಷಗಳ ಕಾಳಜಿ ಪ್ರಾಮಾಣಿಕವಾಗಿದ್ದಲ್ಲಿ, ಅವು ಕಾನೂನಿನ ಅನುಷ್ಠಾನಕ್ಕೆ ಕಾಯುವ ಅಗತ್ಯವಿಲ್ಲ; ಕಾನೂನು ಕಟ್ಟುಪಾಡುಗಳ ಹಂಗಿಲ್ಲದೆಯೇ ತಮ್ಮ ಬದ್ಧತೆಯನ್ನು ಕಾರ್ಯರೂಪದಲ್ಲಿ ಪ್ರದರ್ಶಿಸುವ ಅವಕಾಶ ಪಕ್ಷಗಳಿಗಿದ್ದೇ ಇದೆ. ಆದರೆ, ರಾಜಕೀಯ ಪಕ್ಷಗಳಲ್ಲಿನ ಇಚ್ಛಾಶಕ್ತಿಯ ಕೊರತೆಯೇ ಮಹಿಳಾ ಪ್ರಾತಿನಿಧ್ಯಕ್ಕೆ ತೊಡಕಾಗಿ ಪರಿಣಮಿಸಿದೆ. ಶಾಸನಸಭೆಗಳು ಮಾತ್ರವಲ್ಲದೆ, ಬೇರೆ ಕ್ಷೇತ್ರಗಳಲ್ಲೂ ಮಹಿಳೆಯರ ಪ್ರಾತಿನಿಧ್ಯ ಸಮರ್ಪಕವಾಗಿಲ್ಲ. ಸುಪ್ರೀಂ ಕೋರ್ಟ್‌ನ ಈವರೆಗಿನ ನ್ಯಾಯಮೂರ್ತಿಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಬರೀ 11 (ಶೇ 4ರಷ್ಟು) ಹಾಗೂ ಪ್ರಸ್ತುತ ಇರುವ 34 ನ್ಯಾಯಮೂರ್ತಿಗಳಲ್ಲಿ ಓರ್ವ ಮಹಿಳೆಯಷ್ಟೇ ಇದ್ದಾರೆ. ಲೋಕಸಭೆ– ರಾಜ್ಯಸಭೆಯಲ್ಲಿ ಕ್ರಮವಾಗಿ ಶೇ 14 ಮತ್ತು ಶೇ 17ರಷ್ಟು ಮಹಿಳಾ ಸದಸ್ಯರಿದ್ದಾರೆ. ಈ ಸರಾಸರಿ ವಿಶ್ವಮಟ್ಟದಲ್ಲಿ ಶೇ 27ರಷ್ಟಿದೆ. ಸಂಸತ್‌ನಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ, ತೃಣಮೂಲ ಕಾಂಗ್ರೆಸ್ ಮತ್ತು ಬಿಜು ಜನತಾದಳದಂತಹ ಕೆಲವು ಪಕ್ಷಗಳು ಉಳಿದ ಪಕ್ಷಗಳಿಗಿಂತಲೂ ಹೋಲಿಕೆಯಲ್ಲಿ ಉತ್ತಮವಾಗಿದ್ದರೂ, ವಿಧಾನಸಭೆಗಳಲ್ಲಿನ ಪ್ರಾತಿನಿಧ್ಯ ಕಳಪೆಯಾಗಿದೆ.



ಶಾಸನಸಭೆಗಳಲ್ಲಿ ಶೇ 33 ಮಹಿಳಾ ಪ್ರಾತಿನಿಧ್ಯ ಖಾತರಿಗೊಳಿಸುವ ಕಾಯ್ದೆಯನ್ನು ಅನುಷ್ಠಾನಗೊಳಿಸಲು ರಾಜಕೀಯ ಪಕ್ಷಗಳು ಹಾಗೂ ಸರ್ಕಾರಕ್ಕೆ ಬದ್ಧತೆ ಇಲ್ಲ, ಇಚ್ಛಾಶಕ್ತಿಯೂ ಇಲ್ಲ.

ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಪ್ರಾತಿನಿಧ್ಯ ಕಲ್ಪಿಸಿವೆ. 77ನೇ ತಿದ್ದುಪಡಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಉದ್ಯೋಗದಲ್ಲಿನ ಬಡ್ತಿಗೂ ಮೀಸಲಾತಿಯನ್ನು ವಿಸ್ತರಿಸಿದೆ.103ನೇ ತಿದ್ದುಪಡಿ, ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ಒದಗಿಸಿದೆ. ಈ ಸವಲತ್ತುಗಳನ್ನು ಜನಗಣತಿಯ ದತ್ತಾಂಶಗಳಿಗೆ ಕಾಯದೆಯೇ ಜಾರಿಗೊಳಿಸಿರುವುದನ್ನು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ. ಸಾಂವಿಧಾನಿಕ ತಿದ್ದುಪಡಿಯನ್ನು ಅನಿರ್ದಿಷ್ಟ ಅವಧಿಯವರೆಗೆ ಜಾರಿಗೊಳಿಸದೆ ಉಳಿಸುವುದು ಸರಿಯಲ್ಲ ಹಾಗೂ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ಅಂಗೀಕಾರ ಪಡೆದಿರುವುದು ಕಾಯ್ದೆ ಜಾರಿಗೊಳ್ಳಬೇಕಾದ ತುರ್ತನ್ನು ಸೂಚಿಸುತ್ತದೆ ಎನ್ನುವುದನ್ನೂ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಸುಪ್ರೀಂ ಕೋರ್ಟ್‌ನ ಅಭಿಪ್ರಾಯಗಳು ಕೂಡ, ಮಹಿಳಾ ಪ್ರಾತಿನಿಧ್ಯ ಕಾಯ್ದೆ ವಿಳಂಬವಿಲ್ಲದೆ ಜಾರಿಯಾಗಬೇಕಾದ ಅಗತ್ಯವನ್ನು ಸೂಚಿಸುವಂತಿವೆ. ಮಹಿಳಾ ಮೀಸಲಾತಿ ವಿಳಂಬವನ್ನು ಪ್ರಶ್ನಿಸಿರುವ ಅರ್ಜಿಯು, ಪ್ರಗತಿಪರ ಕಾಯ್ದೆಯೊಂದನ್ನು ಜಾರಿಗೊಳಿಸುವ ಇಚ್ಛಾಶಕ್ತಿಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳ ಸೋಗಲಾಡಿತನ ಹಾಗೂ ದ್ವಂದ್ವವನ್ನು ಬಯಲುಮಾಡುವಂತಿದೆ.

ಜಾಲತಾಣ

ಬಡವರ ಸರ್ಕಾರ!



ಅಪ್ಪ (ರೈತ) ಬೆಂಬಲ ಬೆಲೆಗಾಗಿ ಬೀದಿಗಿಳಿದ; ಮಗ (ನಿರುದ್ಯೋಗಿ) ನೇಮಕಾತಿಗಾಗಿ ಬೀದಿಗಿಳಿದ. ಬಡವನ ಸಂಸಾರವನ್ನೇ ಬೀದಿಗೆ ತಂದಿತು 'ಬಡವರ ಸರ್ಕಾರ'!

ಲಾಲಾಜಿ ನಾಯ್ಕ್, ಆರ್‌ಟಿಐ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ



ರಾಹುಲ್ ಗಾಂಧಿ ಅವರದು 'ಐರನ್ ಲೆಗ್' ಎಂದು ಬಿಜೆಪಿ ನಾಯಕ ಆರ್. ಅಶೋಕ ಟೀಕಿಸಿದ್ದಾರೆ. ಅಶೋಕ ಅವರ ಕಾಲ್ಗುಣ ಚೆನ್ನಾಗಿದೆಯೆ? ಅವರು ಎಂದಾದರೂ ಜನಪರ ಹೋರಾಟ ಮಾಡಿದ್ದಾರೆಯೇ? ಗಣವೇಷಧಾರಿಗಳು ಎಂದಾದರೂ ಜನರ ಕಣ್ಣೀರು ಒರೆಸಿರುವುದು ನೋಡಿದ್ದೀರಾ?

ಪ್ರಿಯಾಂಕ್ ಖರ್ಗೆ, ಐ.ಟಿ–ಬಿ.ಟಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 17-11-2000

- **ಕನ್ನಡ ನೆಲ ಮುಟ್ಟಿ ನಮಿಸಿದ ಡಾ. ರಾಜ್ ಕುಮಾರ್**

ಬೆಂಗಳೂರು, ನ. 16– ದಟ್ಟ ಕಾನನದಲ್ಲಿ ಮೂರುವರೆ ತಿಂಗಳುಗಳ ಕಾಲ 'ವನವಾಸ' ಮುಗಿಸಿ ಇಂದು ಬೆಳಿಗ್ಗೆ ನಗರಕ್ಕೆ ಆಗಮಿಸಿದ ಕನ್ನಡದ ಮೇರುನಟ, ಕನ್ನಡಿಗರ ಕಣ್ಮಣಿ ಡಾ. ರಾಜ್‌ಕುಮಾರ್ ಅವರಿಗೆ ಸಾವಿರಾರು ಅಭಿಮಾನಿಗಳು ಮತ್ತು ಬಂಧುಗಳು ಆತ್ಮೀಯ ಸ್ವಾಗತ ನೀಡಿದರು.

ಅದೇ ರೀತಿ ತಮ್ಮ ಅಭಿಮಾನಿ 'ದೇವರುಗಳನ್ನು' ಕಂಡ ರಾಜ್, ತುಂಬು ಹೃದಯದಿಂದ ಎಲ್ಲವನ್ನೂ ಸ್ವೀಕರಿಸಿ ಭಾವಪರವಶರಾದರು.

- **ಸಾಕ್ಷರತೆಗಾಗಿ 'ಸರ್ವ ಶಿಕ್ಷಾ ಅಭಿಯಾನ'**

ನವದೆಹಲಿ, ನ. 16 (ಪಿಟಿಐ)– ದೇಶದಲ್ಲಿ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸುವ ದೃಷ್ಟಿಯಿಂದ 'ಸರ್ವ ಶಿಕ್ಷಾ ಅಭಿಯಾನ' ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಸಚಿವ ಸಂಪುಟ ಇಂದು ನಿರ್ಧರಿಸಿತು.

2010ರ ವೇಳೆಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಗುರಿಯನ್ನು ಸಾಧಿಸುವ ಸಮಗ್ರ ಕಾರ್ಯಕ್ರಮವಾಗಿರುವ ಈ ಯೋಜನೆಯ ಪ್ರಕಾರ 6ರಿಂದ 14 ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೆ 2003ರ ವೇಳೆಗೆ ಶಿಕ್ಷಣ ದೊರೆಯುವಂತೆ ಮಾಡಲಾಗುವುದು ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಮೋದ್ ಮಹಾಜನ್, ಸಂಪುಟ ಸಭೆಯ ನಂತರ ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 17-11-1950

- **ಪಾರ್ಲಿಮೆಂಟಿನ ದುರ್ಗಂಧ!**

ನವದೆಹಲಿ, ನ. 16– ಪಾರ್ಲಿಮೆಂಟ್ ಭವನದಲ್ಲಿರುವ ಮುಚ್ಚಿದ್ದ ಗವಾಕ್ಷಿಗಳನ್ನು ಇಂದು ತೆರೆಯಬೇಕಾಯಿತು. ಅಧಿವೇಶನ ನಡೆಯುತ್ತಿದ್ದಾಗ ಶ್ರೀ ಮಹಾ ವೀರತ್ಯಾಗಿಯವರು 'ಉಸಿರು ಕಟ್ಟುವ ದುರ್ಗಂಧ' ಬರುತ್ತಿದೆಯೆಂದು ಉಪಾಧ್ಯಕ್ಷ ಅನಂತಶಯನಂ ಅಯ್ಯಂಗಾರ್ಯರಿಗೆ ದೂರು ಹೇಳಿದರು. ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರರೂ, ಇತರ ಸದಸ್ಯರೂ ಮೂಗುಗಳಿಗೆ ಕರವಸ್ತ್ರ ಮುಚ್ಚಿಕೊಳ್ಳಬೇಕಾಯಿತು.

ದುರ್ಗಂಧಕ್ಕೆ ಕಾರಣವೇನು ಎಂಬುದನ್ನು ಪರಿಶೀಲಿಸಲು ಪಾರ್ಲಿಮೆಂಟ್ ಸೆಕ್ರೆಟರಿಯೇಟಿನ ಅಧಿಕಾರಿಗಳನ್ನು ಭವನದ ಹತ್ತಿರ ಕಳಿಸಲಾಗಿದೆ ಎಂದು ಉಪಾಧ್ಯಕ್ಷರಾದ ಅನಂತಶಯನಂ ಅವರು ಮಾಹಿತಿ ನೀಡಿದರು.

ಬೋಪಣ್ಣ: ಮನೋಬಲದ ದೊಡ್ಡಣ್ಣ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಟೆನಿಸ್ ಆಟಕ್ಕೆ ಭಾರತದಲ್ಲಿ ಗೌರವ ಮತ್ತು ಆಕರ್ಷಣೆ ತಂದುಕೊಟ್ಟ ಆಟಗಾರರಲ್ಲಿ ರೋಹನ್ ಬೋಪಣ್ಣ ಒಬ್ಬರು. ಅವರ ಹಿಂದೆ ಸಾಲು ಸಾಲು ಪ್ರಶಸ್ತಿಗಳ ಪ್ರಭಾವಳಿಯಿಲ್ಲ. ಆದರೆ, ಅವರು ಸಾಗಿಬಂದ ಹಾದಿಯಲ್ಲಿ ನೆಟ್ಟ ಮೈಲಿಗಲ್ಲುಗಳು ಕ್ರೀಡಾಪ್ರಿಯರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಯುವ ಕ್ರೀಡಾಪಟುಗಳ ಪಾಲಿಗೆ ಬೋಪಣ್ಣ ಒಂದು ಮಾದರಿ.

'ಗಡ್ಡದಲ್ಲಿ ಬೆಳ್ಳಿಗೂದಲು ಇಣುಕತೊಡಗಿದಾಗ ನಿವೃತ್ತಿಯ ಸಮಯ ಬಂದಿದೆ ಎಂದರ್ಥ' ಎಂದು ಕ್ರಿಕೆಟಿಗ ವಿರಾಟ್ ಕೊಹ್ಲಿ ಹಾಸ್ಯದ ಧಾಟಿಯಲ್ಲಿ ಹೇಳಿದ್ದರು. ಆದರೆ, ಕೆಲವು ದಿಗ್ಗಜ ಕ್ರೀಡಾಪಟುಗಳಿಗೆ ಈ ಮಾತು ಅನ್ವಯಿಸುವುದಿಲ್ಲ. ಗಡ್ಡದಲ್ಲಿ ನರೆಗೂದಲು ಹೆಚ್ಚಾದಷ್ಟೂ ಅವರ ಆಟದ ಸೊಬಗೂ ಹೊಳೆಯುತ್ತ ಹೋಗುತ್ತದೆ. ಹಳತಾದಂತೆ ಮೌಲ್ಯ ಮತ್ತು ರುಚಿ ಹೆಚ್ಚಾಗುವ ದ್ರಾಕ್ಷಾರಸದಂತೆಯೇ ಅವರ ವೃತ್ತಿಜೀವನವೂ ಕಳೆಗಟ್ಟುತ್ತದೆ. ಟೆನಿಸ್ ತಾರೆ ರೋಹನ್ ಬೋಪಣ್ಣ ಕೂಡ ಅಂತಹ ಆಟಗಾರರಲ್ಲಿ ಪ್ರಮುಖರು.

ಹಾಕಿ ಕ್ರೀಡೆಯು ಕೌಟುಂಬಿಕ ಸಂಸ್ಕೃತಿಯಾಗಿರುವ ಕೊಡಗು ಜಿಲ್ಲೆಯಿಂದ ಟೆನಿಸ್ ಕ್ರೀಡೆಗೆ ಅವರು ಕಾಲಿಟ್ಟಿದ್ದೇ ಒಂದು ರೋಚಕಗಾಥೆ. ಸುಮಾರು 23 ವರ್ಷಗಳ ಕಾಲ ತಮ್ಮ ಗಟ್ಟಿ ಮನೋಬಲ ಮತ್ತು ಅವಿರತ ಪರಿಶ್ರಮದ ಮೂಲಕ ಹೊಸ ಮಾದರಿಯನ್ನು ತೋರಿಸಿಕೊಟ್ಟ ಆಟಗಾರ ರೋಹನ್, ಇತ್ತೀಚೆಗೆ ತಮ್ಮ ವೃತ್ತಿಜೀವನಕ್ಕೆ ವಿದಾಯ ಘೋಷಿಸಿದ್ದಾರೆ. ಅದರೊಂದಿಗೆ ಭಾರತದ ಟೆನಿಸ್‌ನಲ್ಲಿ ಒಂದು ಯುಗ ಕೊನೆಗೊಂಡಂತಾಗಿದೆ. ಹೊಸದೊಂದು ಅಧ್ಯಾಯ ಬರೆಯುವ ಪ್ರತಿಭಾನ್ವಿತರಿಗಾಗಿ ಟೆನಿಸ್ ಅಂಕಣ ಎದುರು ನೋಡುತ್ತಿದೆ. ಇಂದಲ್ಲಾ ನಾಳೆ ಹೊಸ ತಾರೆಗಳು ಮಿಂಚಬಹುದು. ರೋಹನ್ ಅವರಿಗಿಂತಲೂ ಹೆಚ್ಚು ಪ್ರಶಸ್ತಿಗಳನ್ನು ಗೆದ್ದು ದಾಖಲೆಯನ್ನೂ ಮಾಡಬಹುದು. ಆದರೆ, ಪದೇ ಪದೇ ಎದುರಾದ ಸೋಲುಗಳನ್ನು ಸ್ವೀಕರಿಸಿ ಪುಟಿದೆದ್ದು ನಿಲ್ಲುವ ಅವರ ಗುಣವನ್ನು ಸರಿಗಟ್ಟುವ ಛಲದಂಕಮಲ್ಲರು ಬರುವರೇ?

'ಯಾವುದೇ ಆಟಗಾರನಿಗೂ ಇರಬೇಕಾದ ಮೂಲಗುಣವೇ ಮಾನಸಿಕ ದೃಢತೆ. ನಂತರ ಉಳಿದದ್ದು ಸುಗಮ' ಎಂದು ರೋಹನ್ ಒಂದು ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದರು.

ಅಪಾರ ಪರಿಶ್ರಮದ ನಂತರವೂ ನಿರೀಕ್ಷಿತ ಯಶಸ್ಸು ದೊರೆಯದೇ ಹೋದಾಗ ಹತಾಶರಾಗಿ ಕೈಕೊಡವಿ ಎದ್ದು ಹೋಗುವವರೇ ಹೆಚ್ಚು. ಆದರೆ, ರೋಹನ್ ಅವರ ವೃತ್ತಿಜೀವನದ ಪುಟಗಳನ್ನು ತೆರೆದುನೋಡಿದರೆ ಅಚ್ಚರಿ ಮೂಡುವುದು ಸಹಜ. 2003ರಲ್ಲಿ ಮೊದಲ ಬಾರಿಗೆ ವೃತ್ತಿಪರ ಟೆನಿಸ್‌ಗೆ ಕಾಲಿಟ್ಟ ಅವರಿಗೆ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಒಲಿದಿದ್ದು 14 ವರ್ಷಗಳ ನಂತರ. ಫ್ರೆಂಚ್ ಓಪನ್ ಟೂರ್ನಿಯ ಮಿಶ್ರ ಡಬಲ್ಸ್‌ನಲ್ಲಿ ಕೆನಡಾದ ಗ್ಯಾಬ್ರಿಯೆಲಾ ಡೆಬ್ರೊವಸ್ಕಿ ಅವರೊಂದಿಗೆ ಗೆದ್ದಿದ್ದರು. 2007ರಿಂದಲೇ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಅವರು ಆಡಿದ್ದರು. ಅದರಲ್ಲಿ ಕೆಲವು ಬಾರಿ ಸೆಮಿಫೈನಲ್ ಮತ್ತು ಫೈನಲ್‌ವರೆಗೂ ಅರ್ಹತೆ ಗಳಿಸಿದ್ದರು. ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಬೇರೆ ಬೇರೆ ದೇಶಗಳ ಜೊತೆಗಾರರೊಂದಿಗೆ ಹೊಂದಾಣಿಕೆ ಸಾಧಿಸುತ್ತ ತಮ್ಮ ಲಯವನ್ನೂ ಉಳಿಸಿಕೊಂಡು 'ಮರಳಿ ಮರಳಿ ಯತ್ನವ' ಮಾಡುತ್ತ ಸಾಗಿದವರು. ಹುಲ್ಲಿನಂಕಣ, ಮಣ್ಣಿನಂಕಣ ಮತ್ತು ಹಾರ್ಡ್ ಕೋರ್ಟ್‌ಗಳಲ್ಲಿ ಆಡುವ ಕೌಶಲಗಳನ್ನು ಕಲಿಯುತ್ತಲೇ ಬೆಳೆದರು.

ಅವರಿಗೆ ಎರಡನೇ ಗ್ರ್ಯಾನ್‌ಸ್ಲಾಮ್ ಒಲಿದಿದ್ದು ಹೋದ ವರ್ಷದ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ. ಪುರುಷರ ಡಬಲ್ಸ್‌ನಲ್ಲಿ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೊತೆಗೂಡಿ ಪ್ರಶಸ್ತಿ ಜಯಿಸಿದ್ದರು. ಅಲ್ಲದೆ, ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ್ದರು. ಆಗ ಅವರಿಗೆ 43 ವರ್ಷ ವಯಸ್ಸಾಗಿತ್ತು. ಗ್ರ್ಯಾನ್‌ಸ್ಲಾಮ್ ಟೆನಿಸ್‌ನಲ್ಲಿ ಈ ಸಾಧನೆ ಮಾಡಿದ ಅತ್ಯಂತ ಹಿರಿಯ ವಯಸ್ಸಿನ ಆಟಗಾರನೆಂಬ ಗೌರವಕ್ಕೂ ಅವರು ಪಾತ್ರರಾದರು. ರಾಡ್ ಲೇವರ್ ಟೆನಿಸ್ ಅಂಗಳದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಇಟಲಿಯ ಸಿಮೊನ್ ಬೊಲೆಲಿ ಹಾಗೂ ಆ್ಯಂಡ್ರಿಯಾ ವಾವಸೋರಿ ಜೋಡಿಯು ಕಠಿಣ ಪೈಪೋಟಿಯೊಡ್ಡಿತ್ತು. ರೋಹನ್ ಮತ್ತು ಮ್ಯಾಥ್ಯೂ ಜೋಡಿಯು ಅದನ್ನು ಮೀರಿ ನಿಂತಿತ್ತು.

ಇಷ್ಟು ವರ್ಷ ಆಡಿ ಕೇವಲ ಎರಡು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಸಾಕೇ ಎನ್ನುವ ಪ್ರಶ್ನೆ ಮೂಡಬಹುದು. ಅದರಾಚೆ ನೋಡುವುದಾದರೆ, ನಿರಂತರ ಸಾಧನೆಯ ಹಾದಿಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಳ್ಳುವ ಮನೋಭಾವವೇ ಶ್ರೇಷ್ಠವೆನಿಸುತ್ತದೆ. ಬಹಳಷ್ಟು ಶ್ರೇಷ್ಠ ಅಥ್ಲೀಟ್‌ಗಳಲ್ಲಿ ಕಾಣುವ ಗುಣವೇ ಇದು. ಕ್ರಿಕೆಟಿಗ ಜಸ್‌ಪ್ರೀತ್ ಬೂಮ್ರಾ ಅವರನ್ನೇ ನೋಡಿ. ಟೆಸ್ಟ್ ಕ್ರಿಕೆಟ್‌ನಲ್ಲಿ ಅವರು ಇದುವರೆಗೆ ಸುಮಾರು 10 ಸಾವಿರ ಎಸೆತಗಳನ್ನು ಹಾಕಿದ್ದಾರೆ. ಪಡೆದಿರುವುದು 226 ವಿಕೆಟ್ ಮಾತ್ರ. ಹಾಗೆಂದು ಉಳಿದ ಎಸೆತಗಳು ವ್ಯರ್ಥ ಎಂದು ಹೇಳಲಾಗದು. ಸಚಿನ್ ತೆಂಡೂಲ್ಕರ್ ಆಡಿದ್ದು 200 ಟೆಸ್ಟ್ ಪಂದ್ಯಗಳನ್ನು ಮಾತ್ರ. ಅದರಲ್ಲಿ ಅವರು ಗಳಿಸಿರುವುದು 51 ಶತಕಗಳನ್ನಷ್ಟೇ. ಹಾಗೆಂದು ಅವರ ಉಳಿದ ಇನಿಂಗ್ಸ್‌ಗಳು ಮಹತ್ವದ್ದಲ್ಲ ಎಂದು ಹೇಳಲಾಗದು. ಇದು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಒಬ್ಬ ವ್ಯಕ್ತಿಯ ಮಾನದಂಡ ಬರೀ ಅಂಕಿ–ಅಂಶ ಅಲ್ಲ. ಸೋತಾಗ ಪುಟಿದೆದ್ದು ನಿಲ್ಲುವ ಗುಣದಿಂದ ಮತ್ತು ತಾಳ್ಮೆಯ ಸ್ವಭಾವದಿಂದ ಶ್ರೇಷ್ಠತೆಯ ಹಾದಿಯತ್ತ ಸಾಗುತ್ತಾರೆ. ಅದಕ್ಕಾಗಿ ಜನಮಾನಸದಲ್ಲಿ ಸ್ಥಾನ ಗಳಿಸುತ್ತಾರೆ. 'ಸ್ವಭಾವ'ವೇ ವ್ಯಕ್ತಿತ್ವ ರೂಪಿಸುತ್ತದೆ.

ಎರಡು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಬಿಟ್ಟರೆ ರೋಹನ್ ಅವರ ಖಾತೆಯಲ್ಲಿ 20ಕ್ಕೂ ಹೆಚ್ಚು ಎಟಿಪಿ ಪ್ರಶಸ್ತಿಗಳಿವೆ. ಇದೆಲ್ಲದರೊಂದಿಗೆ ಒಲಿಂಪಿಕ್ ಕೂಟಗಳು, ಡೇವಿಸ್ ಕಪ್‌ಗಳಲ್ಲಿ ಆಡಿದ ಅಗಾಧ ಅನುಭವ ಅವರಿಗೆ ಇದೆ.

ಅವರಿಗೆ ತಾಳ್ಮೆ ಮತ್ತು ಛಲದ ಗುಣ ಬಂದಿದ್ದು ಬಾಲ್ಯದಿಂದಲೇ. ಏಕೆಂದರೆ ಅವರು ಜನಿಸಿದ ಊರು, ಪರಿಸರದಲ್ಲಿ ಟೆನಿಸ್ ಆಟ ಅಷ್ಟೇನೂ ಪರಿಚಿತವಾಗಿರಲಿಲ್ಲ. ಹಾಕಿ ಆಟಗಾರರಾಗುವ ಅಥವಾ ಸೇನೆಗೆ ಸೇರುವ ಗುರಿಯಿಟ್ಟುಕೊಂಡ ಹುಡುಗರ ನಡುವೆ ಬೆಳೆದವರು ರೋಹನ್. ಮೈಸೂರು, ಬೆಂಗಳೂರು ಮತ್ತು ಪುಣೆಯಲ್ಲಿ ತರಬೇತಿ ಪಡೆಯುವ ಮೂಲಕ ಬೆಳೆದರು. ತಮ್ಮ ಕುಟುಂಬದಿಂದ ಲಭಿಸಿದ ಪ್ರೋತ್ಸಾಹವನ್ನು ಸಮರ್ಥವಾಗಿ ಬಳಸಿಕೊಂಡರು. ಆರ್ಥಿಕವಾಗಿ ಎಲ್ಲ ಅನುಕೂಲಗಳಿದ್ದಾಗಲೂ ಬೇರೆ ಬೇರೆ ಆಕರ್ಷಣೆಗಳಿಗೆ ಬಲಿಯಾಗಿ ಗುರಿಯಿಂದ ವಿಮುಖರಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ. ಆ ಚಾಂಚಲ್ಯವನ್ನು ಮೀರಿ ಬೆಳೆಯುವುದು ಸುಲಭ ಸಾಧ್ಯವಲ್ಲ. ಆ ಪರೀಕ್ಷೆಯಲ್ಲಿ ರೋಹನ್ ಗೆದ್ದರು.

ಟೆನಿಸ್ ಆಟದ ಪ್ರೇಮಿಯಾಗಿದ್ದ ತಂದೆ ಎಂ.ಜಿ. ಬೋಪಣ್ಣ ಅವರೇ ರೋಹನ್ ಅವರಿಗೆ ಮೊದಲ ಗುರು. ಜಿಮ್ನಾಷಿಯಂಗಳೇ ಇಲ್ಲದ ಊರಲ್ಲಿ ತಂದೆ ಹೇಳಿಕೊಟ್ಟ ಮೂಲಪಾಠಗಳು ರೋಹನ್ ದೇಹ ಮತ್ತು ಮನಸ್ಸನ್ನು ಗಟ್ಟಿಗೊಳಿಸಿದವು.

ಜೂನಿಯರ್ ಹಂತದಲ್ಲಿ ರೋಹನ್ ತಮ್ಮ ಚುರುಕಿನ ಆಟದ ಮೂಲಕ ಬಹುಬೇಗನೆ ಗಮನ ಸೆಳೆದರು. ವೇಗದ ಸರ್ವ್‌ಗಳು, ಬಲಶಾಲಿ ರಿಟರ್ನ್‌ಗಳನ್ನು ಆಡುವ ಕಲೆಯನ್ನು ಕರಗತ ಮಾಡಿಕೊಂಡರು. ಸಿಂಗಲ್ಸ್ ಮತ್ತು ಡಬಲ್ಸ್ ಎರಡರಲ್ಲೂ ಸೈ ಎನಿಸಿಕೊಂಡರು. 17ನೇ ವಯಸ್ಸಿನಲ್ಲಿಯೇ ಐಟಿಎಫ್ ಪ್ರಶಸ್ತಿಗೆ ಮುತ್ತಿಕ್ಕಿದರು.

2003ರಲ್ಲಿ ಅವರು ವೃತ್ತಿಪರ ಟೆನಿಸ್‌ಗೆ ಕಾಲಿಟ್ಟರು. ಅದೇ ವರ್ಷ ಅವರು ಹೈದರಾಬಾದ್‌ನಲ್ಲಿ ನಡೆದ ಆಫ್ರೊ ಏಷ್ಯನ್ ಗೇಮ್ಸ್‌ನ ಪುರುಷರ ಡಬಲ್ಸ್‌ನಲ್ಲಿ ಮಹೇಶ್ ಭೂಪತಿ ಅವರೊಂದಿಗೆ ಚಿನ್ನದ ಪದಕ ಗೆದ್ದರು. ತಂಡ ವಿಭಾಗದಲ್ಲಿ ಪ್ರಕಾಶ್ ಅಮೃತರಾಜ್, ವಿಜಯ್ ಕಣ್ಣನ್ ಮತ್ತು ವಿಶಾಲ್ ಉಪ್ಪಳ ಅವರೊಂದಿಗೆ ರೋಹನ್ ಚಿನ್ನ ಗಳಿಸಿದರು. ಈ ಸಾಧನೆಯು ಅವರಲ್ಲಿದ್ದ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸಿತು. 90ರ ದಶಕದಲ್ಲಿ ಸ್ಮಾರ್ಟ್‌ಫೋನ್ ಕಲ್ಪನೆಯೂ ಇರದ ಕಾಲದಲ್ಲಿ ರೋಹನ್ ಆಟ ಆರಂಭವಾಯಿತು. ವೃತ್ತಿಜೀವನದ ಅಂತ್ಯದ ವರ್ಷಗಳಲ್ಲಿ 'ಕೃತಕ ಬುದ್ಧಿಮತ್ತೆ' ಆಧಾರಿತ ತಂತ್ರಜ್ಞಾನದ ತರಬೇತಿ ಪದ್ಧತಿಗೂ ಒಗ್ಗಿಕೊಂಡವರು ಅವರು. ಕಾಲಕ್ಕೆ ತಕ್ಕಂತೆ ಬದಲಾಗುತ್ತ ಬೆಳೆದರು. ಸಿಂಗಲ್ಸ್‌ನಲ್ಲಿ ಅಷ್ಟೇನೂ ಫಲ ಸಿಗದ ಕಾರಣ ಡಬಲ್ಸ್‌ನತ್ತ ಹೆಜ್ಜೆ ಇಟ್ಟರು. ಏಷ್ಯನ್ ಗೇಮ್ಸ್‌ನಲ್ಲಿ ಎರಡು ಚಿನ್ನ, ಆಫ್ರೋ ಏಷ್ಯನ್ ಕೂಟಗಳಲ್ಲಿ ಎರಡು ಚಿನ್ನ ಗೆದ್ದರು.

ಕ್ರಿಕೆಟ್‌ನಲ್ಲಿ ಖ್ಯಾತನಾಮರ ನಿವೃತ್ತಿಯಾದ ಕೆಲ ಕಾಲದಲ್ಲಿಯೇ ಮತ್ತಷ್ಟು ತಾರೆಗಳು ಪ್ರವರ್ಧಮಾನಕ್ಕೆ ಬರುತ್ತಾರೆ. ಉಳಿದ ಕ್ರೀಡೆಗಳಲ್ಲಿ ಅಂತಹ ಸ್ಥಿತಿಯಿಲ್ಲ. ಈಗ ಟೆನಿಸ್ ಅಂಗಣ ಕೂಡ ಖಾಲಿ ಎನಿಸುತ್ತಿದೆ. ಸುಮಿತ್ ನಗಾಲ್, ರಾಮಕುಮಾರ್ ರಾಮನಾಥನ್ ಅಂತಹ ಬೆರಳೆಣಿಕೆಯಷ್ಟು ಆಟಗಾರರು ಮಾತ್ರ ಕಾಣ ಸಿಗುತ್ತಿದ್ದಾರೆ. ಮಹಿಳೆಯರ ವಿಭಾಗದಲ್ಲಿಯೂ ಅಷ್ಟೇ. ಸಾನಿಯಾ ಮಿರ್ಜಾ ನಂತರ ಹೊಸ ತಾರೆಯ ಉದಯದ ನಿರೀಕ್ಷೆಯಲ್ಲಿ ಟೆನಿಸ್ ಅಂಗಳ ಇದೆ. ಅಂಕಿತಾ ರೈನಾ, ಪ್ರಾರ್ಥನಾ ಠೊಂಬರೆ, ಸಹಜಾ ಯಮಲಪಲ್ಲಿ, ಶ್ರೀವಲ್ಲಿ ಭಮಿಡಿಪಾಟಿ ಹಾಗೂ ರಿಯಾ ಭಾಟಿಯಾ ಅವರು ಭರವಸೆ ಮೂಡಿಸಿರುವ ಆಟಗಾರ್ತಿಯರಾಗಿದ್ದಾರೆ. ಆದರೆ, ಸಾನಿಯಾ ಅವರ ಮಟ್ಟಕ್ಕೇರಲು ಇನ್ನೂ ಅವರಿಗೆ ಬಹಳಷ್ಟು ಸಮಯ ಬೇಕಾಗಬಹುದು.

ಗ್ರಾಮಾಂತರ ವಿಭಾಗಗಳಲ್ಲಿ ಐಟಿಎಫ್, ಎಟಿಪಿ, ಡಬ್ಲ್ಯುಟಿಪಿಯಂತಹ ಟೂರ್ನಿಗಳು ನಡೆಯುತ್ತಿವೆ. ಅದರಿಂದಾಗಿ ಮಕ್ಕಳಲ್ಲಿ ಟೆನಿಸ್ ಮೇಲಿನ ಪ್ರೀತಿ ಮತ್ತು ಆಕರ್ಷಣೆಯನ್ನು ಹೆಚ್ಚಿಸುತ್ತವೆ. ಆದರೆ, ಇವತ್ತಿಗೂ ಮಧ್ಯಮ ಮತ್ತು ಕೆಳಮಧ್ಯಮವರ್ಗದ ಮಕ್ಕಳಿಗೆ ಈ ಆಟವು ಕೈಗೆಟುಕುವುದು ಕಷ್ಟ. ಕ್ರಿಕೆಟ್, ಬ್ಯಾಡ್ಮಿಂಟನ್, ಫುಟ್‌ಬಾಲ್ ಕ್ರೀಡೆಗಳಿಗೆ ಕೆಳಮಧ್ಯಮ ವರ್ಗದವರು ಮತ್ತು ಗ್ರಾಮಾಂತರ ಪ್ರತಿಭೆಗಳು ಬಂದು ಬೆಳಗುತ್ತಿದ್ದಾರೆ. ಅಂತಹ ಒಂದು ವ್ಯವಸ್ಥೆ ಟೆನಿಸ್‌ನಲ್ಲಿಯೂ ಆಗಬೇಕು. ಆ ನಿಟ್ಟಿನಲ್ಲಿ ರೋಹನ್ ಅವರಂತಹ ತಾರೆಯರು ಯೋಜನೆಗಳನ್ನು ರೂಪಿಸಬೇಕು. 'ಲವ್ ಗೇಮ್' ಖ್ಯಾತಿಯ ಟೆನಿಸ್‌ಪ್ರೀತಿ ಸಮಾಜದ ತಳಮಟ್ಟದಿಂದ ಚಿಗುರುವಂತಾಗಬೇಕು.



ವಾಚಕರ ವಾಣಿ

ದ್ವೇಷವಲ್ಲ, ದೇಶಕ್ಕೆ ಅಭಿವೃದ್ಧಿ ಬೇಕು

ಲೋಕಸಭೆ, ವಿಧಾನಸಭಾ ಚುನಾವಣೆ ಸಂದರ್ಭಗಳಲ್ಲಿ ಬಿಜೆಪಿಯು 'ಕಾಂಗ್ರೆಸ್ ಮುಕ್ತ ಭಾರತ' ತನ್ನ ಗುರಿ ಎಂದು ಘೋಷಿಸುತ್ತದೆ. ಇದೇ ಧಾಟಿಯಲ್ಲಿ ಬಿಜೆಪಿ ಬಗ್ಗೆ ಕಾಂಗ್ರೆಸ್ ಮಾತನಾಡುತ್ತದೆ. ಆದರೆ, ಜನರಿಗೆ ಬೇಕಿರುವುದು ಪಕ್ಷಮುಕ್ತ ಭಾರತವಲ್ಲ; ಬಡತನ, ನಿರುದ್ಯೋಗ ಮುಕ್ತ ಭಾರತ. ಲಕ್ಷಾಂತರ ಜನರು ಇಂದಿಗೂ ಬಡತನ, ನಿರುದ್ಯೋಗ, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ರಾಜಕೀಯ ಪಕ್ಷಗಳು ಪರಸ್ಪರ ಟೀಕಿಸುವುದಕ್ಕಿಂತ, ಜನರ ಬದುಕು ಸುಧಾರಿಸುವ ಕೆಲಸಕ್ಕೆ ಆದ್ಯತೆ ನೀಡಬೇಕು. ಉತ್ತಮ ಶಿಕ್ಷಣ, ಉದ್ಯೋಗಾವಕಾಶ, ಕೈಗಾರಿಕಾ ಅಭಿವೃದ್ಧಿಯ ಜತೆಗೆ ರೈತರಿಗೆ ಬೆಂಬಲ ನೀಡುವುದೇ ನಿಜವಾದ ಅಭಿವೃದ್ಧಿ. ದೇಶಕ್ಕೆ ಬೇಕಿರುವುದು ದ್ವೇಷದ ರಾಜಕೀಯವಲ್ಲ. ಈ ಸತ್ಯವನ್ನು ಆಳುವ ವರ್ಗವು ಮನಗಾಣುವುದು ಒಳಿತು.

ಪ್ರದೀಪ ಪಾದಗಟ್ಟಿ, ಬಸವನ ಬಾಗೇವಾಡಿ

ಪ್ರಭಾವಿಗಳ ಪೂರ್ವಗ್ರಹ ಅಪಾಯಕರ

'ಬಿಹಾರದ ಚುನಾವಣಾ ಸೋಲು ಕಾಂಗ್ರೆಸ್‌ಗೆ ಮೊದಲೇ ಗೊತ್ತಿದ್ದರಿಂದ, ಮತಗಳ್ಳತನದ ಆರೋಪ ಮಾಡುತ್ತಿದೆ' ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದ್ದಾರೆ. ರಾಹುಲ್ ಗಾಂಧಿ ಅವರ ಆರೋಪದಲ್ಲಿ ಕೊಂಚವೂ ಹುರುಳಿಲ್ಲವೆಂದು ಹೆಗ್ಡೆಯವರು ಅಷ್ಟೊಂದು ವಿಶ್ವಾಸದಿಂದ ಹೇಳುತ್ತಿರುವುದು ಅಚ್ಚರಿ ಮೂಡಿಸುತ್ತದೆ.

ರಾಹುಲ್, ಯೋಗೇಂದ್ರ ಯಾದವ್ ಮೊದಲಾದವರು ಕೇಳಿದ ಪ್ರಶ್ನೆಗಳಿಗೆ ಚುನಾವಣಾ ಆಯೋಗದ ಉತ್ತರ ಹೊಣೆಗಾರಿಕೆಯಿಂದ ಕೂಡಿದೆಯೇ? ಅದರ ನಡೆಯ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿರುವವರನ್ನೇ ಗೇಲಿ ಮಾಡುವುದು ಸರಿಯೇ? ಆಯೋಗ ನಡೆಸುತ್ತಿರುವ 'ಎಸ್‌ಐಆರ್' ಬಗ್ಗೆ ಹೆಗ್ಡೆ ಅವರಿಗೆ ತಕರಾರು ಇರುವುದೇ? ಈ ಸಂಬಂಧ ಎಲ್ಲಿಯಾದರೂ ಹೇಳಿಕೆ ನೀಡಿದ್ದಾರೆಯೇ? ಅವರು ಈ ಬಗ್ಗೆ ಮೌನವಹಿಸಿರುವುದೇಕೆ? ಹೆಗ್ಡೆ ಅವರಂತಹವರು ಪಕ್ಷ ಸಿದ್ಧಾಂತಗಳ ಗೋಜಲಿನಿಂದ ಮಾನಸಿಕ ಅಂತರ ಸಾಧಿಸದೆ, ಒಂದು ಪಕ್ಷದ ವಿರೋಧಿಯಂತೆ ಮಾತಾಡುತ್ತಿರುವುದು ವಿಷಾದನೀಯ. ಪ್ರಭಾವಿ ವ್ಯಕ್ತಿಗಳು ನಿಷ್ಪಕ್ಷಪಾತ ಮನಸ್ಸನ್ನು ಕಳೆದುಕೊಳ್ಳುತ್ತಿರುವಲ್ಲಿ ಭಾರತದ ಸಾಮಾಜಿಕ ಕತ್ತಲೆ ದಟ್ಟೈಸುತ್ತಿದೆ!

ದೊಡ್ಡಿಶೇಖರ್, ಆನೇಕಲ್

ಗಿಡ ನೆಟ್ಟು ತಿಮ್ಮಕ್ಕನಿಗೆ ಗೌರವ ಅರ್ಪಿಸಿ

ಸಾಲುಮರದ ತಿಮ್ಮಕ್ಕ ಅವರ ನಿಧನಕ್ಕೆ ಬಹುತೇಕರು ವಾಟ್ಸ್‌ಆ್ಯಪ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಭಾವಚಿತ್ರ ಹಂಚಿಕೊಂಡು ಶ್ರದ್ಧಾಂಜಲಿ ಸಲ್ಲಿಸಿದರು. ವೃಕ್ಷಮಾತೆಯ ಸಾಧನೆಯನ್ನು ಇಷ್ಟಕ್ಕೆ ಸೀಮಿತಗೊಳಿಸಬಾರದು. ತಿಮ್ಮಕ್ಕ ಅವರ ಆತ್ಮಕ್ಕೆ ನಿಜವಾಗಿಯೂ ಶಾಂತಿ ಕೋರುವುದಿದ್ದರೆ, ಒಂದೆರಡು ಗಿಡ ನೆಟ್ಟು ಬೆಳೆಸಬೇಕಿದೆ. ಅದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ. ಸರ್ಕಾರ ಕೂಡ ಪ್ರತಿ ಜಿಲ್ಲೆಯಲ್ಲಿರುವ ಸಸ್ಯತೋಟಗಳಲ್ಲಿ ತಿಮ್ಮಕ್ಕ ಅವರ ಪ್ರತಿಮೆ ಸ್ಥಾಪಿಸಿ, ಮುಂದಿನ ತಲೆಮಾರಿಗೆ ಅವರ ಮಾದರಿ ಸೇವೆಯನ್ನು ತಿಳಿಸಬೇಕಿದೆ.

ದೊರೆಸ್ವಾಮಿ, ಗದ್ದೆ ಬಿಂಡೇನಹಳ್ಳಿ

ಸುಧಾರಣೆ ಕಾಣದ ಅನ್ನದಾತನ ಬದುಕು

ರೈತನನ್ನು 'ಅನ್ನದಾತ' ಎನ್ನುತ್ತೇವೆ. ಆದರೆ, ಇಡೀ ದೇಶಕ್ಕೆ ಅನ್ನ ನೀಡುವ ರೈತ, ಬೆಂಬಲ ಬೆಲೆ ಆದಿಯಾಗಿ ತನಗೆ ಬೇಕಾದ ಎಲ್ಲಾ ಸೌಕರ್ಯವನ್ನು ಹೋರಾಟದ ಮೂಲಕವೇ ಪಡೆದುಕೊಳ್ಳುವ ದಯನೀಯ ಸ್ಥಿತಿ ತಲೆದೋರಿರುವುದು ದುರದೃಷ್ಟಕರ. ಭಾರತಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷ ಕಳೆದರೂ ರೈತನ ಸ್ಥಿತಿ ಇಂದಿಗೂ ಸುಧಾರಿಸದಿರುವುದು ದುರಂತವೇ ಸರಿ.

ಪ್ರತಿಕ್ ಟೋನಗೆ, ಬೆಳಗಾವಿ

ಕ್ರಿಸ್‌ಮಸ್ ಆಚರಣೆ: ಮುಂಗಡ ಬೇಡವೆ?

ರಾಜ್ಯ ಸರ್ಕಾರ ತನ್ನ ನೌಕರರಿಗೆ ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಹಾಗೂ ಆಯ್ದ ಧಾರ್ಮಿಕ ಹಬ್ಬಗಳ ಆಚರಣೆಯ ಖರ್ಚಿನ ನಿರ್ವಹಣೆಗಾಗಿ, ಮರುಪಾವತಿಯ ನಿಬಂಧನೆಗೆ ಒಳಪಟ್ಟು ಗರಿಷ್ಠ ₹25 ಸಾವಿರ ಮೊತ್ತದ ಹಬ್ಬದ ಮುಂಗಡ ನೀಡುತ್ತಿರುವುದು ಸರಿಯಷ್ಟೇ. ಬಹುತೇಕ ಪ್ರಮುಖ ಹಬ್ಬಗಳನ್ನು ಎಚ್‌ಆರ್‌ಎಂಎಸ್ ತಂತ್ರಾಂಶದ ಹಬ್ಬದ ಮುಂಗಡ ವಿಭಾಗದಲ್ಲಿ ಸೇರಿಸಲಾಗಿದೆ.

ಆಯಾ ಹಬ್ಬಗಳ ಸಂದರ್ಭದಲ್ಲಿ ಮುಂಗಡ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಸದರಿ ಹಬ್ಬಗಳ ಪಟ್ಟಿಯಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಸೇರಿಸಿಲ್ಲ. ಹಾಗಾಗಿ, ಕ್ರಿಶ್ಚಿಯನ್ ಸಮುದಾಯದ ನೌಕರರು ಮುಂಗಡ ಪಡೆಯುವ ಅವಕಾಶದಿಂದ ವಂಚಿತರಾಗಿದ್ದಾರೆ. ಸರ್ಕಾರವು ಕ್ರಿಸ್‌ಮಸ್‌ಗೂ ಮುಂಗಡ ನೀಡಬೇಕಿದೆ.

ಇಸ್ಮಾಯಿಲ್ ಎ., ಮಂಗಳೂರು

ಮೆಕ್ಕೆಜೋಳ ಬೆಳೆದ ರೈತರ ಪರದಾಟ

ಹೊಲಗಳಲ್ಲಿ ಹುಲುಸಾಗಿ ಬೆಳೆದಿರುವ ಮೆಕ್ಕೆಜೋಳ ಕಟಾವಿಗೆ ಸಜ್ಜಾಗಿದೆ. ಆದರೆ, ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ದೊರೆಯುತ್ತಿಲ್ಲ. ಇದರಿಂದ ರೈತರು ಕಟಾವು ಮಾಡದೆ ಹಾಗೆಯೇ ಬಿಟ್ಟಿದ್ದಾರೆ. ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ₹2,400 ಬೆಂಬಲ ಬೆಲೆ ಘೋಷಿಸಿದೆ. ಆದರೆ, ಇನ್ನೂ ಖರೀದಿ ಕೇಂದ್ರಗಳನ್ನು ತೆರೆದಿಲ್ಲ. ಈ ನಡುವೆಯೇ ಮುಕ್ತ ಮಾರುಕಟ್ಟೆಯಲ್ಲಿ ಮೆಕ್ಕೆಜೋಳದ ಬೆಲೆ ಕುಸಿದಿದೆ. ಹಾಗಾಗಿ, ಖರೀದಿದಾರರು ಮುಂದೆ ಬರುತ್ತಿಲ್ಲ. ಲಕ್ಷಾಂತರ ರೂಪಾಯಿ ಖರ್ಚು ಮಾಡಿರುವ ರೈತರಿಗೆ ದಿಕ್ಕು ತೋಚದಂತಾಗಿದೆ. ರಾಜ್ಯ ಸರ್ಕಾರವು ಬೆಂಬಲ ಬೆಲೆಯ ಜೊತೆಗೆ ಪ್ರೋತ್ಸಾಹಧನ ಘೋಷಿಸುವ ಮೂಲಕ ಖರೀದಿ ಆರಂಭಿಸಬೇಕಿದೆ.

ಸಂತೋಷ ಬ. ಬಾಗೇವಾಡಿ, ತಡಲಗಿ

ಚುರುಮುರಿ



ನಿಮೋ= ಬಿಹಾರಾಭಿವೃದ್ಧಿ!

• ಸುಮಂಗಲಾ

'ಬಂತಿದೋ ಕ್ರಾಂತಿ... ಆಯಿತಿದೋ ನವೆಂಬರ್ ಕ್ರಾಂತಿ...' ಬೆಕ್ಕಣ್ಣ ಭಲೇ ಸುಶ್ರಾವ್ಯವಾಗಿ ಅಗದಿ ಭಯಂಕರ ಹುರುಪಿನಿಂದ ಹಾಡುತ್ತಿತ್ತು.

'ಎಲ್ಲಿ ಕ್ರಾಂತಿಯಾತಲೇ? ಇಲ್ಲಂತೂ ಏನೂ ಆಗಿಲ್ಲ... ಸಿದ್ದೂ ಅಂಕಲ್ ಕುರ್ಚಿ ಅಲುಗಾಡಿಲ್ಲ' ಎಂದೆ.

'ಬಿಹಾರದಲ್ಲಿ ಕ್ರಾಂತಿ! ನಿಮೋ ಸುನಾಮಿವಳಗೆ ಎಲ್ಲಾರೂ ಥರಥರ ಕೊಚ್ಚಿಕೊಂಡು ಹೋದ್ರು. ಕಾಂಗಿಗಳಂತೂ ಇನ್ನು ಅಂಗಡಿ ಮುಚ್ಚಿ ಮನ್ಯಾಗೆ ಕೂರೂದೆ' ಎನ್ನುತ್ತ ಬೆಕ್ಕಣ್ಣ ಮೀಸೆ ತಿರುವಿತು.

'ಅದೇನೋ ಎಕ್ಸಿಟ್ ಪೋಲ್, ಮಣ್ಣುಮಸಿ ಅಂತೆಲ್ಲ ಮಾಡತಾರಲ್ಲ ಎಲ್ಲ ಬೊಗಳೆ... ಎಲ್ಲರಿಗೂ ಒಳಗಿಂದೊಳಗೇ ಗೊತ್ತಿರತೈತಿ ಗೆಲ್ಲೋ ಕುದುರಿ ಯಾವುದು ಅಂತ!'

'ನಿತೀಶ್ ಅಂಕಲ್ಲಿಗೆ ಪಲ್ಟೂರಾಮ್ ಅಂತಿದ್ದರಲ್ಲ... ಈಗ ಎಲ್ಲರಿಗೂ ಗೊತ್ತಾಗೈತಿ ಅಂವಾ ಖರೇ ಅಂದ್ರ ಸುಶಾಸನ ಬಾಬು ಅದಾನ ಅಂತ' ಬೆಕ್ಕಣ್ಣ ಅಭಿಮಾನದಿಂದ ಹೇಳಿತು.

'ಮಹಾಘಟಬಂಧನ್ ಅಂತ ಕೂಡಿದ ಪಕ್ಷಗಳು ಮಹಾವಿಸ್ಫೋಟದ ಪ್ರಹಸನ ನಡಸ್ಯಾರೆ. ಅಲ್ಲಿಯ ಶ್ರೀಸಾಮಾನ್ಯರಿಗೆ ಲಾಲೂ ಅಜ್ಜನ ಜಂಗಲ್ ರಾಜ್ ವಾಪಸು ಬಂದ್ರೆ ಅಂತ ಭಯವಾಗಿ ನಿಮೋ ಮಂತ್ರ ಪಠಿಸ್ಯಾರೆ ಅಷ್ಟೆ' ಎಂದೆ.

'ಇನ್ನು ಬಿಹಾರ ಏನಿದ್ದರೂ ಅಭಿವೃದ್ಧಿ ರಾಜ್! ಮಹಿಳಾ ಶಕ್ತಿರಾಜ್!' ಬೆಕ್ಕಣ್ಣ ಉದ್ಗರಿಸಿತು.

'ಕರ್ನಾಟಕದಾಗೆ ಹೆಣ್ಣುಮಕ್ಕಳಿಗೆ ಗೃಹಲಕ್ಷ್ಮಿ, ಪುಕ್ಕಟೆ ಬಸ್ ಪ್ರಯಾಣ ಕೊಟ್ಟು ರಾಜ್ಯದ ಬೊಕ್ಕಸ ತೂತು ಬಿದ್ದೈತಿ ಅಂತ ಕಮಲಕ್ಕನ ಮಂದಿ ಗೊಳೋ ಅಂತ ಅಳತಿದ್ದಾರೆ. ಅದೇ ಬಿಹಾರದಾಗೆ ಚುನಾವಣೆಗೆ ಎರಡೇ ತಿಂಗಳಿದ್ದಾಗ ಸ್ವಉದ್ಯೋಗ ಮಾಡ್ರಿ ಅಂತ ಹೆಣ್ಣುಮಕ್ಕಳಿಗೆ ಹತ್ತು ಸಾವಿರ ರೂಪಾಯಿ ಕೊಟ್ಟಾಗ ಹೆಂಗ ಬಾಯಿ ಮುಚ್ಚಿಕೊಂಡಿದ್ರು' ಎಂದೆ.

'ಚುನಾವಣೆ ಅಂದ್ರ ಇಂಥಾ ಹೂಟ ಹೂಡಲೇಬೇಕು! ನಿಮೋ = ನಮೋ = ಬಿಹಾರ = ಅಭಿವೃದ್ಧಿ ಅನ್ನೋ ಸಮೀಕರಣವನ್ನು ನಮ್ ಮೋದಿಮಾಮಾರು ಪ್ರೂವ್ ಮಾಡ್ಯಾರೆ. ಇನ್ನು ಇದೇ ಸಮೀಕರಣ ಇಡೀ ದೇಶಕ್ಕೂ ಅನ್ವಯವಾಗತೈತಿ!' ಬೆಕ್ಕಣ್ಣ ಕಣಿ ಹೇಳಿ ನನ್ನ ಬಾಯಿ ಮುಚ್ಚಿಸಿತು.

ಸಂಗತ

ಸಮುದಾಯಕ್ಕೆ ಕೊಡುಗೆ; ವಂಚಿತರಿಗೆ ಏನು?

ಕುರುಬ ಸಮುದಾಯಕ್ಕೆ ನೀಡಿರುವ ಕೊಡುಗೆಗಳಿಗಾಗಿ ಸಿದ್ದರಾಮಯ್ಯ ಅವರು ಹೆಮ್ಮೆಪಡುತ್ತಾರೆ. ಅತಿ ಹಿಂದುಳಿದ ಸಮುದಾಯಗಳಿಗೆ ಏನು ಮಾಡಿದ್ದಾರೆ?

• ಆರ್. ರಘು (ಕೌಟಿಲ್ಯ)

ಕುರುಬ ಸಮುದಾಯಕ್ಕೆ ಸಾಲು ಸಾಲು ಕೊಡುಗೆಗಳನ್ನು ನೀಡಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆ ಕೊಡುಗೆಗಳಲ್ಲಿ ಕುರುಬ ಸಮಾಜದ ಸಂಘಟನೆ, ಕಾಗಿನೆಲೆ ಪೀಠದ ಸ್ಥಾಪನೆ ಹಾಗೂ ಅಭಿವೃದ್ಧಿ ಸೇರಿವೆ.

ಬೆಂಗಳೂರು ಕುರುಬರ ಸಂಘದ ಕಟ್ಟಡಕ್ಕಾಗಿ ₹36 ಕೋಟಿ, ಕಾಗಿನೆಲೆ ಅಭಿವೃದ್ಧಿಗೆ ₹34 ಕೋಟಿ ನೀಡಲಾಗಿದೆ. 600 ಕುರುಬ ಸಮುದಾಯ ಭವನಗಳನ್ನು ರಾಜ್ಯದಲ್ಲಿ ಕಟ್ಟಲು ಸರ್ಕಾರ ಮುಂದಾಗಿದೆ. ವಿದ್ಯಾರ್ಥಿನಿಲಯಗಳ ಸ್ಥಾಪನೆ, ರಾಜ್ಯದ ಹಲವು ಕಡೆಗಳಲ್ಲಿ ಕುರುಬ ಸಮುದಾಯಕ್ಕೆ ನಿವೇಶನ ಹಾಗೂ ಕಟ್ಟಡಗಳ ಸವಲತ್ತು ಸಿದ್ದರಾಮಯ್ಯನವರು ನೀಡಿರುವ ಕೊಡುಗೆಗಳಲ್ಲಿ ಸೇರಿವೆ. ಇದೆಲ್ಲವೂ ಸಂತೋಷಪಡುವ ವಿಚಾರವೇ ಹೌದು. ಆದರೆ, ಇದೇ ಸಂದರ್ಭದಲ್ಲಿ ಅತೀ ಹಿಂದುಳಿದ ಮಡಿವಾಳ, ವಿಶ್ವಕರ್ಮ, ಕುಂಬಾರ, ಗಾಣಿಗ, ಗೊಲ್ಲ, ಕಾಡುಗೊಲ್ಲ, ಕೋಳಿ, ಬೆಸ್ತ, ಉಪ್ಪಾರ, ಸಿಂಪಿಗ, ನೇಕಾರ, ಸವಿತಾ, ಹಡಪದ, ಮೊದಲಾದ ಕಸುಬು ಆಧಾರಿತ ಕಾಯಕ ಸಮುದಾಯಗಳು ಹಾಗೂ ಅತೀ ಹಿಂದುಳಿದ ಅಲೆಮಾರಿ ಸಮುದಾಯಗಳ ಏಳಿಗೆಗೆ ತಮ್ಮ ಅಧಿಕಾರಾವಧಿಯಲ್ಲಿ ಏನೇನು ಕೊಡುಗೆ ನೀಡಿದ್ದೇನೆ ಎನ್ನುವುದನ್ನು ಅವರು ತಿಳಿಸಿಕೊಟ್ಟರೆ ಈ ಸಮುದಾಯಗಳು ಧನ್ಯತಾಭಾವ ಹೊಂದಬಹುದು.

ಇಂದಿಗೂ ಸಮಾಜದ ಮುಖ್ಯವಾಹಿನಿಯಲ್ಲಿ ಪ್ರಾತಿನಿಧ್ಯ ಹೊಂದಲು ಅಶಕ್ತವಾಗಿರುವ ಈ ಸಮಾಜಗಳು ತಮಗಾಗುವ ಅನ್ಯಾಯ, ಶೋಷಣೆ, ದೌರ್ಜನ್ಯಗಳ ವಿರುದ್ಧ ದನಿ ಎತ್ತಲಾಗದ ದಯನೀಯ ಸ್ಥಿತಿಯಲ್ಲಿವೆ. 'ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮ'ದಿಂದ ಈ ಸಮುದಾಯಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ, ಜಾತಿಗಳ ಹೆಸರಿನ ನಿಗಮಗಳನ್ನು ಅಸ್ತಿತ್ವಕ್ಕೆ ತರಲಾಯಿತು. ಈ ನಿಗಮಗಳಿಗೆ ಸಿದ್ದರಾಮಯ್ಯನವರು ಬಿಡುಗಡೆ ಮಾಡಿರುವ ಅನುದಾನದ ಪಟ್ಟಿಯನ್ನು ಬಿಡುಗಡೆ ಮಾಡಲು ಸಾಧ್ಯವೇ? ಸಾಧ್ಯವೇ ಇಲ್ಲ. ಏಕೆಂದರೆ, ಈ ನಿಗಮಗಳಿಗೆ ಅವರು ಬಿಡುಗಡೆ ಮಾಡಿರುವ ಅನುದಾನ 'ಮೂಗಿಗೆ ತುಪ್ಪ ಸವರಿದಂತೆ' ಇದೆಯಷ್ಟೇ. ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಅತೀ ಹಿಂದುಳಿದ ಜಾತಿಗಳನ್ನು 'ಅಹಿಂದ' ಹೆಸರಿನಲ್ಲಿ ಗುರುತೂ ಸಿಗಲಾರದಂತೆ ಖರಾಬು ಭೂಮಿ ರೀತಿಯಲ್ಲಿ ಒತ್ತರಿಸಿಕೊಂಡು ಬಿಟ್ಟಿದ್ದಾರೆ.



ಈ ಸಮುದಾಯಗಳು ಸಾಮಾಜಿಕ ನ್ಯಾಯದಿಂದ ವಂಚಿತವಾಗಿ, ಅನಾಥಪ್ರಜ್ಞೆ ಹಾಗೂ ಅಭದ್ರತೆಯಲ್ಲಿ ಬದುಕು ಕಟ್ಟಿಕೊಳ್ಳಲು ಅತ್ಯಂತ ಸಂಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿವೆ.

ಮೀಸಲಾತಿ ಈ ಸಮುದಾಯಗಳನ್ನು ಹೆಸರಿಗಷ್ಟೇ ಸ್ಪರ್ಶಿಸಿದೆಯೇ ಹೊರತು ಇವರ ತಟ್ಟೆಗೆ ಅದರ ಅಗುಳೂ ಬೀಳುವುದಿಲ್ಲ. ಇತ್ತೀಚಿನ ಒಳಮೀಸಲಾತಿ ಹಂಚಿಕೆಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ಅಲೆಮಾರಿಗಳ ಪಾಲಿನ ಶೇ 1ರಷ್ಟು ಮೀಸಲಾತಿಯನ್ನು ನಿರ್ದಯವಾಗಿ ಕಿತ್ತುಕೊಂಡು ಅವರ ಭವಿಷ್ಯದ ಬೆಳಕು ಮಸುಕಾಗಿಸಿ ಕಠೋರತೆ ಮೆರೆಯಲಾಗಿದೆ.

ಕನಕದಾಸರ 'ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ' ಎಂಬ ಸಾಲಿನಂತೆ, ಸಂಘಟಿತ ಕುಲಗಳ ನಡುವೆ ನೆಲೆಯೇ ಕಾಣಲಾಗದ ಕುಲದಲ್ಲಿ ಜನಿಸಿರುವ ಈ ಅಮಾಯಕ ಕಾಯಕಜೀವಿಗಳ ಕಣ್ಣೀರು ಒರೆಸಲು ಕನಕದಾಸರೇ ಮತ್ತೆ ಹುಟ್ಟಿ ಬರಬೇಕಾಗಿದೆ ಅಥವಾ 'ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು' ಎಂದು ಹೇಳಿ, ಅದರಂತೆಯೇ ಸಾಮಾಜಿಕ ನ್ಯಾಯವನ್ನು ಹಂಚಿದ ಡಿ. ದೇವರಾಜ ಅರಸರು ಮತ್ತೆ ಜೀವಗೊಳ್ಳಬೇಕಾಗಿದೆ.

ಮಲ ಹೊರುವ ಪದ್ಧತಿಯನ್ನು ರದ್ದು ಮಾಡುವ ಮೂಲಕ ದೇವರಾಜ ಅರಸರು ಪರಿಶಿಷ್ಟರ ಆತ್ಮಗೌರವ ರಕ್ಷಿಸಿದರು. ಆದರೆ, ಇಂದಿಗೂ ಮಲಮಿಶ್ರಿತ ರೋಗರುಜಿನದ ಬಟ್ಟೆ ತೊಳೆಯುವ ಗುಲಾಮಿ ಪದ್ಧತಿಯನ್ನು ಸಂಕೇತಿಸುವ ನಡೆಮಡಿಯನ್ನು ಹಾಸುವ ಮಡಿವಾಳ ಸಮುದಾಯ ಆ ವರ್ತುಲದಿಂದ ಹೊರಬರಲಾಗಿಲ್ಲ, ಕನಿಷ್ಠ ಪಕ್ಷ ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರ್ಪಡೆಯೂ ಆಗಲಿಲ್ಲ. ಮೊದಲ ಅವಧಿಯಲ್ಲಿ ಯಡಿಯೂರಪ್ಪನವರು ಕುಲಶಾಸ್ತ್ರ ಅಧ್ಯಯನ ನಡೆಸಿ ಮಡಿವಾಳರನ್ನು ಪರಿಶಿಷ್ಟ ಜಾತಿಗೆ ಸೇರಿಸಬಹುದು ಎಂಬ ವರದಿ ತರಿಸಿಕೊಳ್ಳುವ ಮನಸ್ಸು ಮಾಡಿದರು. ಆ ವರದಿ ಇಂದಿಗೂ ದೂಳು ತಿನ್ನುತ್ತಿದೆ.

ಇಂದಿಗೂ ಅಸ್ಪೃಶ್ಯತೆಯ ಬಾಧೆ ಅನುಭವಿಸುತ್ತಿರುವ ಸವಿತಾ ಸಮಾಜದ ಬಂಧುಗಳು ತಮ್ಮ ವೃತ್ತಿ ಕೌಶಲವನ್ನು ಉನ್ನತೀಕರಿಸಿಕೊಳ್ಳಲಾಗದೆ, ಪರಿಶಿಷ್ಟರ ಜಾತಿಯ ಪಟ್ಟಿಗೆ ಸೇರಿ ಅನುಕೂಲವನ್ನೂ ಪಡೆಯಲಾಗದೆ, ತ್ರಿಶಂಕು ಸ್ಥಿತಿ ಅನುಭವಿಸುತ್ತಿದ್ದಾರೆ. ಆಧುನಿಕ ತಂತ್ರಜ್ಞಾನದ ಹೊಡೆತಕ್ಕೆ ಸಿಲುಕಿ ಕುಂಬಾರಿಕೆ ನಲುಗುತ್ತಿದೆ, ಎಣ್ಣೆಯ ಗಾಣಗಳು ಸ್ಥಗಿತಗೊಂಡಿವೆ, ನೇಕಾರಿಕೆಯಂತೂ ನಿರಂತರ ನಲುಗುತ್ತಿದೆ, ಜಾತ್ರೆಗಳ ಬೆನ್ನಿಗೆ ಬಿದ್ದು ಊರೂರು ಸುತ್ತಿ ವ್ಯಾಪಾರದಿಂದ ಬದುಕು ಮಾಡುತ್ತಿದ್ದ ಅಲೆಮಾರಿ ಸಮುದಾಯಗಳ ಸ್ಥಿತಿಯಂತೂ ಅಸಹನೀಯವಾಗಿದೆ. ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಾದರೂ ಪಾಲು ಸಿಗುತ್ತದೆಯೇ ಎಂದು ಪ್ರಯತ್ನಿಸುವ ಶಕ್ತಿಯೂ (ಒಳಮೀಸಲಾತಿ) ಈ ಸಮುದಾಯಗಳಿಗೆ ಇಲ್ಲವಾಗಿದೆ.

ಕುರುಬ ಸಮುದಾಯವೂ ಸೇರಿದಂತೆ ಹಿಂದುಳಿದ, ಅಸಂಘಟಿತ, ಅತೀ ಹಿಂದುಳಿದ ಸಮುದಾಯಗಳಿಗೆಲ್ಲ ಸಮಾನ ನ್ಯಾಯ ಸಿಗಬೇಕಾಗಿದೆ. ತಮ್ಮ ಸುದೀರ್ಘ ಅಧಿಕಾರದ ಅವಧಿಯಲ್ಲಿ ಕುಲಕಸುಬು ನೆಚ್ಚಿದ ಸಮಾಜಗಳಿಗಾಗಿ ಹಾಗೂ ಅಲೆಮಾರಿಗಳಿಗಾಗಿ ಸಿದ್ದರಾಮಯ್ಯನವರು ಗುರುತರವಾದುದೇನನ್ನೂ ಮಾಡಿಲ್ಲ. ಆ ನೋವು ಈ ನತದೃಷ್ಟ ಸಮಾಜಗಳ ಹೃದಯದಲ್ಲಿ ಶಾಶ್ವತವಾಗಿ ಉಳಿದುಬಿಡುತ್ತದೆ ಎಂಬುದನ್ನು ಅವರು ಮರೆಯಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣ ಶೇ 24ರಷ್ಟು ಕಡಿಮೆಯಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಹೆರಿಗೆ ಸಮಯ ಮತ್ತು ನಂತರದಲ್ಲಿ ಮೃತಪಡುತ್ತಿರುವ ಮಹಿಳೆಯರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದ್ದರೂ ದಕ್ಷಿಣದ ರಾಜ್ಯಗಳ ಪೈಕಿ ತಾಯಂದಿರ ಮರಣ ಪ್ರಮಾಣ ಕರ್ನಾಟಕದಲ್ಲೇ ಹೆಚ್ಚಿದೆ. ಈ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಉದ್ದೇಶದಿಂದ ತಾಲ್ಲೂಕು ಮಟ್ಟದ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಜ್ಞ ವೈದ್ಯರನ್ನು ನಿಯೋಜಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲು ಆರೋಗ್ಯ ಇಲಾಖೆ ಮುಂದಾಗಿದೆ. ಆದರೆ, ಈ ಗುರಿ ತಲುಪಲು ರಾಜ್ಯವು ಬಹುದೂರ ಸಾಗಬೇಕಾಗಿದೆ

ತಾಯಿ ಮರಣ ತಡೆ ಸಾಗಬೇಕಿದೆ ಬಹುದೂರ

ಪ್ರಜಾವಾಣಿ ವಾರ್ತೆ

2024ರಲ್ಲಿ ಅಕ್ಟೋಬರ್‌ವರೆಗೆ ರಾಜ್ಯದಲ್ಲಿ ಪ್ರಸವದ ವೇಳೆ 483 ತಾಯಂದಿರು ಸಾವಿಗೀಡಾಗಿದ್ದರು. 2025ರಲ್ಲಿ ಅಕ್ಟೋಬರ್‌ವರೆಗೆ 366 ತಾಯಂದಿರ ಸಾವುಗಳು ವರದಿಯಾಗಿದ್ದು, ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವು (ಎಂಎಂಆರ್) ಕಡಿಮೆ ಆಗಿದೆ ಎಂದು ಸರ್ಕಾರ ಹೇಳಿದೆ. 2030ರ ವೇಳೆಗೆ ತಾಯಿ ಮರಣ ಪ್ರಮಾಣವನ್ನು ಪ್ರತಿ ಲಕ್ಷ ಜನನಕ್ಕೆ 70ರ ಒಳಗೆ ಇರುವಂತೆ ನೋಡಿಕೊಳ್ಳುವುದು ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ (ಎಸ್‌ಡಿಜಿ) ಒಂದಾಗಿದ್ದು, ಅದನ್ನು ಸಾಧಿಸಿದ ಎಂಟು ರಾಜ್ಯಗಳಲ್ಲಿ ಕರ್ನಾಟಕವೂ ಒಂದು.

ಎಂಎಂಆರ್ ಅನ್ನು ಮತ್ತಷ್ಟು ಕಡಿಮೆ ಮಾಡಲು ಹಲವು ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗಿದೆ. ತಿಂಗಳಿಗೆ 30ಕ್ಕೂ ಹೆಚ್ಚು ಹೆರಿಗೆಗಳಾಗುವ ರಾಜ್ಯದ 147 ತಾಲ್ಲೂಕು ಆಸ್ಪತ್ರೆಗಳು ಮತ್ತು 42 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಪ್ರಸೂತಿ ತಜ್ಞರು, ಮಕ್ಕಳ ತಜ್ಞರು, ರೇಡಿಯಾಲಜಿಸ್ಟ್, ಅರಿವಳಿಕೆ ತಜ್ಞರನ್ನು ನಿಯೋಜಿಸುವುದು; ಅವುಗಳನ್ನು ಸಮಗ್ರ ತುರ್ತು ಹೆರಿಗೆ ಮತ್ತು ನವಜಾತ ಶಿಶು ಆರೈಕೆ ಕೇಂದ್ರಗಳನ್ನಾಗಿ (ಸಿಇಎಂಒಎನ್‌ಸಿ) ಪರಿಗಣಿಸುವುದು; ಜಿಲ್ಲಾ ಆಸ್ಪತ್ರೆಗಳಲ್ಲಿ ನಾಲ್ವರು ಪ್ರಸೂತಿ ತಜ್ಞರು, ನಾಲ್ವರು ಅರಿವಳಿಕೆ ತಜ್ಞರು ಮತ್ತು ಇಬ್ಬರು ಮಕ್ಕಳ ತಜ್ಞರನ್ನು ನಿಯೋಜಿಸುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇತ್ತೀಚೆಗೆ ಹೇಳಿದ್ದಾರೆ.




ರಾಜ್ಯದಲ್ಲಿ 200 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕಡಿಮೆ ಹೆರಿಗೆಗಳು ನಡೆಯುತ್ತಿದ್ದು, ಈ ಪೈಕಿ 162ರಲ್ಲಿ ಹೆರಿಗೆಗಳೇ ನಡೆದಿಲ್ಲ. ಇಂಥ ಆಸ್ಪತ್ರೆಗಳಿಂದ ಹೆಚ್ಚು ಹೆರಿಗೆಗಳು ನಡೆಯುವ ಆಸ್ಪತ್ರೆಗಳಿಗೆ ವೈದ್ಯರು ಮತ್ತು ನರ್ಸ್‌ಗಳನ್ನು ವರ್ಗಾಯಿಸಲು ಆರೋಗ್ಯ ಇಲಾಖೆ ತೀರ್ಮಾನಿಸಿದೆ.

ಕಳೆದ ವರ್ಷ ಬಳ್ಳಾರಿ ಮತ್ತು ಹಲವೆಡೆ ಬಾಣಂತಿಯರ ಸಾವುಗಳು ಸಂಭವಿಸಿದ್ದವು. ಈ ಸಂಬಂಧ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ರಾಜ್ಯ ಸರ್ಕಾರವು ತಜ್ಞರ ಸಮಿತಿ ನೇಮಿಸಿತ್ತು. 2024ರ ಏಪ್ರಿಲ್ 1ರಿಂದ ಡಿಸೆಂಬರ್ 31ರವರೆಗೆ, ರಾಜ್ಯದಲ್ಲಿ ಒಟ್ಟು 464 ತಾಯಂದಿರು ಸಾವಿಗೀಡಾಗಿದ್ದರು. ಈ ಪೈಕಿ ಶೇ 70ರಷ್ಟು ಸಾವುಗಳನ್ನು ತಡೆಯಬಹುದಾಗಿತ್ತು ಎಂದು ತಜ್ಞರ ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವಿಶ್ಲೇಷಣಾ ವರದಿ ತಿಳಿಸಿತ್ತು. ಒಟ್ಟು ಸಾವಿನ ಪ್ರಕರಣಗಳಲ್ಲಿ ಶೇ 50ರಷ್ಟು ತಾಯಂದಿರು 19ರಿಂದ 25 ವರ್ಷದ ನಡುವಿನವರು; ಶೇ 68.05ರಷ್ಟು ಸಾವುಗಳಿಗೆ ಅಧಿಕ ರಕ್ತದೊತ್ತಡ, ಹೃದ್ರೋಗ, ಡಯಾಬಿಟಿಸ್, ಸೋಂಕು ಮುಂತಾದವುಗಳು ಕಾರಣ; 10 ಪ್ರಕರಣಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ನಿರ್ಲಕ್ಷ್ಯ ಸಾಬೀತಾಗಿದೆ ಎಂದೂ ವರದಿ ಹೇಳಿತ್ತು.

ಕೋವಿಡ್ ಅವಧಿಯಲ್ಲಿ ಕರ್ನಾಟಕ ಸೇರಿದಂತೆ ದೇಶದಾದ್ಯಂತ ಎಂಎಂಆರ್ ಹೆಚ್ಚಾಗಿತ್ತು. ಜಾಗತಿಕ ಮಟ್ಟದಲ್ಲಿಯೂ ಈ ಅವಧಿಯಲ್ಲಿ ಹೆಚ್ಚು ತಾಯಂದಿರು ಮರಣ ಹೊಂದಿದ್ದಾರೆ. ಕೋವಿಡ್ ಸೋಂಕು ತಗುಲಿ ಕೆಲವು ಬಾಣಂತಿಯರು ಸತ್ತರೆ, ಕೋವಿಡ್ ಸಾಂಕ್ರಾಮಿಕ ವ್ಯಾಪಕವಾಗಿ ಹಬ್ಬಿದ್ದ ಕಾರಣಕ್ಕೆ ಸಕಾಲಕ್ಕೆ ಸೂಕ್ತ ಚಿಕಿತ್ಸೆ ಸಿಗದೇ ಹಲವರು ಮೃತಪಟ್ಟರು ಎಂದು ಡಬ್ಲ್ಯುಎಚ್‌ಒ ವಿಶ್ಲೇಷಿಸಿದೆ.

ದಕ್ಷಿಣದಲ್ಲಿ ಪ್ರಸವಪೂರ್ವ, ಪ್ರಸವ ನಂತರದ ಸಾವು ಕರ್ನಾಟಕದಲ್ಲೇ ಹೆಚ್ಚು





₹139.5 ಕೋಟಿ ವೆಚ್ಚದಲ್ಲಿ ಹಲವು ಕಾರ್ಯಕ್ರಮ

ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಲು ಆರೋಗ್ಯ ಇಲಾಖೆ ಅಭಿಯಾನವನ್ನು ಆರಂಭಿಸಿದೆ. ಅದರ ಅಡಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲು ₹139.5 ಕೋಟಿ ಬಜೆಟ್ ಹಂಚಿಕೆ ಮಾಡಲಾಗಿದೆ.

ಇದರ ಅಡಿಯಲ್ಲಿ 148 ತಾಲ್ಲೂಕು ಆಸ್ಪತ್ರೆಗಳು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 41 ಸಮುದಾಯ ಆರೋಗ್ಯ ಕೇಂದ್ರಗಳಿಗೆ ತಜ್ಞ ವೈದ್ಯರನ್ನು ನೇಮಿಸುವುದು, ಗರ್ಭಿಯಣಿಯರಿಗೆ ಪ್ರೋತ್ಸಾಹ ಧನ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮೇಲ್ದರ್ಜೆಗೆ ಏರಿಸುವುದು, ತುರ್ತು ಪ್ರಕರಣಗಳ ನಿರ್ವಹಣೆಗಾಗಿ ಖಾಸಗಿ ಆಸ್ಪತ್ರೆಗಳಿಗೆ ಫಲಾನುಭವಿ ಪ್ಯಾಕೇಜ್ ಅನ್ನು ಹೆಚ್ಚಿಸುವುದೂ ಸೇರಿದಂತೆ 13 ಕಾರ್ಯಕ್ರಮಗಳನ್ನು ಆರೋಗ್ಯ ಇಲಾಖೆ ಕೈಗೆತ್ತಿಕೊಳ್ಳಲಿದೆ.

ಸಾವಿಗೆ ಕಾರಣಗಳು

- ಅಧಿಕ ರಕ್ತಸ್ರಾವ
- ಗರ್ಭಿಣಿಯಾಗಿದ್ದಾಗ ಅಧಿಕ ರಕ್ತದೊತ್ತಡ ಹಾಗೂ ಅದರಿಂದ ಉಂಟಾಗುವ ಇತರ ಆರೋಗ್ಯ ಸಮಸ್ಯೆಗಳು
- ಸೋಂಕುಗಳು
- ಗರ್ಭಪಾತಗಳು
- ಥ್ರಂಬೋಸಿಸ್ (ನರದಲ್ಲಿ ರಕ್ತಹೆಪ್ಪುಗಟ್ಟುವಿಕೆ) ಮತ್ತು ಎಂಬಾಲಿಸಮ್ (ಗರ್ಭಕೋಶದಲ್ಲಿನ ದ್ರವವು ದೇಹದ ರಕ್ತನಾಳಗಳಿಗೆ ಸೇರಿ ರಕ್ತದ ಹರಿಯುವಿಕೆಗೆ ತಡೆ ಒಡ್ಡುವುದು)
- ವಿವಿಧ ಕಾಯಿಲೆಗಳು
- ಆಸ್ಪತ್ರೆಗೆ ಕರೆದೊಯ್ಯದೆ ಮನೆಗಳಲ್ಲೇ ಹೆರಿಗೆ ಮಾಡಿಸುವುದು
- ಹೆರಿಗೆ ಪೂರ್ವ, ಪ್ರಸವದ ನಂತರದ ಆರೈಕೆ ಮತ್ತು ಮೇಲ್ವಿಚಾರಣೆಯಲ್ಲಿನ ಕೊರತೆ
- ಗರ್ಭಾವಸ್ಥೆಯಲ್ಲಿ ಮತ್ತು ಹೆರಿಗೆ ನಂತರದಲ್ಲಿ ಎದುರಿಸುತ್ತಿರುವ ಆರೋಗ್ಯ ಸಮಸ್ಯೆಯನ್ನು ಸಕಾಲದಲ್ಲಿ ಗುರುತಿಸುವಲ್ಲಿ ವೈಫಲ್ಯ
- ಕೆಳ ಹಂತದ ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ, ಮೂಲಸೌಕರ್ಯಗಳ ಕೊರತೆ
- ವೈದ್ಯಕೀಯ ಸಿಬ್ಬಂದಿ ನಿರ್ಲಕ್ಷ್ಯ


ಉತ್ತರದಲ್ಲಿ ಹೆಚ್ಚು, ದಕ್ಷಿಣ ರಾಜ್ಯಗಳಲ್ಲಿ ಕಡಿಮೆ

ದೇಶದಲ್ಲಿ ತಾಯಂದಿರ ಮರಣದ ಸ್ಥಿತಿಯನ್ನು ಅವಲೋಕಿಸಿ ಹೇಳುವುದಾದರೆ, ಉತ್ತರ ಭಾರತದಲ್ಲಿ ಹೆರಿಗೆಯ ಸಮಯದಲ್ಲಿ ಮತ್ತು ನಂತರ ಮೃತಪಡುತ್ತಿರುವ ತಾಯಂದಿರ ಸಂಖ್ಯೆ ಹೆಚ್ಚಿದೆ. ದಕ್ಷಿಣ ಭಾರತದಲ್ಲಿ ಈ ಪ್ರಮಾಣ ಕಡಿಮೆ ಇದೆ. 2021–23ರ ಮಾದರಿ ನೋಂದಣಿ ವ್ಯವಸ್ಥೆ (ಎಸ್‌ಆರ್‌ಎಸ್) ಅಂಕಿ ಅಂಶಗಳ ಪ್ರಕಾರ, ದೇಶದಲ್ಲಿ ಪ್ರತಿ ಲಕ್ಷ ಜನನಕ್ಕೆ ತಾಯಂದಿರ ಸಾವಿನ ಪ್ರಮಾಣ 88ರಷ್ಟಿದೆ.

ವರ್ಷದಿಂದ ವರ್ಷಕ್ಕೆ ಈ ಪ್ರಮಾಣ ಕಡಿಮೆಯಾಗುತ್ತಿದ್ದರೂ ಉತ್ತರ ಭಾರತದ ದೊಡ್ಡ ದೊಡ್ಡ ರಾಜ್ಯಗಳಲ್ಲಿ ತಾಯಂದಿರು ದೊಡ್ಡ ಸಂಖ್ಯೆಯಲ್ಲಿ ಮರಣ ಹೊಂದುತ್ತಿರುವುದರಿಂದ ದೇಶದಲ್ಲಿ ಒಟ್ಟಾರೆ ಪ್ರಮಾಣ ಹೆಚ್ಚಿದೆ.

2021–23ರ ಅಂಕಿ ಅಂಶ ಪ್ರಕಾರ ಒಡಿಶಾದಲ್ಲಿ ಈ ಪ್ರಮಾಣ ಗರಿಷ್ಠ 153 ಇದೆ. ಛತ್ತೀಸಗಢ ಎರಡನೇ ಸ್ಥಾನದಲ್ಲಿದೆ. ಅಲ್ಲಿ ಒಂದು ಲಕ್ಷ ಶಿಶುಗಳು ಜನಿಸಿದರೆ 146 ತಾಯಂದಿರು ಮೃತಪಡುತ್ತಿದ್ದಾರೆ. ಮೂರನೇ ಸ್ಥಾನದಲ್ಲಿರುವ ಮಧ್ಯಪ್ರದೇಶ-ದಲ್ಲಿ ತಾಯಂದಿರ ಸಾವಿನ ಪ್ರಮಾಣ 142 ಇದೆ. ಉತ್ತರ ಪ್ರದೇಶ (141) ಮೂರನೇ ಸ್ಥಾನದಲ್ಲಿದೆ. ಪುಟ್ಟ ರಾಜ್ಯ ಅಸ್ಸಾಂನಲ್ಲಿ ಈ ಪ್ರಮಾಣ 110 ಇದೆ.

ದಕ್ಷಿಣದ ಐದು ರಾಜ್ಯಗಳ ಪೈಕಿ ಕರ್ನಾಟಕದಲ್ಲೇ ತಾಯಂದಿರ ಸಾವಿನ ಪ್ರಮಾಣ ಹೆಚ್ಚಿದೆ. ಐದು ರಾಜ್ಯಗಳ ಒಟ್ಟಾರೆ ಪ್ರಮಾಣ 42 ಇದೆ. ರಾಜ್ಯದಲ್ಲಿ 2020–22ರಲ್ಲಿ 58 ಇದ್ದರೆ, 2021–23ರಲ್ಲಿ ಇದು 68ಕ್ಕೆ ಏರಿದೆ. ಆರೋಗ್ಯ ಇಲಾಖೆಯ ಆಂತರಿಕ ವಿಶ್ಲೇಷಣೆ ಪ್ರಕಾರ, 2024–25ನೇ ಸಾಲಿನಲ್ಲಿ ಎಂಎಂಆರ್ 57ಕ್ಕೆ ಇಳಿದಿದೆ.



ಆಧಾರ: ಆರೋಗ್ಯ ಇಲಾಖೆ, ಎಸ್‌ಆರ್‌ಎಸ್ ವರದಿಗಳು, ವಿಶ್ವ ಆರೋಗ್ಯ ಸಂಸ್ಥೆ

ತಡೆಯುವುದು ಹೇಗೆ?

ಹೆರಿಗೆ ಸಮಯ ಮತ್ತು ನಂತರದಲ್ಲಿ ತಾಯಂದಿರ ಸಾವನ್ನು ತಡೆಯಲು ಏನೇನು ಮಾಡಬಹುದು ಎಂಬುದನ್ನು ಆರೋಗ್ಯ ಇಲಾಖೆ ನೇಮಿಸಿದ್ದ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯು ತನ್ನ ಮಧ್ಯಂತರ ವರದಿಯಲ್ಲಿ ಪಟ್ಟಿ ಮಾಡಿದೆ.

- ಗರ್ಭಾವಸ್ಥೆಯಲ್ಲಿ ಮತ್ತು ಮಗುವಿನ ಜನನದ ಸಮಯದಲ್ಲಿ ಗುಣಮಟ್ಟದ ಮಾತೃತ್ವ ಆರೈಕೆಯನ್ನು ಖಚಿತಪಡಿಸಿಕೊಳ್ಳಬೇಕು
- ಭಾರತೀಯ ಸಾರ್ವಜನಿಕ ಆರೋಗ್ಯ ಮಾನದಂಡಗಳ ಅಡಿಯಲ್ಲಿ ಗುರುತಿಸಲಾದ ನ್ಯೂನತೆಗಳನ್ನು ಸರಿಪಡಿಸಿ ಆರೋಗ್ಯ ಸಂಸ್ಥೆಗಳನ್ನು ಬಲಪಡಿಸಬೇಕು
- ಸೇವಾ ಪೂರೈಕೆದಾರರ ಸಾಮರ್ಥ್ಯ ಹೆಚ್ಚಿಸಬೇಕು
- ಮೇಲ್ವಿಚಾರಣೆ ಮತ್ತು ಆಡಳಿತ ವ್ಯವಸ್ಥೆಯನ್ನು ಸುಧಾರಿಸಬೇಕು

ಪ್ರತಿ ಎರಡು ನಿಮಿಷಕ್ಕೆ ಒಬ್ಬ ಬಾಣಂತಿ ಸಾವು

ಪ್ರಸವ ಪೂರ್ವದಲ್ಲಿ ಮತ್ತು ಪ್ರಸವದ ವೇಳೆ ತಾಯಂದಿರ ಸಾವಿನ ಪ್ರಮಾಣವು ಜಾಗತಿಕ ಮಟ್ಟದಲ್ಲಿಯೂ ಕಳವಳಕಾರಿ ವಿಚಾರವಾಗಿದೆ. 2000 ಮತ್ತು 2023ರ ನಡುವೆ ಎಂಎಂಆರ್ ಶೇ 40ರಷ್ಟು ಕಡಿಮೆ ಆಗಿದೆ. ಆದರೂ, ಜಗತ್ತಿನಲ್ಲಿ ಪ್ರತಿ ಎರಡು ನಿಮಿಷಕ್ಕೆ ಒಬ್ಬ ಬಾಣಂತಿ ಮರಣ ಹೊಂದುತ್ತಿದ್ದಾರೆ. ಹೆರಿಗೆ ವೇಳೆ ಪ್ರತಿ ದಿನ 700ಕ್ಕೂ ಹೆಚ್ಚು ಮಹಿಳೆಯರು (2023ರ ಅಂಕಿಅಂಶ) ಸಾಯುತ್ತಿದ್ದು, ಈ ಸಾವುಗಳನ್ನು ತಡೆಯಬಹುದಿತ್ತು; ಬಾಣಂತಿಯರ ಹೆಚ್ಚು ಸಾವುಗಳು ಕೆಳ ಮತ್ತು ಮಧ್ಯಮ ಆದಾಯದ ರಾಷ್ಟ್ರಗಳಲ್ಲಿ ಸಂಭವಿಸುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ತಿಳಿಸಿದೆ.

ಸಹರಾ ಮರುಭೂಮಿಯ ದಕ್ಷಿಣದಲ್ಲಿರುವ ದೇಶಗಳಲ್ಲಿ ಶೇ 70ರಷ್ಟು ಸಾವುಗಳು ಸಂಭವಿಸುತ್ತಿದ್ದರೆ, ದಕ್ಷಿಣ ಏಷ್ಯಾದಲ್ಲಿ ಶೇ 17ರಷ್ಟು ಸಾವುಗಳು ವರದಿಯಾಗಿವೆ. ಪರಿಣತ ವೈದ್ಯರು ಮತ್ತು ಸೌಲಭ್ಯಗಳನ್ನು ಕಲ್ಪಿಸುವುದರ ಮೂಲಕ ಸಾವುಗಳನ್ನು ತಡೆಯಬಹುದು ಎಂದು ಡಬ್ಲ್ಯುಎಚ್‌ಒ ಅಭಿಪ್ರಾಯಪಟ್ಟಿದೆ. 2000–2023ರ ನಡುವೆ ಪೂರ್ವ ಯುರೋಪ್ ಮತ್ತು ದಕ್ಷಿಣ ಏಷ್ಯಾದಲ್ಲಿ ಎಂಎಂಆರ್‌ನಲ್ಲಿ ಭಾರಿ ಕುಸಿತ ಆಗಿದೆ. ಬಾಣಂತಿಯರ ಸಾವಿಗೆ ಮುಖ್ಯ ಕಾರಣ ವೈದ್ಯಕೀಯ ಸೌಲಭ್ಯದ ಕೊರತೆ ಎಂದು ಡಬ್ಲ್ಯುಎಚ್‌ಒ ಹೇಳಿದೆ.

ರಾಷ್ಟ್ರೀಯ

ಎಸ್‌ಐಆರ್: ಕಾಂಗ್ರೆಸ್ ನಾಯಕರ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಬೆಳವಣಿಗೆಗಳ ಬಗ್ಗೆ ಚರ್ಚಿಸಲು 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ನಾಯಕರ ಸಭೆಯನ್ನು ಕಾಂಗ್ರೆಸ್ ಕರೆದಿದೆ.

ಇದೇ 18ರಂದು ಬೆಳಿಗ್ಗೆ 10.30ಕ್ಕೆ ಪಕ್ಷದ ಪ್ರಧಾನ ಕಚೇರಿ 'ಇಂದಿರಾ ಭವನ'ದಲ್ಲಿ ಆಯೋಜಿಸಿರುವ ಈ ಸಭೆಗೆ, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಘಟಕದ ಅಧ್ಯಕ್ಷರು, ಶಾಸಕಾಂಗ ಪಕ್ಷದ ನಾಯಕರು ಮತ್ತು ರಾಜ್ಯ ಉಸ್ತುವಾರಿಗಳು ಮತ್ತು ಎಐಸಿಸಿ ಕಾರ್ಯದರ್ಶಿಗಳನ್ನು ಆಹ್ವಾನಿಸಲಾಗಿದೆ. ರಾಜ್ಯಗಳ ನಾಯಕರು ಸಭೆಯಲ್ಲಿ ತಮ್ಮ ರಾಜ್ಯಗಳಲ್ಲಿ ನಡೆಯುತ್ತಿರುವ ಪ್ರಕ್ರಿಯೆ ಮತ್ತು ತಮ್ಮ ಉಸ್ತುವಾರಿಯಲ್ಲಿನ ಮೇಲ್ವಿಚಾರಣಾ ಕಾರ್ಯವಿಧಾನ ಕುರಿತು ಕೇಂದ್ರ ನಾಯಕರಿಗೆ ಮಾಹಿತಿ ನೀಡಲಿದ್ದಾರೆ.

ಬಿಹಾರ ಚುನಾವಣೆಯ ನಂತರ ಅಂಡಮಾನ್ ಮತ್ತು ನಿಕೋಬಾರ್, ಛತ್ತೀಸ್‌ಗಢ, ಗೋವಾ, ಗುಜರಾತ್, ಕೇರಳ, ಲಕ್ಷದ್ವೀಪ, ಮಧ್ಯಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದ ಎಸ್‌ಐಆರ್ ಅನ್ನು ಚುನಾವಣಾ ಆಯೋಗ ಆರಂಭಿಸಿದೆ.

ಕೇರಳ: ಬಿಎಲ್‌ಒ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ತಿರುವನಂತಪುರಂ: ಕೇರಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯಕ್ಕೆ ನಿಯೋಜನೆಗೊಂಡಿದ್ದ ಬೂತ್ ಮಟ್ಟದ ಅಧಿಕಾರಿಯೊಬ್ಬರು (ಬಿಎಲ್‌ಒ) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ ಕೆಲಸದ ಒತ್ತಡ ಇತ್ತು ಎಂದು ಹೇಳಲಾಗಿದೆ.

ಶಾಲೆಯೊಂದರಲ್ಲಿ ಕ್ಲರ್ಕ್ ಆಗಿದ್ದ ಅನೀಶ್ ಜಾರ್ಜ್(41) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಕಣ್ಣೂರು ಜಿಲ್ಲೆಯ ಪಯ್ಯಣ್ಣೂರು ಗ್ರಾಮದ ಮನೆಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ.

ಅನೀಶ್ ಎಸ್‌ಐಆರ್ ಸಮೀಕ್ಷೆ ಕಾರ್ಯಕ್ಕೆ ಸಂಬಂಧಿಸಿದಂತೆ ಭಾರಿ ಒತ್ತಡಕ್ಕೆ ಸಿಲುಕಿದ್ದರು ಎಂದು ಸಂಬಂಧಿಕರು ದೂರಿದ್ದಾರೆ.

ಅನೀಶ್ ಆತ್ಮಹತ್ಯೆ ರಾಜಕೀಯ ಸ್ವರೂಪ ಪಡೆದುಕೊಂಡಿದೆ. ಕಾಂಗ್ರೆಸ್ ಮತ್ತು ಸಿಪಿಎಂ ಪಕ್ಷಗಳು ಸ್ಥಳೀಯ ಸಂಸ್ಥೆ ಚುನಾವಣೆ ಮುಗಿಯುವವರೆಗೆ ಎಸ್‌ಐಆರ್ ಪ್ರಕ್ರಿಯೆ ಮುಂದೂಡುವಂತೆ ಆಗ್ರಹ ಮಾಡುತ್ತಿವೆ.

ಚುನಾವಣಾ ಆಯೋಗದ ಅಧಿಕಾರಿಗಳು ಈ ಬಗ್ಗೆ ಸ್ಪಷ್ಟನೆ ನೀಡಿದ್ದು, 'ಎಸ್‌ಐಆರ್‌ಗೆ ನಿಯೋಜಿಸಿರುವ ಬಿಎಲ್‌ಒಗಳನ್ನು ಸ್ಥಳೀಯ ಸಂಸ್ಥೆ ಚುನಾವಣಾ ಕರ್ತವ್ಯದಿಂದ ಹೊರಗಿಡಲಾಗಿದೆ. ಎಸ್‌ಐಆರ್‌ದಿಂದ ಹೆಚ್ಚುವರಿ ಕೆಲಸದ ಒತ್ತಡವಾಗುತ್ತಿಲ್ಲ' ಎಂದು ಅವರು ಪ್ರತಿಪಾದಿಸಿದ್ದಾರೆ.

'ಅನೀಶ್ ಅವರಿಗೆ ಎಲ್ಲರ ಮನೆಗಳ ಬಗ್ಗೆ ಮಾಹಿತಿ ಇರಲಿಲ್ಲ. ಹೀಗಾಗಿ ಕಾಂಗ್ರೆಸ್ ಮತಗಟ್ಟೆ ಏಜೆಂಟ್ ಸಹಕಾರವನ್ನು ಅವರು ಪಡೆಯುತ್ತಿದ್ದರು. ಇದರಿಂದಾಗಿ ಇತರೆ ಪಕ್ಷಗಳ ಕಾರ್ಯಕರ್ತರು ಅವರನ್ನು ಬೆದರಿಸಿದ್ದರು' ಎಂದು ಕಾಂಗ್ರೆಸ್ ಕಾರ್ಯಕರ್ತರು ಆರೋಪಿಸಿದ್ದಾರೆ.

ಬಹಿಷ್ಕಾರ ಇಂದು

ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಸೋಮವಾರ ಕೇರಳದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ಕೆ ಬಹಿಷ್ಕಾರ ಹಾಕಲು ನಿರ್ಧರಿಸಿದ್ದಾರೆ.

ಕಣ್ಣೂರಿನಲ್ಲಿ ಬಿಎಲ್‌ಒವೊಬ್ಬರು ಆತ್ಮಹತ್ಯೆ ಮಾಡಿಕೊಂಡ ಬಳಿಕ ರಾಜ್ಯ ಸರ್ಕಾರಿ ನೌಕರರು ಹಾಗೂ ಶಿಕ್ಷಕರ ಕ್ರಿಯಾ ಮಂಡಳಿ, ಶಿಕ್ಷಕರ ಸಂಘಗಳ ಒಕ್ಕೂಟ, ಕೇರಳ ಎನ್‌ಜಿಗಳ ಒಕ್ಕೂಟವು ಜಂಟಿಯಾಗಿ ಬಹಿಷ್ಕಾರ ಕುರಿತಾಗಿ ಪ್ರಕಟಣೆ ಬಿಡುಗಡೆಗೊಳಿಸಿವೆ.

ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಹಾಗೂ ಎಸ್‌ಐಆರ್‌ನಿಂದ ಬಿಎಲ್‌ಒಗಳ ಮೇಲೆ ವಿಪರೀತ ಒತ್ತಡ ಉಂಟಾಗುತ್ತಿದೆ ಎಂದು ಈ ಸಂಘಟನೆಗಳು ತಿಳಿಸಿವೆ.

> **ನ.15ರ ಒಳಗೆ ಎಲ್ಲ ಮನೆಗಳಿಗೂ ಸಮೀಕ್ಷಾ ಅರ್ಜಿ ವಿತರಿಸುವಂತೆ ಬಿಎಲ್‌ಒಗಳ ಮೇಲೆ ಒತ್ತಡ ಇತ್ತು. ಇದು ಅವರನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು**
> **ಎಂ.ವಿ.ಜಯರಾಜನ್**
> ಸಿಪಿಎಂ ಮುಖಂಡ

> **ಘಟನೆ ಬಗ್ಗೆ ಕಣ್ಣೂರು ಜಿಲ್ಲಾಧಿಕಾರಿಯಿಂದ ವರದಿ ಕೇಳಿದ್ದೇನೆ. ಈವರೆಗೂ ಬಿಎಲ್‌ಒ ಮೇಲೆ ಒತ್ತಡವಿದ್ದ ಮಾಹಿತಿ ಇಲ್ಲ**
> **ರತನ್ ಯು ಕೇಲ್ಕರ್**
> ಕೇರಳ ಮುಖ್ಯ ಚುನಾವಣಾಧಿಕಾರಿ

ಮಾನವೀಯ ಸ್ಪಂದನೆಯ ಶಿಕ್ಷಣಕ್ಕಷ್ಟೇ ಮೌಲ್ಯ



ದಾದಾಪೀರ್ ನವಿಲೇಹಾಳ್

ಅಕ್ಷರಲೋಕದ ಚರಿತ್ರೆಯೇ ಇಲ್ಲದ ಸಮುದಾಯದಲ್ಲಿ ಆಕಸ್ಮಿಕವಾಗಿ ಸಿಕ್ಕ ಅವಕಾಶವೊಂದನ್ನು ಬಳಸಿಕೊಂಡ ಯುವಕನೊಬ್ಬ ಉನ್ನತ ಶಿಕ್ಷಣ ಪಡೆದ. ತಾನು ಪಡೆದ ಶಿಕ್ಷಣ ಅರಿವಾಗಿ, ಅರಿವು ಆಲೋಚನೆಯಾಗಿ ರೂಪುಗೊಳ್ಳುತ್ತಾ ಹೋದಂತೆ ಅವನಿಗೆ ಇತಿಹಾಸ, ಸಂಸ್ಕೃತಿ ಮತ್ತು ವರ್ತಮಾನ ಕುರಿತಂತೆ ಕೆಲವು ಪ್ರಶ್ನೆಗಳು ಹುಟ್ಟತೊಡಗಿದವು. ತನ್ನ ಜನಾಂಗದಲ್ಲಿ ತಾನೇ ಮೊದಲ ಪದವೀಧರನೆಂಬ ಹೆಮ್ಮೆ ಇದ್ದರೂ ಉಳಿದವರು ಯಾಕೆ ಯಾರೂ ಶಾಲೆಯ ಮೆಟ್ಟಿಲು ಹತ್ತಲಾಗಿಲ್ಲ? ತನ್ನ ಸಮುದಾಯ ಯಾಕಿಷ್ಟು ಹಿಂದುಳಿದಿದೆ? ಇದಕ್ಕೆಲ್ಲಾ ಯಾರು ಕಾರಣ ಎಂದು ಯೋಚಿಸತೊಡಗಿದ. ತನ್ನ ಇಡೀ ಜನಾಂಗದಲ್ಲಿ ಮೊಟ್ಟಮೊದಲು ತನಗೆ ಹೀಗೆ ಆಲೋಚಿಸುವುದು ಸಾಧ್ಯವಾಗಿದ್ದು ತಾನು ಪಡೆದ ಶಿಕ್ಷಣದಿಂದಲೇ ಎಂದು ಅರಿವಾಗಿ ಸಂತೋಷಪಟ್ಟ. ತನ್ನಲ್ಲಿ ಹುಟ್ಟುವ ಪ್ರಶ್ನೆಗಳಿಗೆ ತನ್ನ ಸಮುದಾಯದ ಯಾರಿಂದಾದರೂ ಸಮಂಜಸವಾದ ಉತ್ತರ ಸಿಗಬಹುದು ಎಂದು ಅಲೆದಾಡಿದ. ಅವರೆಲ್ಲ ನಿಡುಗಾಲದ ನೋವು ತಿಂದು ಸುಸ್ತಾದವರಂತೆ ಕಂಡರು. ಕೊನೆಗೆ ತಮ್ಮೆಲ್ಲರ ಮುಗಿಯದ ಯಾತನೆಗೆ ತಮ್ಮನ್ನು ಆಳುವ ರಾಜನೇ ಕಾರಣ, ಅವನನ್ನು ಮುಗಿಸದ ಹೊರತು ನಮ್ಮ ಜನರ ವಿಮೋಚನೆ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದ.

ಒಂದು ದಿನ ಖಡ್ಗ ಹಿಡಿದು ಕುದುರೆ ಹತ್ತಿ ಅರಮನೆಯತ್ತ ಧಾವಿಸಿದ. ಅರಮನೆಗೆ ಮೂರೇ ಮೂರು ಮೆಟ್ಟಿಲುಗಳಿದ್ದವು. ಕುದುರೆಯಿಂದ ಇಳಿದವನೇ ಮೆಟ್ಟಿಲು ಹತ್ತಲು ಹೋಗುತ್ತಿದ್ದಂತೆ 'ನಿಲ್ಲು' ಎಂಬ ಧ್ವನಿ ಕೇಳಿ ನಿಂತ. 'ಒಳಗೆ ಹೋಗಬೇಕಾದರೆ ಒಂದೊಂದು ಮೆಟ್ಟಿಲಿಗೂ ನಾನು ಕೇಳಿದ್ದನ್ನು ನೀನು ಕೊಡಬೇಕು' ಎಂದಿತು ಆ ಧ್ವನಿ. ರಾಜನನ್ನು ಕೊಂದು ತನ್ನವರನ್ನು ಉದ್ಧರಿಸಬೇಕೆಂಬ ಹುಮ್ಮಸ್ಸಿನಲ್ಲಿದ್ದ ಯುವಕ 'ಆಗಲಿ' ಎಂದ. ಮೊದಲ ಮೆಟ್ಟಿಲಿಗೆ ಕಣ್ಣುಗಳನ್ನು, ಎರಡನೆಯ ಮೆಟ್ಟಿಲಿಗೆ ನಾಲಿಗೆಯನ್ನು, ಮೂರನೆಯ ಮೆಟ್ಟಿಲಿಗೆ ಹೃದಯವನ್ನು ಆ ಧ್ವನಿ ಕೇಳುತ್ತದೆ. ಯುವಕ ಆ ಧ್ವನಿ ಕೇಳಿದ್ದನ್ನು ಕೊಡುತ್ತಾ ಅರಮನೆಯೊಳಗೆ ಕಾಲಿಡುತ್ತಿದ್ದಂತೆ ಅವನಿಗೆ ಅರಮನೆ ಸುಂದರವಾಗಿ ಕಾಣುತ್ತದೆ. ಅಲ್ಲಿರುವವರೆಲ್ಲರೂ ಎಷ್ಟು ಒಳ್ಳೆಯವರು ಅಂದುಕೊಳ್ಳುತ್ತಾನೆ. ತನ್ನ ಸಮುದಾಯದ ಜನರೊಂದಿಗೆ ತಾನೂ ಹಾಡುತ್ತ ಕುಣಿಯುತ್ತ ಸುಖ ಸಂತೋಷ ಅನುಭವಿಸುತ್ತಿರುವಂತೆ ಭಾಸವಾಗುತ್ತದೆ.

ಆಧುನಿಕ ಶಿಕ್ಷಣ ಅಪಾರ ಅವಕಾಶ, ಅನುಕೂಲಗಳನ್ನು ಒದಗಿಸಿರುವುದು ನಿಜ. ಆದರೆ, ಶಿಕ್ಷಣದ ಮೂಲಕ ದಕ್ಕಿಸಿಕೊಂಡ ಜ್ಞಾನವನ್ನು ವ್ಯಕ್ತಿಗತ ಲೌಕಿಕ ಅಭಿವೃದ್ಧಿಗೆ ಬಳಸಿಕೊಳ್ಳುತ್ತಿರುವುದರಿಂದ ಆ ಜ್ಞಾನ ಮನುಷ್ಯ ಸಮಾಜದ ಆತ್ಯಂತಿಕ ಮೌಲ್ಯಗಳ ಭಾಗವಾಗಿದೆ ಎನಿಸುವುದಿಲ್ಲ. ಸಮಾಜದಲ್ಲಿನ ಬಡತನ, ಹಸಿವು, ನೋವು, ಅಪಮಾನ, ಅಸಹಾಯಕತೆಗಳನ್ನು ನೋಡಲು ಕಣ್ಣುಗಳು, ಪ್ರಶ್ನಿಸಲು ನಾಲಿಗೆ, ಅರಿಯಲು ಹೃದಯ ಬೇಕಾಗಿದೆ. ಈ ಮೂರನ್ನೂ ಕಳೆದುಕೊಂಡು ನೋವನ್ನು ನಲಿವಿನಂತೆಯೂ, ಅಪಮಾನವನ್ನು ಸಮ್ಮಾನದಂತೆಯೂ ಭಾವಿಸುವ ವಿಪರೀತ ಸಂವೇದನೆಗಳ ಆತಂಕವನ್ನು ಡಿಜಿಟಲ್ ಯುಗದಲ್ಲಿ ಕಾಣುತ್ತಿದ್ದೇವೆ. ಕಣ್ಣು, ನಾಲಿಗೆ, ಹೃದಯಗಳನ್ನು ಮರಗಟ್ಟಿಸಿಕೊಂಡ ಸಮಾಜದಲ್ಲಿ ಮೌನ ಬಂಗಾರದಂತೆ ಕಾಣುವ ಬದಲು ಗಂಟಲಿನಿಂದ ಧ್ವನಿಮೂಲವನ್ನೇ ಕಿತ್ತುಕೊಂಡ ಕ್ರೌರ್ಯ ಕಾಣತೊಡಗಿದೆ. ಸಮಯಸಾಧಕ ಜಾಣರ ಅತಿಯಾದ ಮಾತುಗಳು, ಸ್ವರಕ್ಷಣೆಯ ಬಟ್ಟಲಲ್ಲಿ ಅಡಗಿ ಬೆಚ್ಚಗೆ ಕುಳಿತವರ ಅನಗತ್ಯ ಮೌನ ಏಕಕಾಲಕ್ಕೆ ಸಮಾನ ಅಪಾಯಕಾರಿ. ನಾವು ಕಲಿಯುತ್ತಿರುವ ಶಿಕ್ಷಣಕ್ಕೆ ಮಾನವೀಯ ಸ್ಪಂದನೆಯ ಗುಣವಿದ್ದರೆ ಮಾತ್ರ ಅದಕ್ಕೊಂದು ಮೌಲ್ಯ. ಇಲ್ಲದಿದ್ದರೆ ಅದೊಂದು ಕಾಗದದ ತುಣುಕು ಅಷ್ಟೇ.

'ಮಡದಿ ಕಾಯಿಸಿಟ್ಟ ಹಾಲಿನ ಮಡಕೆಯಲ್ಲಿ ಹಲ್ಲಿ ಬಿದ್ದು ಸತ್ತಿದೆ. ಮಡಕೆ ಒಡೆಯುವಂತಿಲ್ಲ, ಮಡದಿಗೆ ಹೊಡೆಯುವಂತಿಲ್ಲ, ಹಾಲು ಕುಡಿಯುವಂತಿಲ್ಲ'. ಇಂತಹ ಪರಿಸ್ಥಿತಿಯಲ್ಲಿ ಕಣ್ಣು, ನಾಲಿಗೆ ಮತ್ತು ಎದೆಮಿಡಿತಗಳನ್ನು ಸದಾ ಎಚ್ಚರದಲ್ಲಿಟ್ಟುಕೊಳ್ಳುವುದು ಹೃದಯವಂತ ಸಮಾಜದ ಲಕ್ಷಣ.

ಗುಂಡಣ್ಣ



ಪದಬಂಧ 6226

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ದರ್ಜಿಯನ್ನು ಹೀಗೂ ಕರೆಯುತ್ತಾರೆ (3)
6.ಹಲ್ಲುಗಳನ್ನು ತೊಳೆಯುವುದು (5)
7.ನಾಗಸ್ವರ ಅಥವಾ ರಾಜ ಸಭೆ (3)
8.ಸಮ್ಮುಖದಲ್ಲೇ ಗೆಳೆಯನಿದ್ದಾನಲ್ಲಾ! (2)
10.ಧಾನ್ಯ ಒಕ್ಕುವ ಸ್ಥಳ (2)
11.ನಾದಿನಿಯ ಧ್ವನಿ! (3)
13.ಅಜಗರದ ಹತ್ತಿರವಿರುವ ಆಡು (2)
14.ಮಗ ಇಲ್ಲಿದ್ದಾನೆ (2)
18.ಈತ ಯೋಜನೆ ಮಾಡುವವನು (3)
19.ಸೂರ್ಯನನ್ನು ಹೀಗೂ ಕರೆಯುತ್ತಾರೆ (5)
20.ವಿದ್ಯೆಯನ್ನು ಕಲಿಸುವಿಕೆ (3)

ಮೇಲಿಂದ ಕೆಳಕ್ಕೆ

1.ಈತ ಚಿನ್ನದ ವ್ಯಾಪಾರಿ (4)
2.ಮರವನ್ನು ಕೊಯ್ಯುವ ಸಾಧನ (4)
3.ದಂಪತಿ ಹರಡುತ್ತಿರುವ ಗಾಳಿ ಸುದ್ದಿ (3)
4.ನಡುವೆ ಮಂತ್ರ ಹಾಕಿ ನೀಡಿದ ಆಹ್ವಾನ (4)
5.ಅಂತರಂಗದ ಒಪ್ಪಿಗೆ (4)
9.ಖನಿಯಲ್ಲಿ ಸಿಕ್ಕಿದುದುದು (3)
10.ಕದಕ್ಕೆ ಒರಗಿಸಿರುವ ಕನ್ನೆ (3)
12.ಆಣೆಯಲ್ಲೇ ಭೋಜನ! (4)
13.ಅವನು ವನದಲ್ಲಿದ್ದಾಗ ಕೀಲುದಸೆ ! (4)
15.ದ್ವಾದಶಿ ನಂತರದ ತಿಥಿ (4)
16.ನಡುವೆ ಕರವನ್ನಿಟ್ಟಿರುವ ಘಟನೆ (4)
17.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)

6225ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಯವ್ಯಯಂಹಬೆ 6.ರಜತ 7.ವಾದಸರಣಿ 9.ಕೆರ 10.ಭಾಗ 11.ಆಕಾಶ 12.ಮಳೆ 13.ತೂತು 15.ಬದಲುಮಾತು 17.ಕನ್ನಡ 18.ಗಿಣ್ಣು 19.ಮಂಗಳೂರು

ಮೇಲಿಂದ ಕೆಳಕ್ಕೆ:
1.ಅನಾಮಿಕೆ 2.ವ್ಯಯುವಾ 4.ಬೆರಣಿ 5.ಅಂತರಂಗ 8.ಸರ್ಪಕಾವಲು 12.ಮಧುಕರಿ 14.ತುಮಕೂರು 15.ಬಡಗಿ 16.ತುರಗ

ಸುಡೊಕು 6610

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5		6		7		3		8
	8		2		4		1	7
7		1		5		4		9
	9		5				7	
1				4				3
	6				8		5	
9		5			6	2		1
				3			8	
6		8	4		2	9		5

6609 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ನವೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ತ್ರಯೋದಶಿ ಆಹೋರಾತ್ರ ನಕ್ಷತ್ರ: ಚಿತ್ತಾ ಗಂ 29-02 ಯೋಗ: ಪ್ರೀತಿ ಗಂ. 7-23 ಕರಣ: ಗರ ಗಂ. 17-59 ತುಲಾ ಮಾಸದ 31 ನೇ ದಿನ. ಮಳೆ ನಕ್ಷತ್ರ : ವಿಶಾಖ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, **ಸೂರ್ಯೋದಯ :** 06-34 **ಸೂರ್ಯಾಸ್ತ :** 05-57, **ಮುಸ್ಲಿಂ ದಿನಾಂಕ :** 25 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ :** 8, 10

ಮೇಷ: ಅನವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನವನ್ನು ತೆಗೆದುಹಾಕಿ. ದೊಡ್ಡ ಸಮಸ್ಯೆಗಳನ್ನು ಯೋಚಿಸಿ ಪರಿಹರಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ. ಆರ್ಥಿಕ ಸಮಸ್ಯೆ ನಿದ್ದೆ ಕೆಡಿಸಲಿದೆ.

ವೃಷಭ: ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ. ಜೀವನಶೈಲಿಯೂ ಬದಲಾಗಲಿದೆ. ಗಣಿತಜ್ಞರಿಗೆ, ಸಂಗೀತಗಾರರಿಗೆ ಪ್ರತಿಭಾ ಪ್ರದರ್ಶನಕ್ಕೆ ಅವಕಾಶಗಳು ದೊರೆಯಲಿವೆ. ದಿನ ಸಂತೋಷವಾಗಿರಲಿದೆ.

ಮಿಥುನ: ಪೂರ್ವನಿಯೋಜಿತ ಕೆಲಸ ಕಾರ್ಯಗಳು ಹಂತ ಹಂತವಾಗಿ ಪೂರ್ಣಗೊಳ್ಳಲಿವೆ. ಖಾದಿ ಉದ್ಯಮದವರಿಗೆ ಸರ್ಕಾರದಿಂದ ಹಲವು ರೀತಿಯ ಸೌಲಭ್ಯಗಳು ದೊರೆಯಲಿವೆ.

ಕರ್ಕಾಟಕ: ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗಿ. ಸರಳ ಜೀವನವನ್ನು ನಡೆಸುವುದರಿಂದಾಗಿ ಶ್ರೀಮಂತಿಕೆ ಉಳಿಸಿಕೊಳ್ಳಬಹುದು. ಬದುಕನ್ನು ಒಂದು ವ್ಯವಸ್ಥೆಗೆ ತರಲು ದಿನದ ಅಲ್ಪ ಸಮಯವನ್ನು ಮೀಸಲಿಡಿ.

ಸಿಂಹ: ಆತ್ಮೀಯರೊಂದಿಗಿಗೆ ವ್ಯವಹಾರಗಳ ಕುರಿತು ಅಥವಾ ವ್ಯವಹಾರದಲ್ಲಿನ ಪಾಲುದಾರಿಕೆಯ ಸಲುವಾಗಿ ಚರ್ಚಿಸಬಹುದು. ಮಾನಸಿಕ ಒತ್ತಡ ಹೆಚ್ಚಿರುವುದರಿಂದ ತಾಂತ್ರಿಕ ತಪ್ಪುಗಳಾಗದಂತೆ ಎಚ್ಚರವಹಿಸಿ.

ಕನ್ಯಾ: ಉದ್ಯೋಗದಲ್ಲಿ ಸಿಗುವಂಥ ವರ್ಗಾವಣೆ ಅವಕಾಶಗಳನ್ನು ಬಿಟ್ಟುಕೊಳ್ಳಬೇಡಿ. ಕುಟುಂಬದ ಸದಸ್ಯರ ಮಾತುಗಳನ್ನು ತಾಳ್ಮೆಯಿಂದ ಕೇಳಿರಿ. ನಿಷ್ಠೆ ಹಾಗೂ ಬುದ್ಧಿವಂತಿಕೆಗೆ ಪ್ರತಿಫಲ ಸಿಗಲಿದೆ.

ತುಲಾ: ಆತ್ಮವಿಶ್ವಾಸವನ್ನು ರೂಢಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಯತ್ತ ಗಮನಹರಿಸಿ. ಕಳೆದು ಹೋಗಿದ್ದ ವಸ್ತುಗಳು ಸತತ ಪ್ರಯತ್ನದಿಂದ ಸಿಕ್ಕಿ ಮನಸ್ಸಿಗೆ ಸಮಾಧಾನವಾಗುವುದು.

ವೃಶ್ಚಿಕ: ಸಣ್ಣ ಮಗುವಿನ ಜತೆಗೆ ದೂರದ ಪ್ರಯಾಣವನ್ನು ಯೋಚಿಸಿದ್ದರೆ ಆದಷ್ಟು ಅದನ್ನು ಬಿಡುವ ಪ್ರಯತ್ನ ಮಾಡಿ. ಕೃಷಿಯಲ್ಲಿ ಶ್ರೇಯಸ್ಸಿಗಾಗಿ ಶ್ರೀ ಕಾಶಿಪುರಾಧೀಶ್ವರಿ ಅನ್ನಪೂರ್ಣೇಶ್ವರಿಯನ್ನು ದರ್ಶಿಸಿ.

ಧನು: ಯುವಕರು ಪೂರ್ಣ ಸಾಮರ್ಥ್ಯವನ್ನು ಬಳಸಿಕೊಂಡು ವಿದ್ಯಾಲಯದ ಕಾರ್ಯಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಡಬೇಕಾಗುತ್ತದೆ. ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಚಂಚಲ ಮನಸ್ಸು ಅಡ್ಡಿಮಾಡುವುದು.

ಮಕರ: ಅಡುಗೆ ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸ, ಬೇಡಿಕೆ, ಲಾಭವಿರುವುದು. ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಆನಂದ ಸಿಗಬಹುದು. ವ್ಯಾಪಾರದಲ್ಲಿ ಮೋಸ ಹೋಗದೆ ಬುದ್ಧಿವಂತಿಕೆ ತೋರಿ.

ಕುಂಭ: ಸಾಮರ್ಥ್ಯವನ್ನಷ್ಟೂ ಬಳಸಿಕೊಂಡು ಕೆಲಸ ಮಾಡುತ್ತಿರುವ ನೀವು ದೇಹಕ್ಕೆ ಸ್ವಲ್ಪ ವಿಶ್ರಾಂತಿಯನ್ನು ಕೊಡುವುದರ ಬಗ್ಗೆ ಯೋಚಿಸಿ. ಪತಿ ಪತ್ನಿಯರಲ್ಲಿ ಅನ್ಯೋನ್ಯತೆ ಹೆಚ್ಚುವುದು.

ಮೀನ: ಮನೋಭಿಲಾಷೆಯನ್ನು ಸಿದ್ಧಿಸಿಕೊಳ್ಳಲಿಕ್ಕಾಗಿ ಇತರರಿಗೆ ಮಾರಕವಾಗುವ ಮಾರ್ಗವನ್ನು ಆರಿಸಿಕೊಳ್ಳಬೇಡಿ. ಚಿಂತಾಕ್ರಾಂತರಾದಾಗ ನಿಮ್ಮ ಸುಖ-ದುಃಖಗಳನ್ನು ಹಂಚಿಕೊಳ್ಳುವ ಮಿತ್ರರನ್ನು ಹೊಂದುವಿರಿ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

	ಬೆಂಗಳೂರು		ಮೈಸೂರು	
100 ಕ್ಕೆ	₹655	100 ಕ್ಕೆ	₹658
12 ಕ್ಕೆ	₹90		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹450-715
ದ್ವಿತಳಿ (ಬಿ.ವಿ)	₹622-805

ಎಚ್‌–1ಬಿ ವೀಸಾ ಸಮಸ್ಯೆ ತಾತ್ಕಾಲಿಕ: ನಾಯ್ಡು



ವಿಶಾಖಪಟ್ಟಣ (ಪಿಟಿಐ): ಅಮೆರಿಕದ ಎಚ್‌–1ಬಿ ವೀಸಾ ನಿಯಮಗಳನ್ನು ಈಚೆಗೆ ಬಿಗಿಗೊಳಿಸಿರುವುದು ಭಾರತದ ಪಾಲಿಗೆ ತಾತ್ಕಾಲಿಕ ಹಿನ್ನಡೆ ಮಾತ್ರ ಎಂದು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ಭಾರತದ ಐ.ಟಿ. ತಂತ್ರಜ್ಞರು ಕಂಪನಿಗಳಿಗೆ ಕಡಿಮೆ ವೆಚ್ಚಕ್ಕೆ ಕೆಲಸ ಮಾಡಿಕೊಡುವ ಕಾರಣದಿಂದ, ಅವರು ಎಚ್‌–1ಬಿ ವೀಸಾ ಪಡೆದು ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ತೆರಳುವ ದಿನಗಳು ಮತ್ತೆ ಬರುತ್ತವೆ ಎಂದು ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ತಂತ್ರಜ್ಞಾನ ವಲಯದಲ್ಲಿನ ಅವಕಾಶಗಳನ್ನು ಗುರುತಿಸಿ, ಹೈದರಾಬಾದ್ ನಗರವನ್ನು ತಂತ್ರಜ್ಞಾನದ ಕೇಂದ್ರವನ್ನಾಗಿ ಬೆಳೆಸಿದ ಶ್ರೇಯ ನಾಯ್ಡು ಅವರದ್ದಾಗಿದೆ. ಭಾರತದ ತಂತ್ರಜ್ಞರು ಹೆಚ್ಚಿನ ಕೌಶಲವನ್ನು ಹೊಂದಿದ್ದಾರೆ. ಕಡಿಮೆ ವೆಚ್ಚಕ್ಕೆ ಕೆಲಸ ಮಾಡಿಕೊಡುತ್ತಾರೆ. ಹೀಗಾಗಿ ಅವರಿಗೆ ಪ್ರಪಂಚದ ಎಲ್ಲೆಡೆ ಹೆಚ್ಚು ಬೇಡಿಕೆ ಇದೆ ಎಂದು ನಾಯ್ಡು ಹೇಳಿದ್ದಾರೆ.

ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳಿಂದ ಐ.ಟಿ. ತಂತ್ರಜ್ಞರು ಎಚ್‌–1ಬಿ ವೀಸಾ ಪಡೆದು ಅಮೆರಿಕಕ್ಕೆ ಹೋಗುವ ಪ್ರಮಾಣ ಹೆಚ್ಚಿದೆ.

'ವೆಚ್ಚವು ಬಹಳ ಮುಖ್ಯವಾದುದು... ಭಾರತದ ಟೆಕಿಗಳು ಕಡಿಮೆ ವೆಚ್ಚದ ಸೇವೆಗಳನ್ನು ಒದಗಿಸುತ್ತಿದ್ದಾರೆ. ಅಮೆರಿಕನ್ನರು ನಮ್ಮ ಮೇಲೆ ಅವಲಂಬಿತರಾಗಿರುತ್ತಾರೆ' ಎಂದು ಹೇಳಿದ್ದಾರೆ. [illegible]

₹2.05 ಲಕ್ಷ ಕೋಟಿ ಎಂ–ಕ್ಯಾಪ್ ಹೆಚ್ಚಳ

ನವದೆಹಲಿ (ಪಿಟಿಐ): ಕಳೆದ ವಾರದ ಷೇರುಪೇಟೆ ವಹಿವಾಟಿನಲ್ಲಿ ಸೂಚ್ಯಂಕಗಳ ಏರಿಕೆಯಿಂದ ದೇಶದ ಪ್ರಮುಖ 10 ಕಂಪನಿಗಳ ಪೈಕಿ 8 ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ₹2.05 ಲಕ್ಷ ಕೋಟಿ ಹೆಚ್ಚಳ ಆಗಿದೆ.

ಭಾರ್ತಿ ಏರ್‌ಟೆಲ್ ಮಾರುಕಟ್ಟೆ ಮೌಲ್ಯಕ್ಕೆ ₹55,652 ಕೋಟಿ ಸೇರ್ಪಡೆ ಆಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹11.96 ಲಕ್ಷ ಕೋಟಿಗೆ ಏರಿಕೆಯಾಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ₹54,941 ಕೋಟಿ, ಟಿಸಿಎಸ್ ₹40,757 ಕೋಟಿ, ಐಸಿಐಸಿಐ ಬ್ಯಾಂಕ್ ₹20,834 ಕೋಟಿ, ಎಸ್‌ಬಿಐ ₹10,522 ಕೋಟಿ, ಇನ್ಫೊಸಿಸ್ ₹10,448 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹9,149 ಕೋಟಿ, ಹಿಂದುಸ್ತಾನ್ ಯುನಿಲಿವರ್ ₹2,878 ಕೋಟಿಯಷ್ಟು ಮಾರುಕಟ್ಟೆ ಮೌಲ್ಯ ಹೆಚ್ಚಿಸಿಕೊಂಡಿವೆ. ಬಜಾಜ್ ಫೈನಾನ್ಸ್‌ನ ₹30,147 ಕೋಟಿ, ಎಲ್‌ಐಸಿ ಎಂ–ಕ್ಯಾಪ್ ₹9,266 ಕೋಟಿಯಷ್ಟು ಇಳಿಕೆ ಆಗಿದೆ.

ಕಾರು ಖರೀದಿಗೆ ಎಂ.ಎಫ್ ನೆರವು

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಎಸ್‌ಐಪಿ ಮೂಲಕ ಕಾರು ಖರೀದಿಸಲು ಯೋಜನೆ ರೂಪಿಸುವುದು ಹೇಗೆ?

ಹೂಡಿಕೆ ಅವಧಿ	ಮಾಸಿಕ ಎಸ್‌ಐಪಿ	ಒಟ್ಟು ಹೂಡಿಕೆ	ಹೂಡಿಕೆ ಮೇಲಿನ ಗಳಿಕೆ (ವಾರ್ಷಿಕ ಶೇ 12ರ ಗಳಿಕೆಯಲ್ಲಿ)	ಹೂಡಿಕೆ + ಗಳಿಕೆ
7 ವರ್ಷ	₹10 ಸಾವಿರ	₹8.4 ಲಕ್ಷ	₹3.6 ಲಕ್ಷ	₹12 ಲಕ್ಷ
5 ವರ್ಷ	₹15 ಸಾವಿರ	₹9 ಲಕ್ಷ	₹3 ಲಕ್ಷ	₹12 ಲಕ್ಷ
3 ವರ್ಷ	₹28 ಸಾವಿರ	₹10.08 ಲಕ್ಷ	₹1.92 ಲಕ್ಷ	₹12 ಲಕ್ಷ

ಗಮನಿಸಿ: ಇದು ಮ್ಯೂಚುವಲ್ ಫಂಡ್ ಹೂಡಿಕೆ ಶಿಫಾರಸು ಅಲ್ಲ, ಹಣಕಾಸು ಶಿಕ್ಷಣಕ್ಕಾಗಿ ನೀಡಿರುವ ಮಾಹಿತಿ

ಸ್ವಂತ ಕಾರು ಖರೀದಿಸಬೇಕು ಎನ್ನುವುದು ಪ್ರತಿ ವ್ಯಕ್ತಿಯ ಕನಸು. ಆದರೆ ಅನೇಕರು ಸಾಲದ ಮೂಲಕ ನೆಚ್ಚಿನ ಕಾರು ಖರೀದಿಗೆ ಮುಂದಾಗುತ್ತಾರೆ. ಸಾಲ ಎಂದಾಕ್ಷಣ ಕೆಲವು ವರ್ಷ ಸಾಲದ ಇಎಂಐ (ಮಾಸಿಕ ಕಂತು) ಕಟ್ಟುವುದು, ಸಾವಿರಾರು ರೂಪಾಯಿ ಬಡ್ಡಿ ಪಾವತಿಸುವುದು ಇದ್ದಿದ್ದೇ. ಎಷ್ಟೋ ಸಲ, ಸಾಲದ ಭಾರಕ್ಕೆ ಕಾರು ಕೊಂಡ ನೆಮ್ಮದಿಯೇ ಇಲ್ಲವಾಗುತ್ತದೆ. ಹಾಗಾದರೆ ಸಾಲ ಮಾಡದೆ ಕಾರು ಕೊಳ್ಳಬಹುದಾ? ಹೌದು, ಸಾಲದ ಹೊರೆ ಇಲ್ಲದೆ ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆ ಮೂಲಕ ಕಾರು ಖರೀದಿಸಬಹುದು. ಇಲ್ಲಿ ಸಾಲದ ಭಾರವಿಲ್ಲ, ಇಎಂಐ ತಲೆಬಿಸಿಯಿಲ್ಲ, ಪಕ್ಕಾ ಹೂಡಿಕೆ ಯೋಜನೆ ಮಾಡಿದರೆ ಆಯಿತು. ನೆಚ್ಚಿನ ಕಾರು ನಿಮ್ಮದಾಗುತ್ತದೆ.

₹10 ಲಕ್ಷ ಮೌಲ್ಯದ ಕಾರು ಸಾಲಕ್ಕೆ ಬಡ್ಡಿ ಹೊರೆ ಎಷ್ಟು?: ಕಾರಿಗಾಗಿ ಸಾಲ ತೆಗೆದು ಕೊಂಡಾಗ ಏನಾಗುತ್ತದೆ ಎಂದು ಒಮ್ಮೆ ನೋಡೋಣ. ಉದಾಹರಣೆಗೆ, ₹12 ಲಕ್ಷ ಮೌಲ್ಯದ ಕಾರು ಖರೀದಿಸಲು ₹2 ಲಕ್ಷ ಡೌನ್ ಪೇಮೆಂಟ್ ಮಾಡಿದ್ದೀರಿ ಎಂದುಕೊಳ್ಳೋಣ. ಇನ್ನುಳಿದ ₹10 ಲಕ್ಷವನ್ನು 5 ವರ್ಷಕ್ಕೆ ಶೇ 9ರ ಬಡ್ಡಿ ದರದಲ್ಲಿ ಸಾಲವಾಗಿ ಪಡೆದುಕೊಳ್ಳುತ್ತೀರಿ ಎಂದು ಭಾವಿಸೋಣ. ಈ ಲೆಕ್ಕಾಚಾರದಂತೆ ಪ್ರತಿ ತಿಂಗಳು ಸುಮಾರು ₹20,760 ಇಎಂಐ ಪಾವತಿಸಬೇಕಾಗುತ್ತದೆ. 5 ವರ್ಷದಲ್ಲಿ ₹10 ಲಕ್ಷ ಅಸಲಿನ ಮೊತ್ತದ ಜೊತೆಗೆ ₹2.45 ಲಕ್ಷ ಬಡ್ಡಿ ಸೇರಿ ಒಟ್ಟು ₹12.45 ಲಕ್ಷ ಪಾವತಿಸಬೇಕಾಗುತ್ತದೆ. ಕಾರು ಮೌಲ್ಯ ವೃದ್ಧಿಯಾಗುವ ಆಸ್ತಿಯಲ್ಲದ ಕಾರಣ ಕಾರಿಗಾಗಿ ಹೆಚ್ಚು ಸಾಲ ಮಾಡಿ ಬಡ್ಡಿ ಕಟ್ಟುವುದು ಸರಿಯಾದ ಹಣಕಾಸು ತೀರ್ಮಾನವಲ್ಲ.

ಎಸ್‌ಐಪಿ ಮೂಲಕ ಕಾರು ಖರೀದಿ ಹೇಗೆ?: ಈಗ ಕಾರು ಖರೀದಿಸಲು ₹12 ಲಕ್ಷ ಬೇಕಾಗಿದ್ದು ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆ ಮೂಲಕ ಅದನ್ನು ಪೇರಿಸುವ ಗುರಿ ಹೊಂದಿದ್ದೀರಿ ಎಂದುಕೊಳ್ಳೋಣ. ಮ್ಯೂಚು ವಲ್ ಫಂಡ್‌ನಲ್ಲಿ ವಾರ್ಷಿಕ ಸರಾಸರಿ ಶೇ 12ರಷ್ಟು ಗಳಿಕೆ ಸಿಗುತ್ತದೆ ಎಂದು ಭಾವಿಸೋಣ. 7 ವರ್ಷಗಳಲ್ಲಿ ಗುರಿ ಮುಟ್ಟಲು ಎಷ್ಟು ಮೊತ್ತ ಹೂಡಬೇಕು, 5 ವರ್ಷಗಳಲ್ಲೇ ಕಾರು ಖರೀದಿಸಬೇಕಾದರೆ ಅದಕ್ಕೆ ಹೇಗೆ ಯೋಜನೆ ಮಾಡಬೇಕು, ಇಲ್ಲ ಮೂರೇ ವರ್ಷಗಳಲ್ಲಿ ಕಾರು ಕೊಳ್ಳಬೇಕಾದರೆ ಅದಕ್ಕೆ ನಿಮ್ಮ ಎಸ್‌ಐಪಿ ಹೂಡಿಕೆ ಯೋಜನೆ ಹೇಗಿರಬೇಕು ಎಂಬುದು ತಿಳಿಯಬೇಕಿದೆ.

7 ವರ್ಷಗಳ ನಂತರ ₹12 ಲಕ್ಷ ಮೌಲ್ಯದ ಕಾರು ಖರೀದಿಸಬೇಕಾದರೆ ಮಾಸಿಕ ₹10 ಸಾವಿರ ಎಸ್‌ಐಪಿ ಮಾಡಬೇಕಾಗುತ್ತದೆ. 7 ವರ್ಷಗಳಲ್ಲಿ ಒಟ್ಟು ಹೂಡಿಕೆ ಮೊತ್ತ ₹8.4 ಲಕ್ಷ ಆಗಿರುತ್ತದೆ. ನಿಮ್ಮ ಹೂಡಿಕೆ ಮೇಲೆ ವಾರ್ಷಿಕ ಸರಾಸರಿ ಶೇ 12ರ ಗಳಿಕೆ ಸಿಕ್ಕರೆ ₹3.6 ಲಕ್ಷ ಗಳಿಕೆ ನಿಮಗೆ ಲಭಿಸುತ್ತದೆ. ಹೂಡಿಕೆ ಮೊತ್ತ ಮತ್ತು ಗಳಿಕೆ ಮೊತ್ತ ಸೇರಿದರೆ ₹12 ಲಕ್ಷ ನಿಮ್ಮ ಬಳಿ ಇರುತ್ತದೆ. ಮುಂದಿನ 5 ವರ್ಷದಲ್ಲಿ ಕಾರು ಖರೀದಿಸಬೇಕು ಎಂಬ ಯೋಜನೆ ನಿಮ್ಮದಾಗಿದ್ದರೆ ₹12 ಲಕ್ಷ ಪೇರಿಸಲು ಪ್ರತಿ ತಿಂಗಳು ₹15 ಸಾವಿರ ಎಸ್‌ಐಪಿ ಮಾಡಬೇಕಾಗುತ್ತದೆ. 5 ವರ್ಷಗಳಲ್ಲಿ ಒಟ್ಟು ₹9 ಲಕ್ಷ ಹೂಡಿಕೆಯಾಗಿರುತ್ತದೆ. ಶೇ 12ರ ಲೆಕ್ಕಾಚಾರದಲ್ಲಿ ₹3 ಲಕ್ಷ ಗಳಿಕೆ ಲಭಿಸುತ್ತದೆ. ಎರಡನ್ನೂ ಒಟ್ಟುಗೂಡಿಸಿದಾಗ ನಿಮ್ಮ ಬಳಿ ₹12 ಲಕ್ಷ ಇರುತ್ತದೆ. ಮೂರೇ ವರ್ಷದಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆ ಮಾಡಿ ₹12 ಲಕ್ಷ ಮೌಲ್ಯದ ಕಾರು ಖರೀದಿಸುವ ಯೋಜನೆ ಇದೆ ಎಂದಾದಲ್ಲಿ ಮಾಸಿಕ ₹28 ಸಾವಿರ ಹೂಡಿಕೆ ಮಾಡಬೇಕಾಗುತ್ತದೆ. ಮಾಸಿಕ ₹28 ಸಾವಿರ ಎಸ್‌ಐಪಿ ಮಾಡಿದಾಗ 3 ವರ್ಷಗಳಲ್ಲಿ ಒಟ್ಟು ₹10.08 ಲಕ್ಷ ಹೂಡಿಕೆಯಾಗಿರುತ್ತದೆ. ₹1.92 ಲಕ್ಷ ಗಳಿಕೆ ಸೇರಿ ಒಟ್ಟು ₹12 ಲಕ್ಷ ಲಭಿಸುತ್ತದೆ. (ಪಟ್ಟಿ ಗಮನಿಸಿ)

ನೀವು ಹೇಗೆ ಆಲೋಚನೆ ಮಾಡಬಹುದು?: ಎಷ್ಟು ವರ್ಷಗಳಲ್ಲಿ ಕಾರು ಖರೀದಿಸಬೇಕು ಎನ್ನುವ ಬಗ್ಗೆ ಮೊದಲು ತೀರ್ಮಾನ ಮಾಡಿ. 3 ವರ್ಷವೋ 5 ಅಥವಾ 7 ವರ್ಷವೋ ಎಂಬುದನ್ನು ನಿರ್ಧರಿಸಿ. ನಿಮ್ಮ ಗುರಿಯ ಅವಧಿಗೆ ತಕ್ಕಂತೆ ಎಸ್‌ಐಪಿ ಮೊತ್ತ ನಿಗದಿ ಮಾಡಿ. ಎಸ್‌ಐಪಿ ಮೊತ್ತವು ಅದಾಗಿಯೇ ಕಡಿತವಾಗುವಂತೆ ಮಾಡುವುದನ್ನು ಮರೆಯಬೇಡಿ. ಎಸ್‌ಐಪಿ ಮೊತ್ತವನ್ನು ಪ್ರತಿ ವರ್ಷ ಶೇ 10ರಷ್ಟು ಹೆಚ್ಚಿಸಿ, ಹೂಡಿಕೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಿ. ಹೀಗೆ ಮಾಡಿದಾಗ ಮ್ಯೂಚುವಲ್ ಫಂಡ್ ಹೂಡಿಕೆ ಮೂಲಕ ಕನಸಿನ ಕಾರು ಖರೀದಿ ಸಾಧ್ಯ. ನೆನಪಿಡಿ, ಮಾರುಕಟ್ಟೆಯಲ್ಲಿ ತಾತ್ಕಾಲಿಕ ಏರಿಳಿತಗಳಿದ್ದರೂ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳು ಶೇ 12ರಷ್ಟು ಗಳಿಕೆ ತಂದುಕೊಟ್ಟಿವೆ ಎನ್ನುವುದನ್ನು ಅಂಕಿ-ಅಂಶಗಳು ಹೇಳುತ್ತವೆ.

ದೊಡ್ಡ ಡೌನ್ ಪೇಮೆಂಟ್ ಮೂಲಕ ಕಾರು ಖರೀದಿಸಬಹುದೇ?: ನೀವು ಮುಂದಿನ 5 ವರ್ಷಗಳಲ್ಲಿ ಕಾರು ಖರೀದಿಸಬೇಕು ಎನ್ನುವ ಗುರಿ ಹೊಂದಿದ್ದೀರಿ ಎಂದುಕೊಳ್ಳೋಣ. ಆದರೆ ನಿಮಗೆ ಹೂಡಿಕೆ ಆರಂಭಿಸಿದ ಮೂರು ವರ್ಷಗಳಲ್ಲೇ ಕಾರು ಕೊಳ್ಳಬೇಕು ಎಂದು ಅನಿಸುತ್ತದೆ. ಹೀಗಿದ್ದಾಗ ನಿಮ್ಮ ಎಸ್‌ಐಪಿಯಲ್ಲಿರುವ ದೊಡ್ಡ ಮೊತ್ತವನ್ನು ಕಾರು ಖರೀದಿಗೆ ಡೌನ್ ಪೇಮೆಂಟ್ ರೂಪದಲ್ಲಿ ಬಳಸಿ, ಬಾಕಿ ಹಣಕ್ಕಾಗಿ ಸಣ್ಣ ಸಾಲ ಪಡೆದುಕೊಳ್ಳಬಹುದು. ಪೂರ್ತಿ ಸಾಲ ತೆಗೆದುಕೊಂಡು ಜಾಸ್ತಿ ಬಡ್ಡಿ ಕಟ್ಟುವ ಬದಲು ಇದು ಜಾಣ ನಡೆ.

ಕಿವಿಮಾತು: ಕಾರು ಮೌಲ್ಯ ಕಳೆದುಕೊಳ್ಳುವ ವಸ್ತುವಾಗಿರುವ ಕಾರಣ ಸಾಲ ಮಾಡಿ ಅದನ್ನು ಕೊಳ್ಳುವ ಮಾರ್ಗ ಸೂಕ್ತವಲ್ಲ. ಸಾಲ ಮಾಡದೆ ಕಾರು ಖರೀದಿಸಲು ಎಸ್‌ಐಪಿ ಒಂದು ಒಳ್ಳೆಯ ಮಾರ್ಗ. ಒಂದೊಮ್ಮೆ ಸಾಲ ಮಾಡಿಯೇ ಕಾರು ತೆಗೆದುಕೊಳ್ಳಬೇಕಾದರೆ ಒಂದು ದೊಡ್ಡ ಮೊತ್ತದ ಡೌನ್ ಪೇಮೆಂಟ್ ಜೊತೆಗೆ ಸಣ್ಣ ಮೊತ್ತದ ಸಾಲದ ಮೂಲಕ ಅದನ್ನು ಪೂರೈಸಿಕೊಳ್ಳುವುದು ಒಳಿತು.

ಎ.ಐ. ಬಳಕೆ ಹೆಚ್ಚಿದರೂ ಹೂಡಿಕೆಗೆ ಹಿಂದೇಟು

ಇ.ವೈ.–ಸಿಐಐ ವರದಿಯಲ್ಲಿ ಉಲ್ಲೇಖ ● 200 ಕಂಪನಿ, ಸಂಸ್ಥೆಗಳ ಸಮೀಕ್ಷೆ



ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಬಳಕೆ ಮಾಡುವ ಹಂತವನ್ನು ಭಾರತದ ಶೇಕಡ 47ರಷ್ಟು ಕಂಪನಿಗಳು ದಾಟಿದ್ದು, 'ಜನರೇಟಿವ್ ಎ.ಐ.' ತಂತ್ರಜ್ಞಾನವನ್ನು ಅವು ಒಂದಲ್ಲ ಒಂದು ಹಂತದಲ್ಲಿ ಸಕ್ರಿಯವಾಗಿ ಬಳಕೆ ಮಾಡುತ್ತಿವೆ ಎಂದು ಇ.ವೈ.–ಸಿಐಐ ಸಿದ್ಧಪಡಿಸಿದ ವರದಿಯೊಂದು ಹೇಳಿದೆ.

ಎ.ಐ. ತಂತ್ರಜ್ಞಾನದ ಬಗ್ಗೆ ಬಹಳಷ್ಟು ಭರವಸೆ ಇದೆಯಾದರೂ ಕಂಪನಿಗಳು ಅದರ ಮೇಲೆ ಮಾಡುತ್ತಿರುವ ಹೂಡಿಕೆಯು ಹೆಚ್ಚಾಗಿಲ್ಲ. ಶೇಕಡ 95ಕ್ಕಿಂತ ಹೆಚ್ಚು ಕಂಪನಿಗಳು ಎ.ಐ ಹಾಗೂ ಮೆಷಿನ್ ಲರ್ನಿಂಗ್ (ಎಂ.ಎಲ್) ಮೇಲಿನ ವೆಚ್ಚಗಳನ್ನು ತಮ್ಮ ಒಟ್ಟು ಐ.ಟಿ. ವೆಚ್ಚದ ಶೇಕಡ 20ಕ್ಕಿಂತ ಕಡಿಮೆ ಮಟ್ಟದಲ್ಲಿ ಇರಿಸಿಕೊಂಡಿವೆ.

'ಶೇ 23ರಷ್ಟು ಕಂಪನಿಗಳು ಜನರೇಟಿವ್ ಎ.ಐ. ತಂತ್ರಜ್ಞಾನವನ್ನು ಪ್ರಾಯೋಗಿಕ ಹಂತದಲ್ಲಿ ಬಳಕೆ ಮಾಡುತ್ತಿವೆ. ಶೇ 47ರಷ್ಟು ಕಂಪನಿಗಳು ಇದನ್ನು ಪ್ರಾಯೋಗಿಕ ಹಂತ ದಾಟಿ ಸಕ್ರಿಯವಾಗಿ ಬಳಕೆ ಮಾಡುತ್ತಿವೆ... ಜನರೇಟಿವ್ ಎ.ಐ. ತಂತ್ರಜ್ಞಾನವು ಕೆಲಸಗಳ ಮೇಲೆ ಗಣನೀಯ ಪ್ರಮಾಣದಲ್ಲಿ ಪರಿಣಾಮ ಉಂಟುಮಾಡಲಿದೆ ಎಂದು ಉದ್ಯಮ ವಲಯದ ಶೇ 73ರಷ್ಟು ನಾಯಕರು ಭಾವಿಸಿದ್ದಾರೆ. ಶೇ 63ರಷ್ಟು ಮಂದಿ ಈ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಿದ್ಧವಿರುವುದಾಗಿ ಹೇಳುತ್ತಿದ್ದಾರೆ' ಎಂದು ವರದಿಯು ವಿವರಿಸಿದೆ.

ದೇಶದ 20 ಕೈಗಾರಿಕಾ ವಲಯಗಳ 200 ಕಂಪನಿಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಸರ್ಕಾರಿ ಸಂಸ್ಥೆಗಳು, ಸರ್ಕಾರಿ ಉದ್ದಿಮೆಗಳು, ನವೋದ್ಯಮಗಳು, ಜಾಗತಿಕ ಸಾಮರ್ಥ್ಯ ಕೇಂದ್ರಗಳು (ಜಿಸಿಸಿ), ಬಹುರಾಷ್ಟ್ರೀಯ ಕಂಪನಿಗಳ ಭಾರತದ ಶಾಖೆಗಳನ್ನು ಸಮೀಕ್ಷೆ ಭಾಗವಾಗಿ ಸಂಪರ್ಕಿಸಲಾಗಿದೆ.

ಎ.ಐ. ತಂತ್ರಜ್ಞಾನದ ಸಾಮರ್ಥ್ಯದ ಬಗ್ಗೆ ಬಹಳಷ್ಟು ವಿಶ್ವಾಸ ಇದ್ದರೂ, ಬಹುತೇಕ ಕಂಪನಿಗಳು ಎ.ಐ. ಆಧಾರಿತ ಪರಿವರ್ತನೆಯ ಮೇಲೆ ದೊಡ್ಡ ಮಟ್ಟದ ಹೂಡಿಕೆ ಮಾಡುವಲ್ಲಿ ಎಚ್ಚರಿಕೆಯ ಹೆಜ್ಜೆ ಇರಿಸುತ್ತಿವೆ.

'ಕಂಪನಿಗಳು, ಸಂಸ್ಥೆಗಳು ಎ.ಐ. ತಂತ್ರಜ್ಞಾನದ ಯಶಸ್ಸನ್ನು ವೆಚ್ಚ ಕಡಿತ ಮತ್ತು ಉತ್ಪಾದಕತೆಯ ಆಧಾರದಲ್ಲಿ ಮಾತ್ರವೇ ಅಳೆಯುತ್ತಿಲ್ಲ. ಅವು ಸಮಯದ ಉಳಿತಾಯ, ದಕ್ಷತೆಯಲ್ಲಿ ಹೆಚ್ಚಳ, ವಹಿವಾಟಿನಲ್ಲಿ ಆದ ಏರಿಕೆಯಂತಹ ಮಾನದಂಡಗಳನ್ನು ಆಧರಿಸಿಯೂ ಎ.ಐ. ಯಶಸ್ಸನ್ನು ಅಂದಾಜು ಮಾಡುತ್ತಿವೆ' ಎಂದು ತಿಳಿಸಲಾಗಿದೆ.


ಪ್ರತಿಭಟನೆ

ಎಎಫ್‌ಪಿ ಚಿತ್ರ



ಇಗ್ಲೇಷಿಯಾ ಕ್ರಿಸ್ಟೊ ಧಾರ್ಮಿಕ ಗುಂಪಿನ ಸದಸ್ಯರು ಫಿಲಿಪ್ಪೀನ್ಸ್ ರಾಜಧಾನಿ ಮನಿಲಾದಲ್ಲಿ ಭಾನುವಾರ ಭ್ರಷ್ಟಾಚಾರ ವಿರೋಧಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು

ಷೇರುಪೇಟೆ ಮೇಲೆ ಪಿಎಂಐ ಪರಿಣಾಮ



ನವದೆಹಲಿ (ಪಿಟಿಐ): ದೇಶದ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ (ಪಿಎಂಐ) ದತ್ತಾಂಶ, ಅಮೆರಿಕದ ಫೆಡರಲ್ ರಿಸರ್ವ್ ಸಭೆಯ ನಿರ್ಧಾರ ಮತ್ತು ಭಾರತ–ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ಕುರಿತಾದ ಮಾತುಕತೆಯು ಈ ವಾರ ದೇಶದ ಷೇರುಪೇಟೆ ವಹಿವಾಟಿನ ಮೇಲೆ ಪರಿಣಾಮ ಬೀರುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರ ನಡೆ ಕೂಡ ವಹಿವಾಟಿನ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

ಕಳೆದ ವಾರದ ಷೇರುಪೇಟೆ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,346 ಅಂಶ (ಶೇ 1.62) ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 417 ಅಂಶ (ಶೇ 1.64) ಏರಿಕೆ ಕಂಡಿವೆ.

'ಕಳೆದ ವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ದಾಖಲಿಸಿವೆ. ಅಮೆರಿಕ ಸರ್ಕಾರ ಆಡಳಿತಾತ್ಮಕ ವೆಚ್ಚಕ್ಕೆ ಅನುಮೋದನೆ ನೀಡಿದ್ದು, ಅಲ್ಲಿ ಉಂಟಾಗಿದ್ದ ಆಡಳಿತ ಬಿಕ್ಕಟ್ಟು ಅಂತ್ಯಗೊಂಡಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ಹೆಚ್ಚಿನ ಗಳಿಕೆ ಮತ್ತು ಹಣದುಬ್ಬರ ಇಳಿಕೆಯು ಸೂಚ್ಯಂಕಗಳ ಏರಿಕೆಗೆ ನೆರವಾದವು' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಸಾಫ್ಟ್‌ವೇರ್ ಉದ್ಯೋಗಿಗೆ ₹31.83 ಕೋಟಿ ವಂಚನೆ

ಒಂದನೇ ಪುಟದಿಂದ...

'ಮುಂಬೈನ ಅಂಧೇರಿಯ ಡಿಎಚ್‌ಎಲ್ ಕೇಂದ್ರದಿಂದ ನಿಮ್ಮ ಹೆಸರಿಗೆ ಬಂದಿರುವ ಪಾರ್ಸೆಲ್‌ನಲ್ಲಿ ಮೂರು ಕ್ರೆಡಿಟ್ ಕಾರ್ಡ್, ನಾಲ್ಕು ಪಾಸ್‌ಪೋರ್ಟ್ ಮತ್ತು ಎಂಡಿಎಂಎ ಡ್ರಗ್ಸ್ ಇದೆ' ಎಂದು ಕರೆ ಮಾಡಿದ ವ್ಯಕ್ತಿ ಹೇಳಿದ್ದಾನೆ. ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವ ಕಾರಣ ತನಗೂ ಪಾರ್ಸೆಲ್‌ಗೂ ಸಂಬಂಧವಿಲ್ಲ ಎಂದು ಸಂತ್ರಸ್ತೆ ಹೇಳಿದ್ದಾರೆ. ಪಾರ್ಸೆಲ್ ಮೇಲೆ ನಿಮ್ಮ ಮೊಬೈಲ್ ಸಂಖ್ಯೆ ಇರುವ ಕಾರಣ ಇದು ಸೈಬರ್ ಅಪರಾಧವಾಗಿದ್ದು, ಸೈಬರ್ ಸೆಲ್‌ಗೆ ವರದಿ ಮಾಡಿಕೊಳ್ಳುವಂತೆ ಸಲಹೆ ನೀಡಿ, ಮತ್ತೊಬ್ಬ ವ್ಯಕ್ತಿಗೆ ಕರೆಯನ್ನು ವರ್ಗಾಯಿಸಿದ್ದಾನೆ. ಆ ವ್ಯಕ್ತಿ ತಾನು ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದರು.


ಸಂತ್ರಸ್ತೆ ಮೇಲೆ ವಂಚಕರು ನಿಗಾ ಇಟ್ಟಿದ್ದರಿಂದ ಸ್ಥಳೀಯ ಪೊಲೀಸರು ಹಾಗೂ ಕಾನೂನು ಸಹಾಯ ಪಡೆದುಕೊಳ್ಳಲು ಅವರಿಗೆ ಆಗಲಿಲ್ಲ. ಈ ವಿಚಾರವನ್ನು ತಮ್ಮ ಕುಟುಂಬದವರಿಗೆ ತಿಳಿಸಿದರೆ, ಅವರ ಹೆಸರನ್ನು ಪ್ರಕರಣದಲ್ಲಿ ಸೇರಿಸುವುದಾಗಿ ಬೆದರಿಸಿದ್ದರು. ಮಗನ ಮದುವೆ ಸಮೀಪಿಸುತ್ತಿದ್ದ ಕಾರಣ ದೂರುದಾರೆ ವಂಚಕರ ಮಾತು ಕೇಳ ತೊಡಗಿದರು ಎಂದು ಹೇಳಿದರು.

'2024ರ ಸೆಪ್ಟೆಂಬರ್ 23ರಂದು ಸ್ಕೈಪ್ ಮೂಲಕ ವಿಡಿಯೊ ಕರೆ ಮಾಡಿದ ವ್ಯಕ್ತಿ ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡು, ಒಂದು ವಾರ ಸಂತ್ರಸ್ತೆಯ ವಿಚಾರಣೆ ನಡೆಸಿದ. ಆರ್‌ಬಿಐನ ಫೈನಾನ್ಷಿಯಲ್ ಇಂಟೆಲಿಜೆನ್ಸ್ ಯೂನಿಟ್‌ಗೆ (ಎಫ್‌ಐಯು) ತಮ್ಮ ಆಸ್ತಿಯ ವಿವರಗಳನ್ನು ಘೋಷಿಸಬೇಕು. ತನಿಖೆಯ ಭಾಗವಾಗಿ ನಿಮ್ಮ ಬ್ಯಾಂಕ್ ಖಾತೆ ಪರಿಶೀಲಿಸಬೇಕಿರುವ ಕಾರಣ, ಹಣ ವರ್ಗಾವಣೆ ಮಾಡಬೇಕು. ಪರಿಶೀಲನೆ ಬಳಿಕ ಹಣವನ್ನು ವಾಪಸ್ ನೀಡಲಾಗುವುದು' ಎಂದು ಹೇಳಿದ್ದಾನೆ. ಆತನ ಮಾತು ನಂಬಿ, ಸಂತ್ರಸ್ತೆ ತಮ್ಮ ನಿಶ್ಚಿತ ಠೇವಣಿ ಮತ್ತು ಉಳಿತಾಯ ಖಾತೆಯಲ್ಲಿದ್ದ ಹಣವನ್ನು ವಂಚಕರು ನೀಡಿದ್ದ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದಾರೆ' ಎಂದು ಹಿರಿಯ ಅಧಿಕಾರಿ 'ಪ್ರಜಾವಾಣಿ'ಗೆ ತಿಳಿಸಿದರು.

2024ರ ಡಿಸೆಂಬರ್ 6ರಂದು ದೂರುದಾರ ಮಹಿಳೆಯ ಮಗನ ನಿಶ್ಚಿತಾರ್ಥ ನೆರವೇರಿತು. ವಂಚಕರು ಸಂತ್ರಸ್ತೆಗೆ ಹಣ ವಾಪಸ್ ನೀಡಲಿಲ್ಲ. ಮಾರ್ಚ್ 26ರಂದು ತಮ್ಮ ಮೊಬೈಲ್ ಸಂಪರ್ಕಗಳನ್ನು ಕಡಿತಗೊಳಿಸಿದರು. ಈ ಅವಧಿಯಲ್ಲಿ ಅಪರಿಚಿತ ವ್ಯಕ್ತಿಗಳು ಸಂತ್ರಸ್ತೆಗೆ ಕರೆ ಮಾಡಿ, ಅವಾಚ್ಯ ಪದಗಳಿಂದ ನಿಂದಿಸಿ, ಬೆದರಿಕೆ ಹಾಕುತ್ತಿದ್ದರು ಎಂದು ಹೇಳಿದರು. 'ಮಗನ ಮದುವೆ, ವಿದೇಶ ಪ್ರಯಾಣ ಹಾಗೂ ಅನಾರೋಗ್ಯದ ಕಾರಣ ಸಂತ್ರಸ್ತೆ ತಡವಾಗಿ ದೂರು ನೀಡಿದ್ದಾರೆ. ನವೆಂಬರ್ 14ರಂದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ, ವಂಚಕರ ಖಾತೆಗೆ ₹31.83 ಕೋಟಿ ಹಣ ವರ್ಗಾವಣೆಯಾಗಿದ್ದು, 187 ಬಾರಿ ವಹಿವಾಟು ನಡೆಸಿದ್ದಾರೆ. ದೊಡ್ಡ ಮೊತ್ತದ ವಂಚನೆ ಪ್ರಕರಣವಾಗಿರುವ ಕಾರಣ ಇದನ್ನು ಸಿಐಡಿಗೆ ವರ್ಗಾಯಿಸುವ ಸಾಧ್ಯತೆ ಇದೆ' ಎಂದು ಅವರು ತಿಳಿಸಿದರು.

ಮಹಿಳೆ, ಮಕ್ಕಳ ರಕ್ಷಣೆಗೆ 'ಅಕ್ಕ ಪಡೆ'

ಒಂದನೇ ಪುಟದಿಂದ...



ಅಕ್ಕ ಪಡೆಯು ಶಾಲಾ-ಕಾಲೇಜು, ಬಸ್ ನಿಲ್ದಾಣ, ಮಾಲ್‌ಗಳು, ಉದ್ಯಾನ, ದೇವಸ್ಥಾನ ಸೇರಿ ಜನದಟ್ಟಣೆ ಪ್ರದೇಶಗಳ ಬಳಿ ಗಸ್ತು ತಿರುಗಿ ಕಿಡಿಗೇಡಿಗಳ ಮೇಲೆ ನಿಗಾ ವಹಿಸಲಿದೆ. ಯುವತಿಯರು, ವಿದ್ಯಾರ್ಥಿಗಳನ್ನು ಚುಡಾಯಿಸುವ, ಕೀಟಲೆ ಮಾಡುವ ಮತ್ತು ಅಸಭ್ಯ ವರ್ತನೆ ತೋರುವ ಪುಂಡರನ್ನು ಹಿಡಿದು ತಕ್ಕ ಪಾಠ ಕಲಿಸಲಿದೆ. ನಗರ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿಯೂ ಈ ಪಡೆ ಕಾರ್ಯನಿರ್ವಹಿಸಲಿದ್ದು, ಬೀದಿ ಕಾಮಣ್ಣರು, ಮಹಿಳಾ ಪೀಡಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

'ತರಬೇತಿ ಪಡೆದ ಅಕ್ಕ ಪಡೆ ಸದಸ್ಯರನ್ನು ಹೆಣ್ಣು ಮಕ್ಕಳ ಹಾಸ್ಟೆಲ್, ಬಸ್– ರೈಲು ನಿಲ್ದಾಣ, ಪ್ರೇಕ್ಷಣೀಯ ಸ್ಥಳ ಸೇರಿ ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸಲಾಗುವುದು. ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ಕರೆಗಳಿಗೆ ತ್ವರಿತವಾಗಿ ಸ್ಪಂದಿಸುವುದು, ಸ್ವರಕ್ಷಣೆ ಕಾರ್ಯವಿಧಾನ ಬಗ್ಗೆ ತರಬೇತಿ ನೀಡುವುದು ಹಾಗೂ ಸಂಚಾರ ನಿಯಮ ಕುರಿತು ಜಾಗೃತಿ ಮೂಡಿಸಲಿದೆ. ಹೊಯ್ಸಳ ವಾಹನದ ಮಾದರಿಯಲ್ಲಿ ಪಡೆ ರಸ್ತೆಗಿಳಿಯಲಿದ್ದು, ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆದು, ಕಾನೂನು ರಕ್ಷಣೆಯೊಂದಿಗೆ ಭಯಮುಕ್ತ ವಾತಾವರಣ ಸೃಷ್ಟಿಸಲಿದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ರಾಜ್ಯದ ಯಾವುದೇ ಭಾಗದಿಂದ ಕರೆ ಮಾಡಿದರೂ ಅಗತ್ಯವಿರುವ ನೆರವು ನೀಡಲಾಗುತ್ತದೆ. ಸಹಾಯವಾಣಿ ಮೂಲಕ ತುರ್ತು ನೆರವು ನೀಡಲಾಗುತ್ತದೆ. ದೂರುಗಳು ಬಂದರೆ ಅಕ್ಕ ಪಡೆ ತಕ್ಷಣ ಕಾರ್ಯಾಚರಣೆಗೆ ಇಳಿದು ಬುದ್ಧಿವಾದ ಹೇಳಲಿದೆ. ಒಂದು ವೇಳೆ ಪ್ರಕರಣ ಗಂಭೀರವಾಗಿದ್ದರೆ ತಪ್ಪಿತಸ್ಥರನ್ನು ಠಾಣೆಗೆ ಒಪ್ಪಿಸಲಾಗುತ್ತದೆ. ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತು, ಬಾಲ್ಯವಿವಾಹ, ಕಳ್ಳಸಾಗಣೆ, ಸಹಾಯವಾಣಿ 1098, 181, 112, ಗುಡ್ ಟಚ್– ಬ್ಯಾಡ್ ಟಚ್ ಸೇರಿ ಕಾನೂನು ಬಗ್ಗೆ ಜಾಗೃತಿ ಮೂಡಿಸಲಿದೆ. ರಾಜ್ಯ ಸರ್ಕಾರದಿಂದ ₹110 ಕೋಟಿ ಅನುದಾನ ಕೋರಲಾಗಿದೆ. ನಿರ್ಭಯ ಯೋಜನೆಯಡಿ ಅನುದಾನ ನೀಡುವಂತೆ ಕೇಂದ್ರಕ್ಕೂ ಮನವಿ ಸಲ್ಲಿಸಲಾಗಿದೆ' ಎಂದು ಹೇಳಿದರು.

ಕಲ್ಲುಕ್ವಾರಿ ಕುಸಿದು ಮೂವರು ಸಾವು

ಸೋನ್‌ಭದ್ರ (ಉತ್ತರಪ್ರದೇಶ), (ಪಿಟಿಐ): ಇಲ್ಲಿನ ಸೋನ್‌ಭದ್ರ ಜಿಲ್ಲೆಯಲ್ಲಿ ಭಾನುವಾರ ಕಲ್ಲಿನ ಕ್ವಾರಿ ಕುಸಿದುಬಿದ್ದು, ಮೂರು ಮಂದಿ ಮೃತಪಟ್ಟಿದ್ದು, ಡಜನ್‌ಗೂ ಅಧಿಕ ಮಂದಿ ಸಿಲುಕಿಕೊಂಡಿದ್ದಾರೆ.

'ಭಿಲ್ಲಿ ಮರ್ಕುಂಡಿ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದ ವೇಳೆ ದೊಡ್ಡದಾದ ಬಂಡೆಯೊಂದು ಕುಸಿದುಬಿತ್ತು. ಸ್ಥಳದಿಂದ ಮೂರು ಮಂದಿಯ ಮೃತದೇಹವನ್ನು ವಶಕ್ಕೆ ಪಡೆಯಲಾಗಿದೆ. ಮೃತರ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ನಿರೀಕ್ಷೆಯಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿದ್ದು, ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅಂದಾಜಿನ ಪ್ರಕಾರ, ದುರಂತ ಸಂಭವಿಸಿದ ವೇಳೆ 15ಕ್ಕೂ ಹೆಚ್ಚಿನ ಕಾರ್ಮಿಕರು ಕೆಲಸ ಮಾಡುತ್ತಿದ್ದರು, ಇವರೆಲ್ಲರೂ ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದಾರೆ.

ಪ್ರಕರಣದ ಕುರಿತು ಜಿಲ್ಲಾ ಮ್ಯಾಜಿಸ್ಟ್ರೇಟ್ ಬಿ.ಎನ್.ಸಿಂಗ್ ಅವರು ಆದೇಶ ಹೊರಡಿಸಿದ್ದಾರೆ.

'ನಿಷೇಧದ ಹೊರತಾಗಿಯೂ ಅಕ್ರಮವಾಗಿ ಗಣಿಗಾರಿಕೆ ನಡೆಸಲಾಗುತ್ತಿತ್ತು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಸ್ಥಳದಲ್ಲಿ ಗಣಿಗಾರಿಕೆ ನಡೆಸುತ್ತಿದ್ದ ಸಂಸ್ಥೆಯ ಮಾಲೀಕ, ಬ್ಲಾಕ್ ಮಾಜಿ ಮುಖ್ಯಸ್ಥನ ವಿರುದ್ಧ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮೃತರ ಪೈಕಿ ಇಬ್ಬರ ಮೃತದೇಹಗಳನ್ನು ಗುರುತಿಸಲಾ ಗಿದ್ದು, ಇಂದ್ರಜಿತ್ ಯಾದವ್ ಅವರ ಸಹೋದರ ಸಂತೋಷ್ ಎಂದು ಗುರುತಿಸಲಾಗಿದೆ.

'ನೂರು ಬಸ್ಕಿಯ ಶಿಕ್ಷೆ: ವಿದ್ಯಾರ್ಥಿನಿ ಸಾವು'

ಪ್ರಜಾವಾಣಿ ವಾರ್ತೆ/ಪಿಟಿಐ

ಪಾಲ್ಘರ್: ಶಾಲೆಗೆ ತಡವಾಗಿ ಬಂದಿದ್ದಕ್ಕೆ ನೂರು ಬಸ್ಕಿ ಹೊಡೆಯುವ ಶಿಕ್ಷೆ ನೀಡಿದ ಕಾರಣಕ್ಕೆ ವಿದ್ಯಾರ್ಥಿನಿಯೊಬ್ಬಳು ಮೃತಪಟ್ಟಿದ್ದಾಳೆ ಎನ್ನಲಾದ ಘಟನೆ ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ನಡೆದಿದೆ.

ವಸಾಯಿ ಪ್ರದೇಶದಲ್ಲಿನ ಶ್ರೀ ಹನುಮಂತ ವಿದ್ಯಾಮಂದಿರ ಪ್ರೌಢಶಾಲೆಯ ವಿದ್ಯಾರ್ಥಿನಿ ಅಂಶಿಕಾ ಗೌಡ(13) ನವೆಂಬರ್ 8ರಂದು ಶಾಲೆಗೆ ತಡವಾಗಿ ಬಂದಿದ್ದ ಕಾರಣಕ್ಕೆ ಶಾಲಾ ಬ್ಯಾಗ್ ಹಾಕಿಕೊಂಡು ನೂರು ಬಸ್ಕಿ ಹೊಡೆಯುವ ಶಿಕ್ಷೆ ನೀಡಲಾಗಿತ್ತು.

'ಬಸ್ಕಿ ಹೊಡೆದ ಬಳಿಕ ಅಂಶಿಕಾಗೆ ತೀವ್ರ ಬೆನ್ನು ಮತ್ತು ಕತ್ತು ನೋವು ಉಂಟಾಗಿತ್ತು. ಮನೆಗೆ ಬಂದ ಬಳಿಕ ಅಂಶಿಕಾ ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದ ಕಾರಣ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಅಂಶಿಕಾ ಶುಕ್ರವಾರ ಆಸ್ಪತ್ರೆಯಲ್ಲಿ ಮೃತಪಟ್ಟಳು' ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಸ್ಥಳೀಯ ಪೊಲೀಸರು ಇದು ಆಕಸ್ಮಿಕ ಸಾವು ಎಂದು ದಾಖಲಿಸಿಕೊಂಡಿದ್ದರು. ಸ್ಥಳೀಯರ ಪ್ರತಿಭಟನೆ ಬಳಿಕ ಪೊಲೀಸರು ಶನಿವಾರ ರಾತ್ರಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಂಶಿಕಾ ಸಾವಿನ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶಾಲೆ, ಅಧಿಕಾರಿಗಳು ಮತ್ತು ಶಿಕ್ಷಕರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ಎಂಎನ್‌ಎಸ್ ಮತ್ತು ಎನ್‌ಸಿಪಿ (ಶರದ್ ಬಣ) ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ.

ಹಸೀನಾ ವಿರುದ್ಧದ ಪ್ರಕರಣ: ಇಂದು ತೀರ್ಪು ಪ್ರಕಟ

ಢಾಕಾ (ಪಿಟಿಐ): ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ವಿರುದ್ಧದ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ (ಐಸಿಟಿ–ಬಿಡಿ) ಸೋಮವಾರ ತೀರ್ಪು ಪ್ರಕಟಿಸಲಿದೆ. ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ದೇಶಾದ್ಯಂತ ಭದ್ರತಾ ಪಡೆಗಳು ಕಟ್ಟೆಚ್ಚರ ವಹಿಸಿವೆ.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಲು ಕಾನೂನು ಜಾರಿ ಸಂಸ್ಥೆಗಳು ಈಗಾಗಲೇ ದೇಶಾದ್ಯಂತ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿವೆ. ಎಲ್ಲೆಡೆ ಬಿಗಿ ಬಂದೋಬಸ್ತ್ ಮಾಡಲಾಗಿದೆ ಎಂದು ಗೃಹ ವ್ಯವಹಾರಗಳ ಸಲಹೆಗಾರರಾದ ಜಹಂಗೀರ್ ಆಲಂ ಚೌಧರಿ ತಿಳಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

2024ರಲ್ಲಿ ವಿದ್ಯಾರ್ಥಿಗಳ ದಂಗೆಯನ್ನು ಹತ್ತಿಕ್ಕಲು ಮಾರಣಾಂತಿಕ ದಾಳಿ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಶೇಖ್ ಹಸೀನಾ, ಮಾಜಿ ಗೃಹ ಸಚಿವ ಅಸಾದುಜ್ಜಾಮಾನ್ ಖಾನ್ ಕಮಲ್ ಹಾಗೂ ಮಾಜಿ ಐಜಿಪಿ ಚೌಧರಿ ಅಬ್ದುಲ್ಲಾ ಅಲ್–ಮುಮುನ್ ಅವರ ವಿರುದ್ಧ ಪ್ರಕರಣಗಳು ದಾಖಲಾಗಿವೆ. ನ್ಯಾಯಮಂಡಳಿಯು 54 ಸಾಕ್ಷ್ಯಗಳನ್ನು ಪರಿಶೀಲಿಸಿ, ಪ್ರಕರಣದ ವಿಚಾರಣೆ ಪೂರ್ಣಗೊಳಿಸಿದ್ದು, ಸೋಮವಾರ ತೀರ್ಪು ಪ್ರಕಟಿಸುವುದಾಗಿ ಹೇಳಿದೆ.

ಇಸ್ರೊ ಪಾಲಿಗೆ ಬಿಡುವಿರದ ಕಾರ್ಯಕ್ರಮಗಳ ಕಾರ್ಯಭಾರ

ಮತ್ತೊಂದು ಚಂದ್ರಯಾನ.. ಹಲವು ಉಡ್ಡಯನ...

ಕೋಲ್ಕತ್ತ (ಪಿಟಿಐ): ತಂತ್ರಜ್ಞಾನ ಅಭಿವೃದ್ಧಿ, ವಿವಿಧ ಉಪಗ್ರಹಗಳ ಉಡ್ಡಯನ ಜೊತೆಗೆ ಮಹತ್ವಾಕಾಂಕ್ಷೆಯ ಚಂದ್ರಯಾನ–4 ಕಾರ್ಯಕ್ರಮಕ್ಕೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಸಜ್ಜಾಗುತ್ತಿದ್ದು, ಸಂಸ್ಥೆಯ ಕಾರ್ಯದ ಒತ್ತಡ ಮತ್ತಷ್ಟೂ ಹೆಚ್ಚಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಏಳು ಉಪಗ್ರಹಗಳ ಉಡ್ಡಯನಕ್ಕೆ ಸಿದ್ಧತೆ ನಡೆಯುತ್ತಿದೆ. 2027ಕ್ಕೆ ಮಾನವ ಸಹಿತ ಗಗನಯಾನವನ್ನು ಕಾರ್ಯಗತಗೊಳಿಸಬೇಕಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಹೇಳಿದ್ದಾರೆ.

ಪಿಟಿಐಗೆ ಸಂದರ್ಶನ ನೀಡಿರುವ ಅವರು, ಸಂಸ್ಥೆಯ ಪ್ರಸಕ್ತ ಹಾಗೂ ಉದ್ದೇಶಿತ ಯೋಜನೆಗಳ ಕುರಿತು ವಿವರಿಸಿದ್ದಾರೆ.



> 2028ರ ವೇಳೆಗೆ ಚಂದ್ರಯಾನ–4 ಬಾಹ್ಯಾಕಾಶ ಕಾರ್ಯಕ್ರಮ ಕಾರ್ಯಗತಗೊಳಿಸುವ ಗುರಿ ಹೊಂದಲಾಗಿದೆ
> **ವಿ.ನಾರಾಯಣನ್,** ಇಸ್ರೊ ಅಧ್ಯಕ್ಷ

'ಪ್ರಸಕ್ತ ಹಣಕಾಸು ವರ್ಷದೊಳಗಾಗಿ ಇನ್ನೂ 7 ಉಪಗ್ರಹಗಳನ್ನು ಉಡ್ಡಯನ ಮಾಡಲಾಗುವುದು. ವಾಣಿಜ್ಯ ಸಂವಹನ ಉಪಗ್ರಹವೂ ಸೇರಿದಂತೆ ಇತರ ವ್ಯೋಮಸಾಧನಗಳ ಉಡ್ಡಯನಕ್ಕೆ ಪಿಎಸ್‌ಎಲ್‌ವಿ ಹಾಗೂ ಜಿಎಸ್‌ಎಲ್‌ವಿ ರಾಕೆಟ್‌ಗಳನ್ನು ಅಣಿಗೊಳಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

'ಮೊದಲ ಬಾರಿಗೆ ಪಿಎಸ್‌ಎಲ್‌ವಿಯನ್ನು ದೇಶದ ಉದ್ದಿಮೆಗಳೇ ಸಂಪೂರ್ಣವಾಗಿ ನಿರ್ಮಿಸಿದ್ದು, ಇದರ ಉಡ್ಡಯನವು ಭಾರತೀಯ ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಮೈಲುಗಲ್ಲಾಗಲಿದೆ' ಎಂದು ನಾರಾಯಣನ್ ಹೇಳಿದ್ದಾರೆ.

'ಚಂದ್ರಯಾನ–4 ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಇದು ಭಾರತ ಕೈಗೊಳ್ಳಲಿರುವ ಅತ್ಯಂತ ಸಂಕೀರ್ಣ ಚಂದ್ರನ ಅನ್ವೇಷಣೆಯಾಗಿದೆ. ಸಂಶೋಧನೆಗಾಗಿ ಚಂದ್ರನ ಮೇಲ್ಮೈಯಿಂದ ಮಾದರಿಗಳನ್ನು ಭೂಮಿಗೆ ತರುವುದಕ್ಕೆ ಅನುವಾಗುವಂತೆ ಈ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ' ಎಂದಿದ್ದಾರೆ.

ನಾರಾಯಣನ್ ಹೇಳಿದ್ದು

- ತನ್ನ ಬೇಡಿಕೆಗೆ ಅನುಗುಣವಾಗಿ ಮುಂದಿನ ಮೂರು ವರ್ಷಗಳಲ್ಲಿ ಉಪಗ್ರಹಗಳ ತಯಾರಿಕೆಯನ್ನು ಮೂರುಪಟ್ಟು ಹೆಚ್ಚಿಸಲು ಇಸ್ರೊದಿಂದ ಕ್ರಮ
- ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಷನ್ ಏಜೆನ್ಸಿ ಸಹಯೋಗದಲ್ಲಿ 'ಲುಪೆಕ್ಸ್'(ಚಂದ್ರನ ಧ್ರುವಗಳ ಅನ್ವೇಷಣೆ ಕಾರ್ಯಕ್ರಮ) ಅನುಷ್ಠಾನ. ಚಂದಿರನ ದಕ್ಷಿಣ ಧ್ರುವ ಕುರಿತು ಅಧ್ಯಯನ ಗುರಿ
- 2035ರ ವೇಳೆಗೆ ಭಾರತೀಯ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸುವುದಕ್ಕೆ ಸಂಬಂಧಿಸಿ ಕೆಲಸ ಆರಂಭ
- ಪ್ರಸ್ತುತ, ಭಾರತದ ಬಾಹ್ಯಾಕಾಶ ಆರ್ಥಿಕತೆ ಗಾತ್ರ 8.2 ಶತಕೋಟಿ ಡಾಲರ್ (ಅಂದಾಜು ₹72 ಸಾವಿರ ಕೋಟಿ) ಇದೆ. 2033ರ ಹೊತ್ತಿಗೆ ಇದು 44 ಶತಕೋಟಿ (ಅಂದಾಜು ₹3 ಲಕ್ಷ ಕೋಟಿ) ತಲುಪಲಿದೆ ಎಂದು ಅಂದಾಜಿಸಲಾಗಿದೆ
- ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ 450 ಉದ್ದಿಮೆಗಳು ಹಾಗೂ 330 ಸ್ಟಾರ್ಟ್‌ಅಪ್‌ಗಳು ಸಕ್ರಿಯವಾಗಿವೆ



ಇಂಬುವಿನಲ್ಲಿ ದರ್ಶನ ಪಾತ್ರಿಯ ಕಥೆ

'ಕಾಂತಾರ' ಚಿತ್ರದ ಬಳಿಕ ತುಳುನಾಡಿನ ದೇವರು, ದೈವಗಳನ್ನು ಪರಿಚಯಿಸುವ ಕಥೆಗಳು ಹೆಚ್ಚಾಗಿವೆ. ಆದರೆ ದಶಕಗಳ ಹಿಂದೆಯೇ ತುಳುನಾಡಿನ ಸಾಂಸ್ಕೃತಿಕ ಜಗತ್ತನ್ನು ಹುಡುಕಿಕೊಂಡು ಹೊರಟ ಕೆಲ ನಿರ್ದೇಶಕರ ಸಾಲಿನಲ್ಲಿ ಶಿವಧ್ವಜ್ ಶೆಟ್ಟಿ ಕೂಡ ಸೇರುತ್ತಾರೆ. ಅವರ ನಿರ್ದೇಶನದ 'ಇಂಬು' ಚಿತ್ರ ಇಂಡಿಯನ್ ಪನೋರಮ 2025 ಸ್ಪರ್ಧೆಗೆ ಆಯ್ಕೆಗೊಂಡಿದೆ. ಚಿತ್ರ ಹಾಗೂ ತಮ್ಮ ಸಿನಿಪಯಣ ಕುರಿತು ಅವರು ಮಾತನಾಡಿದ್ದಾರೆ.

'ನವೆಂಬರ್ 20ರಿಂದ ಪ್ರಾರಂಭಗೊಳ್ಳಲಿರುವ 56ನೇ ಗೋವಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನಮ್ಮ ತುಳು ಚಿತ್ರ 'ಇಂಬು' ಪ್ರದರ್ಶನಗೊಳ್ಳಲಿದೆ. ಈ ಸಲದ ಇಂಡಿಯನ್ ಪನೋರಮ 2025 ಸ್ಪರ್ಧೆಗೆ ಕನ್ನಡದ 'ವನ್ಯ', 'ಸು ಫ್ರಂ ಸೋ' ಹಾಗೂ ತುಳುವಿನಿಂದ ನಮ್ಮ ಸಿನಿಮಾ ಆಯ್ಕೆಗೊಂಡಿದೆ. ಕಡಲು, ಕರಾವಳಿ, ಪ್ರಕೃತಿ, ದರ್ಶನ ಪಾತ್ರಿ ಮುಂತಾದ ವಿಷಯಗಳನ್ನು ಹೊಂದಿರುವ ಚಿತ್ರವಿದು. ದೇವರು ಮೈಮೇಲೆ ಅವಹಾನೆಗೊಂಡು ಭವಿಷ್ಯ ನುಡಿಯುವವರಿಗೆ ದರ್ಶನ ಪಾತ್ರಿಗಳು ಎನ್ನುತ್ತೇವೆ. ಅಂಥ ಓರ್ವ ಪಾತ್ರಿಯ ಬದುಕಿನಲ್ಲಿ ನಡೆಯುವ ಘಟನೆಗಳೇ ನಮ್ಮ ಚಿತ್ರದ ಕಥಾವಸ್ತು' ಎಂದು ಮಾತು ಪ್ರಾರಂಭಿಸಿದರು ಶಿವಧ್ವಜ್.



ಶಿವಧ್ವಜ್ ಶೆಟ್ಟಿ

ಚಿತ್ರರಂಗದಲ್ಲಿ ಮೂರು ದಶಕಗಳನ್ನು ಪೂರೈಸಿರುವ ಅವರು ನಟ, ನಿರ್ದೇಶಕ, ನಿರ್ಮಾಪಕರಾಗಿ ಗುರುತಿಸಿಕೊಂಡಿದ್ದಾರೆ. ಐದು ಭಾಷೆಗಳ 40ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟನಾಗಿ ಕಾಣಿಸಿಕೊಂಡಿದ್ದಾರೆ. ಈತನಕ ಆರು ಸಿನಿಮಾಗಳನ್ನು ನಿರ್ದೇಶಿಸಿದ್ದು, ಇವರ 'ಗಗ್ಗರ' ಚಿತ್ರಕ್ಕೆ 2008ರಲ್ಲಿ ರಾಷ್ಟ್ರ ಪ್ರಶಸ್ತಿ ಲಭಿಸಿತ್ತು.

'ಚಿತ್ರದಲ್ಲಿ ತುಳುನಾಡಿನ ಸಂಸ್ಕೃತಿ ಇದೆ. ಜತೆಗೆ ಇಂದಿನ ತಂತ್ರಜ್ಞಾನ ಬೆಸೆದುಕೊಂಡಿದೆ. ಮೊಬೈಲ್ ಬಳಕೆ ಗೊತ್ತಿಲ್ಲದ ದರ್ಶನ ಪಾತ್ರಿಗೆ ಭಕ್ತರೊಬ್ಬರಿಂದ ಮೊಬೈಲ್ ಲಭಿಸುತ್ತದೆ. ಆ ಮೊಬೈಲ್ ಬಳಕೆ ಚಟವಾಗಿ ಪಾತ್ರಿ ಆಪತ್ತಿಗೆ ಸಿಲುಕಿಕೊಳ್ಳುತ್ತಾರೆ. ಯಾವ ರೀತಿ ಆಪತ್ತು? ಅದರಿಂದ ಅವರ ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬುದೇ ಒಟ್ಟಾರೆ ಚಿತ್ರ. ಇಲ್ಲಿ ಸಮುದ್ರವೂ ಒಂದು ಪ್ರಮುಖ ಪಾತ್ರವಾಗಿರುತ್ತದೆ. ಬೆಂಗಳೂರು, ಕೋಲ್ಕತ ಚಿತ್ರೋತ್ಸವಗಳಲ್ಲಿ ಈ ಚಿತ್ರ ಈಗಾಗಲೇ ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿದೆ' ಎಂದರು.

ತುಳು ಚಿತ್ರರಂಗದ ಜನಪ್ರಿಯ ಹಾಸ್ಯನಟ ನವೀನ್ ಪಡೀಲ್ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ. ಸಿನೋಯ್ ಜೋಸೆಫ್ ಸಂಗೀತ, ಸುರೇಶ್ ಭೈರಸಂದ್ರ ಛಾಯಾಚಿತ್ರಗ್ರಹಣ, ಗಣೇಶ್ ನಿರ್ಚಾಲ್ ಸಂಕಲನ ಚಿತ್ರಕ್ಕಿದೆ.

'ಗಟ್ಟಿಯಾದ ಕಥೆಗಳನ್ನು ಹೊಂದಿರುವ, ನಮ್ಮ ಬದುಕಿನ ಮೂಲ ಬೇರುಗಳನ್ನು ನೆನಪಿಸುವ ಚಿತ್ರಗಳನ್ನು ಜನ ಇಷ್ಟಪಡುತ್ತಿದ್ದಾರೆ. ಉತ್ತಮ ಕಾಂಟೆಂಟ್ ಹೊಂದಿರುವ ಚಿತ್ರಗಳ ಯುಗವಿದು. ಆ ರೀತಿ ಕಥೆಗಳನ್ನು ಉತ್ತಮ ಬಜೆಟ್‌ನಲ್ಲಿ ಮಾಡಿದಾಗ ಕಮರ್ಷಿಯಲ್ ಚಿತ್ರವಾಗುತ್ತದೆ. ಅಚ್ಚುಕಟ್ಟಾದ ಬಂಡವಾಳದೊಂದಿಗೆ ಮಾಡಿದರೆ ಕಲಾತ್ಮಕ ಚಿತ್ರವಾಗುತ್ತದೆ. ಕಮರ್ಷಿಯಲ್ ಚಿತ್ರ ಮಾಡುವ ಇರಾದೆಯಿದೆ. ಆ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ' ಎಂದು ಮಾತಿಗೆ ವಿರಾಮವಿತ್ತರು. ❖

ಸಸ್ಪೆನ್ಸ್ ಥ್ರಿಲ್ಲರ್ ರುಧ



ಮಾನಸ ಗೌಡ

ಮಹಿಳಾ ಪ್ರಧಾನ ಕಥಾವಸ್ತುವನ್ನು ಹೊಂದಿರುವ 'ರುಧ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಅನು ಪ್ರಭಾಕರ್ ಮತ್ತು ರಘು ಮುಖರ್ಜಿ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಶರತ್ ಶಿಡ್ಲಘಟ್ಟ ನಿರ್ದೇಶನದ ಚಿತ್ರಕ್ಕೆ ಪುಟ್ಟರಾಜು ಅವರು ಕೆಪಿಜಿ ವಿಷನ್ಸ್ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡುತ್ತಿದ್ದಾರೆ.

'ಕೆಲ ವರ್ಷಗಳ ಹಿಂದೆ ಕೇರಳದಲ್ಲಿ ನಡೆದ ಸತ್ಯ ಘಟನೆಯ ಒಂದು ಎಳೆಯನ್ನು ಬಳಸಿಕೊಂಡು, ಸಸ್ಪೆನ್ಸ್, ಥ್ರಿಲ್ಲರ್ ಮಾದರಿಯಲ್ಲಿ ಕಥೆ ಹೆಣೆಯಲಾಗಿದೆ. ಸಣ್ಣ ಸುಳಿವನ್ನು ನೀಡಿದರೂ ಕಥೆಯ ಸಾರಾಂಶ ತಿಳಿಯುತ್ತದೆ. ಅದಕ್ಕಾಗಿ ಈಗಲೇ ಏನೂ ಹೇಳುವುದಿಲ್ಲ. 'ರುಧ' ಸಂಸ್ಕೃತ ಪದವಾಗಿದ್ದು, ನಟೋರಿಯಸ್ ಎಂಬ ಅರ್ಥ ಕೊಡುತ್ತದೆ. ಚಿತ್ರದಲ್ಲಿ ರಕ್ತದೋಕುಳಿ ಹೆಚ್ಚು ಇರುತ್ತದೆ. ಮೂರು ಮುಖ್ಯ ಪಾತ್ರಗಳನ್ನು ಹೊರತುಪಡಿಸಿ, ಮಿಕ್ಕಂತೆ ಅನುಭವಿ ರಂಗಭೂಮಿ ಕಲಾವಿದರುಗಳಿಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಕೊಡಗು ಸುತ್ತಮುತ್ತ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸಲು ಯೋಜನೆ ರೂಪಿಸಲಾಗಿದೆ' ಎಂದರು ನಿರ್ದೇಶಕ.

ವರಲಕ್ಷ್ಮೀ, ಮಾನಸ ಗೌಡ, ರಥರ್ವ ಪ್ರಮುಖ ಪಾತ್ರಗಳಲ್ಲಿದ್ದಾರೆ. ರಾಜು ಹೆಮ್ಮಿಗೆಪುರ ಛಾಯಾಚಿತ್ರಗ್ರಹಣ, ವಿಜಯ್ ಸಂಕಲನವಿರಲಿದೆ. ಸಂಗೀತ ನಿರ್ದೇಶಕರು ಇನ್ನಷ್ಟೇ ಆಯ್ಕೆಯಾಗಬೇಕಿದೆ ಎಂದಿದೆ ಚಿತ್ರತಂಡ. ❖

ಸೆಟ್ಟೇರಲು ಸಜ್ಜಾದ 'ಪಿಸ್ತೂಲ್'

ಸಸ್ಪೆನ್ಸ್, ಕ್ರೈಂ, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಪಿಸ್ತೂಲ್' ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ವಸಿಷ್ಠ ಸಿಂಹ ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.



ಆತ್ಮ ಸಿನಿಮಾಸ್ ಬ್ಯಾನರಿನಲ್ಲಿ ಪ್ರಬೀಕ್ ಮೊಗವೀರ್ ಕಥೆ, ಚಿತ್ರಕಥೆ ಬರೆದು ನಿರ್ಮಿಸುತ್ತಿರುವ ಈ ಚಿತ್ರಕ್ಕೆ ವೇದ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ವೇದ್ ಈ ಹಿಂದೆ 'ಸ್ಕೂಲ್ ರಾಮಾಯಣ', 'ರಾವೆನ್' ಚಿತ್ರಗಳನ್ನು ನಿರ್ದೇಶಿಸಿದ್ದರು.

'ಈ ಚಿತ್ರದಲ್ಲಿ ನಾಯಕ, ನಾಯಕಿ ಎಂಬ ಯಾವುದೇ ಪಾತ್ರಗಳಿಲ್ಲ. ಇದರಲ್ಲಿ ಕಥೆಯೇ ಪ್ರಧಾನ. ಒಂದು ಪಿಸ್ತೂಲ್‌ನಲ್ಲಿ ಆರು ಬುಲೆಟ್‌ಗಳಿರುವಂತೆ, ಈ ಕಥೆಯಲ್ಲಿ ಆರು ಪಾತ್ರಗಳಿರುತ್ತವೆ. ಪ್ರಬೀಕ್ ಮೊಗವೀರ್ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದು, ಉಳಿದ ಕಲಾವಿದರ ಹುಡುಕಾಟ ನಡೆದಿದೆ. ವಿಶೇಷ ಪಾತ್ರಕ್ಕೆ ದಕ್ಷಿಣ ಭಾರತದ ಜನಪ್ರಿಯ ನಟರೊಬ್ಬರನ್ನು ಅತಿಥಿ ಕಲಾವಿದರನ್ನಾಗಿ ಕರೆತರುವ ಯೋಚನೆಯೂ ಇದೆ' ಎಂದಿದ್ದಾರೆ ನಿರ್ದೇಶಕ.

'ಸದ್ಯ ಚಿತ್ರದ ಬಹುತೇಕ ಸ್ಕ್ರಿಪ್ಟ್ ಮತ್ತು ಪ್ರೀ-ಪ್ರೊಡಕ್ಷನ್ ಕೆಲಸಗಳು ಪೂರ್ಣಗೊಂಡಿದ್ದು, ಕಲಾವಿದರು ಮತ್ತು ತಂತ್ರಜ್ಞರ ಆಯ್ಕೆ ನಡೆಯುತ್ತಿದೆ. ಇದೇ ವರ್ಷಾಂತ್ಯದೊಳಗೆ ಸಿನಿಮಾ ಚಿತ್ರೀಕರಣ ಪೂರೈಸಿ, ಮುಂದಿನ ವರ್ಷದ ಮಧ್ಯ ಭಾಗದಲ್ಲಿ ಪ್ರೇಕ್ಷಕರ ಮುಂದೆ ತರುವ ಯೋಜನೆಯಿದೆ' ಎಂದಿದೆ ಚಿತ್ರತಂಡ. ❖

ವರ್ಷದಿಂದ ಆತ್ಮಾಹುತಿ ಬಾಂಬರ್‌ಗೆ ಶೋಧ

'ವೈಟ್ ಕಾಲರ್ ಉಗ್ರ ಜಾಲ'ದ ಕಾರ್ಯಸೂಚಿ ಬಯಲು

- ಕುಲ್ಗಾಮ್‌ನ ಮಸೀದಿಯಲ್ಲಿ ವೈದ್ಯರ ಭೇಟಿ: ಬಂಧಿತನಿಂದ ಹೇಳಿಕೆ

ನವದೆಹಲಿ/ಶ್ರೀನಗರ: ವೈದ್ಯರ ಗುಂಪೊಂದು ಭಾಗವಾಗಿರುವ 'ವೈಟ್ ಕಾಲರ್ ಉಗ್ರ ಜಾಲ'ವು ಕಳೆದ ಒಂದು ವರ್ಷದಿಂದ ಆತ್ಮಾಹುತಿ ಬಾಂಬರ್‌ಗಾಗಿ ಹುಡುಕಾಟ ನಡೆಸಿತ್ತು. ಉಗ್ರ ಜಾಲದ ಈ ಕಾರ್ಯಸೂಚಿಯನ್ನು ಡಾ.ಉಮರ್ ನಬಿ ಕಾರ್ಯಗತಗೊಳಿಸುತ್ತಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಕೆಂಪು ಕೋಟೆ ಬಳಿ ಸ್ಫೋಟಗೊಂಡ ಕಾರನ್ನು ಚಾಲನೆ ಮಾಡುತ್ತಿದ್ದ ಹಾಗೂ ಈ ಸ್ಫೋಟದಲ್ಲಿ ಮೃತಪಟ್ಟಿದ್ದಾನೆ ಎನ್ನಲಾದ ಡಾ.ಉಮರ್ ಒಬ್ಬ ಕಟ್ಟಾ ಮೂಲಭೂತವಾದಿಯಾಗಿದ್ದ. ಸಂಘಟನೆಯ ಕಾರ್ಯಾಚರಣೆಗಳನ್ನು ನಡೆಸುವುದಕ್ಕೆ ಆತ್ಮಾಹುತಿ ಬಾಂಬರ್‌ನ ಅಗತ್ಯವಿದೆ ಎಂಬುದಾಗಿ ಆತ ಹೇಳುತ್ತಿದ್ದ ಎಂಬುದಾಗಿ ಬಂಧಿತ ಸಹ ಆರೋಪಿ ಯೊಬ್ಬ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾನೆ' ಎಂದೂ ಅಧಿಕಾರಿಗಳು ಹೇಳಿದ್ದಾರೆ.

'ವೈದ್ಯರನ್ನು ಒಳಗೊಂಡ ಉಗ್ರರ ಜಾಲವನ್ನು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಕುಲ್ಗಾಮ್‌ನ ಮಸೀದಿ ಯೊಂದರಲ್ಲಿ ಭೇಟಿ ಮಾಡಿದ್ದೆ. ನಂತರ ಆ ಗುಂಪು ನನ್ನನ್ನು ಹರಿಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫಲಾಹ್ ವಿಶ್ವವಿದ್ಯಾಲಯದ ಬಾಡಿಗೆ ಕೋಣೆ ಯೊಂದಕ್ಕೆ ಕರೆದುಕೊಂಡು ಹೋಯಿತು ಎಂದು ಆತ ತಿಳಿಸಿದ್ದಾನೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ನಿಷೇಧಿತ ಜೈಷ್-ಎ-ಮೊಹಮ್ಮದ್ ಸಂಘಟನೆ ಪರವಾಗಿ ನಾನು ಸ್ಥಳೀಯ ವಾಗಿ ಕೆಲಸ ಮಾಡಬೇಕು ಎಂಬುದಾಗಿ ಬಂಧಿತ ವೈದ್ಯರ ಗುಂಪು ಬಯಸಿತ್ತು. ಆತ್ಮಾಹುತಿ ಬಾಂಬರ್ ಆಗುವಂತೆ ನನ್ನ ಮನವೊಲಿಸಲು ಉಮರ್ ಹಲವು ತಿಂಗಳು ಪ್ರಯತ್ನಿಸಿದ್ದ ಎಂಬುದಾಗಿ ಬಂಧಿತ ಮಾಹಿತಿ ನೀಡಿದ್ದಾನೆ' ಎಂದಿದ್ದಾರೆ.

'ತನ್ನ ಆರ್ಥಿಕ ಸ್ಥಿತಿ ಸರಿ ಇಲ್ಲ ಹಾಗೂ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಇಸ್ಲಾಂ ನಿಷೇಧಿಸುತ್ತದೆ ಎಂಬ ಕಾರಣ ನೀಡಿ ಆ ವ್ಯಕ್ತಿ ಆತ್ಮಾಹುತಿ ಬಾಂಬರ್ ಆಗುವುದಕ್ಕೆ ಒಪ್ಪಲಿಲ್ಲ. ಹೀಗಾಗಿ, 'ಉಗ್ರ ಜಾಲ'ದ ಯೋಜನೆ ಕಳೆದ ಏಪ್ರಿಲ್‌ನಲ್ಲಿ ವಿಫಲಗೊಂಡಿತು' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

9 ಎಂಎಂ ಗುಂಡುಗಳು ಪತ್ತೆ

ನವದೆಹಲಿ (ಪಿಟಿಐ): ಕೆಂಪುಕೋಟೆ ಬಳಿ ಕಾರು ಸ್ಫೋಟಗೊಂಡ ಸ್ಥಳದಿಂದ ವಶಪಡಿಸಿಕೊಂಡ ಮೂರು ಕಾರ್ಟ್ರಿಡ್ಜ್‌ಗಳನ್ನು ಭದ್ರತಾ ಸಂಸ್ಥೆಗಳು ಪರಿಶೀಲಿಸುತ್ತಿವೆ. ಮೂರು ಕಾರ್ಟ್ರಿಡ್ಜ್‌ಗಳ ಪೈಕಿ ಎರಡು ಸಜೀವ ಗುಂಡುಗಳಾಗಿದ್ದು, ಒಂದು ಖಾಲಿ ಶೆಲ್ ಆಗಿದೆ.

ಮೂಲಗಳ ಪ್ರಕಾರ, 9 ಎಂಎಂ ಗುಂಡುಗಳನ್ನು ಸಾಮಾನ್ಯವಾಗಿ ಸಶಸ್ತ್ರ ಪಡೆಗಳು ಅಥವಾ ವಿಶೇಷ ಅನುಮತಿ ಪಡೆದಿರುವ ವ್ಯಕ್ತಿಗಳಿಗೆ ನೀಡಲಾಗುತ್ತದೆ.

'ಈ ಕಾರ್ಟ್ರಿಡ್ಜ್‌ಗಳು ಘಟನಾ ಸ್ಥಳದಲ್ಲಿ ನಿಯೋಜಿಸಿದ್ದ ಭದ್ರತಾ ಸಿಬ್ಬಂದಿಗೆ ಸೇರಿದವಲ್ಲ. ಅವರ ಬಳಿ ಇದ್ದ ಗುಂಡು ಕಾಣೆಯಾಗಿಲ್ಲ. ಹೀಗಾಗಿ, ಈ ಗುಂಡುಗಳು ಶಂಕಿತನ ಬಳಿ ಇದ್ದವೇ ಎಂಬ ಶಂಕೆ ವ್ಯಕ್ತವಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಆರೋಪಿ ಉಮರ್ ನಬಿ ಫರೀದಾಬಾದ್‌ನಿಂದ ಹೊರಟು ಹರಿಯಾಣದ ನೂಹ್‌ಗೆ ಭೇಟಿ ನೀಡಿ ದೆಹಲಿಯಲ್ಲಿ ಚಹಾ ಕುಡಿದ ಸಮಯದಿಂದ ಹಿಡಿದು ಸ್ಫೋಟಕ್ಕೆ ಕಾರಣವಾದ ಸಂಪೂರ್ಣ ಘಟನೆಯನ್ನು ಮರುಸೃಷ್ಟಿಸಲು ಭದ್ರತಾ ಸಂಸ್ಥೆಗಳು ಸಿದ್ಧತೆ ನಡೆಸುತ್ತಿವೆ' ಎಂದು ಹೇಳಿದ್ದಾರೆ.

ನ.10ರಂದು ಹುಂಡೈ ಐ20 ಕಾರಿನಲ್ಲಿ ಸ್ಫೋಟ ಸಂಭವಿಸಿ 13 ಮಂದಿ ಮೃತಪಟ್ಟು, 24ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಅಪರಾಧ ಹಿನ್ನೆಲೆ ಇಲ್ಲದವರಿಗೆ ಆದ್ಯತೆ

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದಕ ಸಂಘಟನೆಗಳು ತಮ್ಮ ಕಾರ್ಯಾಚರಣೆ ವಿಧಾನಗಳನ್ನು ಇತ್ತೀಚಿನ ದಿನಗಳಲ್ಲಿ ಬದಲಾಯಿಸಿವೆ. ಅದೇ ರೀತಿ, ಇಂತಹ ಸಂಘಟನೆಗಳಿಗೆ ಯುವಕರನ್ನು ನೇಮಕ ಮಾಡಿಕೊಳ್ಳುವ ವಿಧಾನವೂ ಬದಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯಾವುದೇ ಅಪರಾಧ ಚಟುವಟಿಕೆಗಳಲ್ಲಿ ಪಾಲ್ಗೊಂಡಿರದ, ಪ್ರತ್ಯೇಕತಾ ಗುಂಪುಗಳೊಂದಿಗೆ ನಂಟು ಹೊಂದಿರದ ಯುವಜನರನ್ನು ಭಯೋತ್ಪಾದಕ ಸಂಘಟನೆಗಳಿಗೆ ನೇಮಿಸಿಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಭಯೋತ್ಪಾದಕ ಸಂಘಟನೆಗಳಿಗೆ ನೇಮಕ ಮಾಡಿಕೊಳ್ಳುವಾಗ ಕಳೆದ ಎರಡು ದಶಕಗಳ ಹಿಂದೆ ಅನುಸರಿಸುತ್ತಿದ್ದ ವಿಧಾನಕ್ಕಿಂತ ಈಗಿನ ವಿಧಾನವೂ ಸಂಪೂರ್ಣ ಭಿನ್ನವಾಗಿದೆ' ಎಂದೂ ಹೇಳಿದ್ದಾರೆ.

'ವೈಟ್ ಕಾಲರ್ ಉಗ್ರ ಜಾಲ' ಕುರಿತು ತನಿಖೆ ನಡೆಸುತ್ತಿರುವ ಅಧಿಕಾರಿಗಳು ಕೂಡ, ಉಗ್ರ ಸಂಘಟನೆಗಳಿಗೆ ನೇಮಕಾತಿ ಮಾಡುವಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸಿದ್ದಾರೆ. ಅದರಲ್ಲೂ, ದೆಹಲಿ ಸ್ಫೋಟಕ್ಕೆ ಸಂಬಂಧಿಸಿ ಬಂಧಿಸಿರುವವರನ್ನು ವಿಚಾರಣೆಗೆ ಒಳಪಡಿಸಿದಾಗ, ಅವರ ಹಿನ್ನೆಲೆಯಲ್ಲಿ ಸಾಮ್ಯತೆ ಇರುವುದು ಕಂಡುಬಂದಿದೆ.

'ಬಂಧಿತ ಆರೋಪಿಗಳಾದ ಡಾ.ಆದಿಲ್ ರಾಥರ್, ಆತನ ಸಹೋದರ ಡಾ.ಮುಜಾಫರ್ ರಾಥರ್ ಹಾಗೂ ಡಾ.ಮುಜಮ್ಮಿಲ್ ಗನಿ ಅವರು ಯಾವುದೇ ಅಪರಾಧ ಹಿನ್ನೆಲೆ ಹೊಂದಿಲ್ಲ ಅಥವಾ ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಂಧಿತರ ಕುಟುಂಬದ ಸದಸ್ಯರು ಸಹ ಯಾವುದೇ ಪ್ರತ್ಯೇಕತಾವಾದಿ ಗುಂಪು ಅಥವಾ ಭಯೋತ್ಪಾದಕ ಸಂಘಟನೆ ಜೊತೆ ನಂಟು ಹೊಂದಿಲ್ಲ' ಎಂದು ಇದೇ ಅಧಿಕಾರಿ ಹೇಳಿದ್ದಾರೆ.

'ಕೆಂಪು ಕೋಟೆ ಬಳಿ ನವೆಂಬರ್ 10ರಂದು ಸ್ಫೋಟಗೊಂಡ ಕಾರನ್ನು ಚಲಾಯಿಸುತ್ತಿದ್ದ ಡಾ.ಉಮರ್ ನಬಿಗೂ ಇದೇ ಮಾತು ಅನ್ವಯಿಸುತ್ತದೆ. ಆತನ ಕುಟುಂಬಸ್ಥರು ಕೂಡ ಇಂತಹ ಯಾವುದೇ ನಂಟು ಹೊಂದಿಲ್ಲ' ಎಂದಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿ ಅಥವಾ ಪಾಕಿಸ್ತಾನಕ್ಕೆ ಹೊಂದಿಕೊಂಡಿರುವ ಗಡಿ ಉದ್ದಕ್ಕೂ ಭಯೋತ್ಪಾದಕ ಚಟುವಟಿಕೆಗಳಲ್ಲಿ ನಿರತರಾಗಿರುವವರು ಉನ್ನತ ವ್ಯಾಸಂಗ ಮಾಡಿರುವ ಆದರೆ ಅಪರಾಧ ಹಿನ್ನೆಲೆ ಹೊಂದಿರದ ಯುವಜನತೆಯನ್ನು ಉದ್ದೇಶಪೂರ್ವಕವಾಗಿಯೇ ನೇಮಕ ಮಾಡಿಕೊಳ್ಳುತ್ತಿರಬಹುದು. ವೈದ್ಯರ ಗುಂಪೊಂದು ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗುತ್ತದೆ ಎಂಬುದನ್ನು ಊಹಿಸಲು ಸಾಧ್ಯ ಇಲ್ಲ ಎಂದು ತನಿಖಾಧಿಕಾರಿ ತಿಳಿಸಿದ್ದಾರೆ.

ದೆಹಲಿ ಸ್ಫೋಟ: ಪ್ರಮುಖ ಸಂಚುಕೋರನ ಬಂಧಿಸಿದ ಎನ್‌ಐಎ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೆಹಲಿಯ ಕೆಂಪು ಕೋಟೆ ಬಳಿ ಸಂಭವಿಸಿದ ಕಾರು ಸ್ಫೋಟಕ್ಕೆ ಸಂಬಂಧಿಸಿ ಪ್ರಮುಖ ಸಂಚುಕೋರನನ್ನು ಎನ್‌ಐಎ ಅಧಿಕಾರಿಗಳು ಶ್ರೀನಗರದಲ್ಲಿ ಭಾನುವಾರ ಬಂಧಿಸಿದ್ದಾರೆ. ಇದರೊಂದಿಗೆ, ಈ ಘಟನೆ ಕುರಿತ ತನಿಖೆಯು ಮಹತ್ವದ ಘಟ್ಟ ತಲುಪಿದಂತಾಗಿದೆ.

ಅಮೀರ್ ರಶೀದ್ ಅಲಿ ಬಂಧಿತ. ಸ್ಫೋಟಗೊಂಡ ಕಾರು ಅಮೀರ್ ಹೆಸರಿನಲ್ಲಿ ನೋಂದಣಿಯಾಗಿತ್ತು. ಈತ ಜಮ್ಮು–ಕಾಶ್ಮೀರದ ಪಾಂಪೋರ್‌ನ ಸಂಬೂರಾ ನಿವಾಸಿ' ಎಂದು ಎನ್‌ಐಎ ಅಧಿಕಾರಿಗಳು ತಿಳಿಸಿದ್ದಾರೆ.

'ಈ ಭಯೋತ್ಪಾದಕ ಕೃತ್ಯ ಎಸಗಲು ಅಮೀರ್, ಆತ್ಮಾಹುತಿ ಬಾಂಬರ್ ಡಾ.ಉಮರ್ ನಬಿ ಜೊತೆ ಸೇರಿ ಸಂಚು ರೂಪಿಸಿದ್ದ. 'ಕಾರಿನಲ್ಲಿ ಒಯ್ದ ಕಚ್ಚಾ ಬಾಂಬ್' ಬಳಸಿ ಸ್ಫೋಟಿಸುವ ಉದ್ದೇಶದಿಂದ ಕಾರು ಖರೀದಿಗೆ ನೆರವಾಗಲು ಈತ ಕಳೆದ ವರ್ಷ ದೆಹಲಿಗೆ ಬಂದಿದ್ದ' ಎಂದಿದ್ದಾರೆ.

'ಡಾ.ಉಮರ್ ನಬಿ, ಅಮೀರ್ ಅಲಿ ಕಳೆದ ಕೆಲ ತಿಂಗಳಿನಿಂದ ಸಂಪರ್ಕದಲ್ಲಿದ್ದರು. ನ.10ರಂದು ನಡೆಸಿದ ದಾಳಿಗಾಗಿ ಸ್ಫೋಟಕ ಸಿದ್ಧಪಡಿಸುವಲ್ಲಿ ನಿರತರಾಗಿದ್ದರು' ಎನ್‌ಐಎ ಶಂಕಿಸಿದೆ.

ಇದೇ ಮೊದಲ ಬಾರಿಗೆ ಎನ್‌ಐಎ, ಡಾ.ಉಮರ್ ನಬಿಯನ್ನು 'ಆತ್ಮಾಹುತಿ ಬಾಂಬರ್' ಎಂದು ಕರೆದಿದೆ. ಸ್ಫೋಟಕಕ್ಕೆ 'ಕಾರಿನಲ್ಲಿ ಒಯ್ದ ಕಚ್ಚಾ ಬಾಂಬ್' (ಐಇಡಿ) ಎಂಬ ಪದವನ್ನು ಸಹ ಮೊದಲ ಬಾರಿಗೆ ಬಳಸಿದೆ.

'ಆಕಸ್ಮಿಕ, ಉಗ್ರರ ದಾಳಿ ಅಲ್ಲ'

ಶ್ರೀನಗರ/ನವದೆಹಲಿ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ನೌಗಾಮ್ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಸಂಭವಿಸಿದ ಸ್ಫೋಟ ಆಕಸ್ಮಿಕವಾಗಿ ಸಂಭವಿಸಿದೆ' ಎಂದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ.

'ವಿಧಿವಿಜ್ಞಾನ ತಂಡದ ಸದಸ್ಯರು ಅತಿಯಾದ ಬೆಳಕು ಬಳಸಿ, ಪರೀಕ್ಷೆ ನಡೆಸಿದ್ದರಿಂದಲೇ ಭಾರಿ ಸ್ಫೋಟ ಉಂಟಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಹರಿಯಾಣದ ಫರೀದಾಬಾದ್‌ನ ಅಲ್– ಫಲಾಹ್ ವಿಶ್ವವಿದ್ಯಾಲಯದಿಂದ ವಶಪಡಿಸಿಕೊಂಡಿದ್ದ ಸ್ಫೋಟಕಗಳ ಅಂತಿಮ ಹಂತದ ಬಾಕ್ಸ್‌ಗಳನ್ನು ಠಾಣೆಯಲ್ಲಿ ಇಡಲಾಗಿತ್ತು. ಅವುಗಳ ಮಾದರಿಯನ್ನು ತಜ್ಞರು ಹೊರತೆಗೆದು ಪರೀಕ್ಷಿಸುವ ವೇಳೆ ರಾತ್ರಿ 11.20ರ ಸುಮಾರಿಗೆ ಭಾರಿ ಸ್ಫೋಟ ಸಂಭವಿಸಿದೆ. ಇದು ಆಕಸ್ಮಿಕವಾಗಿ ನಡೆದಿದ್ದು, ಭಯೋತ್ಪಾದಕ ದಾಳಿಯಲ್ಲ' ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಕೇಂದ್ರದ ವಿಧಿವಿಜ್ಞಾನ ಪ್ರಯೋಗಾಲಯದ ಸದಸ್ಯರು, ರಾಷ್ಟ್ರೀಯ ಭದ್ರತಾ ಪಡೆ(ಎನ್‌ಎಸ್‌ಜಿ) ಯೋಧರು ಕೂಡ ಸ್ಥಳಕ್ಕೆ ಭೇಟಿ ನೀಡಿ ಮಾದರಿ ಸಂಗ್ರಹಿಸಿದ್ದಾರೆ.

'ವಶಪಡಿಸಿಕೊಂಡಿದ್ದ ಸ್ಫೋಟಕಗಳಲ್ಲಿ ಕೊನೆಯ ಬಾಕ್ಸ್‌ಗಳಲ್ಲಿ ಅಸಿಟೊಫಿನೊನ್, ಹೈಡ್ರೋಜನ್ ಪರಾಕ್ಸೈಡ್, ಸಲ್ಫರಿಕ್ ಆ್ಯಸಿಡ್‌ಗಳ ಮಿಶ್ರಣವಿದ್ದಿರಬಹುದು. ಇದನ್ನು ಪ್ರಕಾಶಮಾನವಾದ ಬೆಳಕಿನಲ್ಲಿ ಹತ್ತಿರದಿಂದ ಪರೀಕ್ಷೆ ನಡೆಸುತ್ತಿದ್ದ ವೇಳೆಯೇ ಭಾರಿ ಸ್ಫೋಟಸಂಭವಿಸಿದೆ' ಎಂದು ತಿಳಿಸಿದ್ದಾರೆ.

'ಅಸಿಟೊಫಿನೊನ್ ಎಂಬುದು ಕೈಗಾರಿಕೆಗಳಲ್ಲಿ ಬಳಸುವ ಸಾಮಾನ್ಯ ರಾಸಾಯನಿಕವಾಗಿದೆ. ಅತ್ಯಂತ ಅಪಾಯಕಾರಿ ಹಾಗೂ ಸುಧಾರಿತ ಸ್ಫೋಟಕ 'ಅಸಿಟೋನ್ ಪರಾಕ್ಸೈಡ್'ಗೆ ಅಸಿಟೊಫಿನೊನ್ ಪ್ರಮುಖ ಮೂಲ ವಸ್ತುವಾಗಿದೆ. ಇವೆರಡನ್ನು ಮಿಶ್ರಣವಾದ ವೇಳೆ ಹೊರಗಿನ ತೀವ್ರವಾದ ಶಾಖ, ಬೆಳಕಿಗೆ ತಾಗಿದ ವೇಳೆ ಅಥವಾ 'ಸಲ್ಫರಿಕ್ ಆ್ಯಸಿಡ್'ನಿಂದ ಸಂಭಾವ್ಯ ಹೊಗೆ ಉಂಟಾದ ವೇಳೆ ಅವಧಿಗೂ ಮುನ್ನವೇ ಸ್ಫೋಟಗೊಳ್ಳುತ್ತದೆ. ನೌಗಾಮ್ ಠಾಣೆಯಲ್ಲಿಯೂ ಇದೇ ರೀತಿ ಸಂಭವಿಸಿರುವ ಸಾಧ್ಯತೆಯಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಚುನಾವಣಾ ಆಯೋಗವು ತಮಿಳುನಾಡಿನಲ್ಲಿ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವಿರೋಧಿಸಿ ತಮಿಳಗ ವೆಟ್ರಿ ಕಳಗಂ ಪಕ್ಷದ ಕಾರ್ಯಕರ್ತರು ಚೆನ್ನೈನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

19 ಅಥವಾ 20ರಂದು ನಿತೀಶ್ ಪ್ರಮಾಣ

ಒಂದನೇ ಪುಟದಿಂದ...

'ರಾಜಭವನದ ಬದಲಾಗಿ, ಐತಿಹಾಸಿಕ ಗಾಂಧಿ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ಆಯೋಜಿಸುವ ಸಾಧ್ಯತೆ ಇದೆ' ಎಂದೂ ತಿಳಿಸಿವೆ.

ಸಂಪುಟ ಸಭೆ: ನಿತೀಶ್ ಕುಮಾರ್ ಅವರು ಸೋಮವಾರ ಸಚಿವ ಸಂಪುಟ ಸಭೆ ಕರೆದಿದ್ದು, 17ನೇ ವಿಧಾನಸಭೆಯನ್ನು ವಿಸರ್ಜಿಸುವ ಕುರಿತು ಅವರು ಶಿಫಾರಸು ಮಾಡಲಿದ್ದಾರೆ. ಸಭೆ ಬಳಿಕ ಅವರು, ರಾಜಭವನಕ್ಕೆ ತೆರಳಿ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸುವರು ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ಹೇಳಿವೆ.

ನೀತಿ ಸಂಹಿತೆ ಅಂತ್ಯ: ಬಿಹಾರ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ಚುನಾವಣಾ ಆಯೋಗವು ರಾಜ್ಯಪಾಲರಿಗೆ ಸಲ್ಲಿಸಿದೆ. ಇದರೊಂದಿಗೆ ಮಾದರಿ ನೀತಿ ಸಂಹಿತೆ ಭಾನುವಾರ ಕೊನೆಗೊಂಡಿತು.

ಪ್ರಸಕ್ತ ವಿಧಾನಸಭೆ ಅವಧಿಯು ನವೆಂಬರ್ 22ಕ್ಕೆ ಕೊನೆಗೊಳ್ಳಲಿದೆ.

ಅಧಿಕಾರ ಹಂಚಿಕೆ ಸೂತ್ರವೂ ಸಿದ್ಧ

ಅಧಿಕಾರ ಹಂಚಿಕೆ ಕುರಿತಂತೆ ದೆಹಲಿ ಮಟ್ಟದಲ್ಲಿ ಬಿಜೆಪಿ ಹಾಗೂ ಜೆಡಿಯು ನಡುವೆ ಗೊಂದಲ ಮನೆ ಮಾಡಿದ್ದು, ಮಾತುಕತೆಗಳು ನಡೆದಿವೆ ಎಂದು ಮೂಲಗಳು ಹೇಳಿವೆ.

ಮತ್ತೊಂದೆಡೆ, ಅಧಿಕಾರ ಹಂಚಿಕೆಗೆ ಸಂಬಂಧಿಸಿ ಸೂತ್ರವೊಂದು ಕೂಡ ಸಿದ್ಧವಾಗಿದೆ. ಪ್ರತಿ ಆರು ಜನ ಶಾಸಕರಿಗೆ ಒಬ್ಬರು ಮಂತ್ರಿಯಂತೆ ಸಂಪುಟ ರಚಿಸಲು ನಿರ್ಧರಿಸಲಾಗಿದೆ ಎಂದು ಇವೇ ಮೂಲಗಳು ಹೇಳಿವೆ.

ಈ ಸೂತ್ರದ ಪ್ರಕಾರ, ಬಿಜೆಪಿಯಿಂದ 15 ಸಚಿವರು ಇರಲಿದ್ದರೆ, ಜೆಡಿಯು–14, ಎಲ್‌ಜೆಪಿ–3 ಹಾಗೂ ಎಚ್‌ಎಎಂ ಹಾಗೂ ಆರ್‌ಎಲ್‌ಎಂ ಪಕ್ಷಗಳು ತಲಾ ಒಬ್ಬರು ಸಚಿವರನ್ನು ಹೊಂದಲಿವೆ ಎಂದು ಎನ್‌ಡಿಎದ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ.

ಬಿಜೆಪಿ ಹಾಗೂ ಜೆಡಿಯು ಕ್ರಮವಾಗಿ 89 ಹಾಗೂ 85 ಶಾಸಕರನ್ನು ಹೊಂದಿವೆ. ಎಲ್‌ಜೆಪಿ (ಆರ್)–19, ಎಚ್‌ಎಎಂ–5 ಹಾಗೂ ಆರ್‌ಎಲ್‌ಎಂ ಪಕ್ಷ 4 ಸ್ಥಾನಗಳಲ್ಲಿ ಗೆದ್ದಿದೆ. 243 ಸದಸ್ಯ ಬಲದ ಬಿಹಾರ ವಿಧಾನಸಭೆಯಲ್ಲಿ ಎನ್‌ಡಿಎ 202 ಶಾಸಕರನ್ನು ಹೊಂದಿದೆ.

ಎಸ್‌ಸಿ ಮೀಸಲಾತಿ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಗವಾಯಿ ಪ್ರತಿಪಾದನೆ

'ಕೆನೆಪದರ ನೀತಿ ಅನ್ವಯ ಅಗತ್ಯ'

ಅಮರಾವತಿ(ಆಂಧ್ರಪ್ರದೇಶ) (ಪಿಟಿಐ): 'ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ನೀಡುವ ವೇಳೆ ಕೆನೆಪದರ ನೀತಿಯನ್ನು ಅನ್ವಯಿಸಬೇಕು. ಇದನ್ನು ಈಗಲೂ ನಾನು ಬೆಂಬಲಿಸುತ್ತೇನೆ' ಎಂದು ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ಭಾನುವಾರ ಹೇಳಿದ್ದಾರೆ.

'ಮೀಸಲಾತಿ ವಿಚಾರದಲ್ಲಿ, ಬಡ ಕೃಷಿ ಕೂಲಿಕಾರ್ಮಿಕನ ಮಕ್ಕಳು ಹಾಗೂ ಐಎಎಸ್ ಅಧಿಕಾರಿಯೊಬ್ಬನ ಮಕ್ಕಳನ್ನು ಸಮಾನವಾಗಿ ಕಾಣಲು ಸಾಧ್ಯ ಇಲ್ಲ' ಎಂದು ಪ್ರತಿಪಾದಿಸಿದ್ದಾರೆ.



> ದೇಶದಲ್ಲಿ ಸಮಾನತೆ ಹಾಗೂ ಮಹಿಳಾ ಸಬಲೀಕರಣ ಸಾಕಾರಗೊಳ್ಳುತ್ತಿದೆ. ಈ ವಿಚಾರದಲ್ಲಿ ತೋರಲಾಗುತ್ತಿರುವ ತಾರತಮ್ಯಕ್ಕೆ ಖಂಡನೆಯೂ ವ್ಯಕ್ತವಾಗುತ್ತಿದೆ
> **ಬಿ.ಆರ್.ಗವಾಯಿ,**
> ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ

ಇಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಇಂದ್ರಾ ಸಾಹ್ನಿ ವರ್ಸಸ್ ಕೇಂದ್ರ ಸರ್ಕಾರ ಪ್ರಕರಣದಲ್ಲಿ ಉಲ್ಲೇಖಿಸಲಾದ ಕೆನೆಪದರ ನೀತಿಯನ್ನು ಪ್ರಸ್ತಾಪಿಸಿ, ತಮ್ಮ ವಾದವನ್ನು ಸಮರ್ಥಿಸಿಕೊಂಡರು.

'ಈ ಪ್ರಕರಣದಲ್ಲಿ ಹೇಳಿರುವಂತೆ, ಒಬಿಸಿಗಳಿಗೆ ಮೀಸಲಾತಿ ನೀಡುವಾಗ ಕೆನೆಪದರ ನೀತಿಯನ್ನು ಅನ್ವಯಿಸಲಾಗುತ್ತಿದೆ. ಅದೇ ರೀತಿ ಪರಿಶಿಷ್ಟ ಜಾತಿಗಳಿಗೆ ನೀಡುವ ಮೀಸಲಾತಿಯಲ್ಲಿ ಕೂಡ ಈ ನೀತಿಯನ್ನು ಅನ್ವಯಿಸಬೇಕು. ಈ ವಿಚಾರವಾಗಿ ನಾನು ನೀಡಿದ ತೀರ್ಪಿಗೆ ವ್ಯಾಪಕ ಟೀಕೆಯೂ ವ್ಯಕ್ತವಾಗಿತ್ತು' ಎಂದು ತಿಳಿಸಿದರು.

'ಭಾರತದ ಸಂವಿಧಾನ ಸ್ಥಿರವಲ್ಲ. ಡಾ.ಬಿ.ಆರ್.ಅಂಬೇಡ್ಕರ್ ಯಾವಾಗಲೂ ಈ ಮಾತನ್ನು ಹೇಳುತ್ತಿದ್ದರು. ಸಂವಿಧಾನವು ವಿಕಾಸ ಹೊಂದುತ್ತಿರುವ, ಸುವ್ಯವಸ್ಥಿತವಾದ ಜೀವಂತ ದಾಖಲೆಯಾಗಿದೆ. ಸಂವಿಧಾನಕ್ಕೆ ತಿದ್ದುಪಡಿ ತರುವುದಕ್ಕೆ 368ನೇ ವಿಧಿಯಲ್ಲಿ ಅವಕಾಶ ಕಲ್ಪಿಸಲಾಗಿದೆ' ಎಂದು ಹೇಳಿದರು.

'ನಿವೃತ್ತಿಗೂ ಮುನ್ನ ನಾನು ಪಾಲ್ಗೊಳ್ಳುತ್ತಿರುವ ಕೊನೆಯ ಕಾರ್ಯಕ್ರಮ ಆಂಧ್ರಪ್ರದೇಶದ ಅಮರಾವತಿಯಲ್ಲಿ ನಡೆಯುತ್ತಿದೆ. ನಾನು ಮುಖ್ಯನ್ಯಾಯಮೂರ್ತಿಯಾಗಿ ಅಧಿಕಾರವಹಿಸಿಕೊಂಡ ಬಳಿಕ ಪಾಲ್ಗೊಂಡಿದ್ದ ಮೊದಲ ಕಾರ್ಯಕ್ರಮ ನನ್ನ ಸ್ವಂತ ಊರಾದ, ಮಹಾರಾಷ್ಟ್ರದ ಅಮರಾವತಿಯಲ್ಲಿ ನಡೆದಿತ್ತು' ಎಂದು ಹೇಳಿದರು.

ಈ ಹಿಂದೆಯೂ ಹೇಳಿದ್ದ ಸಿಜೆಐ: 'ಪರಿಶಿಷ್ಟ ಜಾತಿ (ಎಸ್‌ಸಿ) ಹಾಗೂ ಪರಿಶಿಷ್ಟ ಪಂಗಡಗಳಿಗೆ (ಎಸ್‌ಟಿ) ಮೀಸಲಾತಿ ನೀಡುವಾಗ ಕೆನೆಪದರು ಗುರುತಿಸುವುದಕ್ಕೆ ಸಂಬಂಧಿಸಿ ನೀತಿಯೊಂದರನ್ನು ರೂಪಿಸಬೇಕು. ಆ ಮೂಲಕ ಇದರ ವ್ಯಾಪ್ತಿಗೆ ಒಳಪಡುವವರಿಗೆ ಮೀಸಲಾತಿಯನ್ನು ನಿರಾಕರಿಸಬೇಕು ಎಂದು ಸಿಜೆಐ ಗವಾಯಿ ಅವರು ಕಳೆದ ವರ್ಷ ಹೇಳಿದ್ದರು.

'ಕಿಡ್ನಿ ದಾನದ ವಿಷಯದಲ್ಲೂ ಕೆಟ್ಟ ಆರೋಪ'

ಲಾಲೂ ಕುಟುಂಬ 'ಕದನ': ತೇಜಸ್ವಿ, ಆಪ್ತರಿಂದ ನಿಂದನೆ– ರೋಹಿಣಿ ಆಚಾರ್ಯ

ಪಟ್ನಾ (ಪಿಟಿಐ): ಆರ್‌ಜೆಡಿ ಅಧ್ಯಕ್ಷ ಲಾಲೂ ಕುಟುಂಬದ ಆಂತರಿಕ 'ಕದನ' ಮುಂದುವರಿದಿದ್ದು, 'ಸಹೋದರ ತೇಜಸ್ವಿ ಹಾಗೂ ಅವರ ಆಪ್ತರಾದ ರಾಜ್ಯಸಭಾ ಸದಸ್ಯ ಸಂಜಯ್ ಯಾದವ್ ಮತ್ತು ರಮೀಜ್ ನನ್ನನ್ನು ನಿಂದಿಸಿದ್ದಾರೆ' ಎಂದು ಲಾಲೂ ಪ್ರಸಾದ್ ಪುತ್ರಿ ರೋಹಿಣಿ ಆಚಾರ್ಯ ಅವರು ಆರೋಪಿಸಿದ್ದಾರೆ.



ರೋಹಿಣಿ ಆಚಾರ್ಯ

ರಾಜಕೀಯ ಮತ್ತು ಕುಟುಂಬವನ್ನು ತ್ಯಜಿಸುವುದಾಗಿ ಶನಿವಾರ ಘೋಷಿಸಿದ್ದ ಲಾಲೂ ಪ್ರಸಾದ್ ಕಿರಿಯ ಪುತ್ರಿ ರೋಹಿಣಿ, ಭಾನುವಾರವೂ ಸಾಮಾಜಿಕ ಜಾಲ ತಾಣದ ಮೂಲಕ ಹಲವು ಆರೋಪಗಳನ್ನು ಮಾಡಿದ್ದಾರೆ.

'ಕೋಟ್ಯಂತರ ರೂಪಾಯಿ ಹಣ ಮತ್ತು ಪಕ್ಷದ ಟಿಕೆಟ್‌ಗಾಗಿ ತನ್ನ ತಂದೆಗೆ ಕೊಳಕು ಮೂತ್ರಪಿಂಡವನ್ನು ನಾನು ದಾನ ಮಾಡಿದ್ದೇನೆ' ಎಂದು ಸಹೋದರ ತೇಜಸ್ವಿ ಯಾದವ್ ಅವರ ಆಪ್ತರು ಆರೋಪಿಸಿದ್ದಾರೆ ಮತ್ತು ನನ್ನನ್ನು ನಿಂದಿಸಿ, ಮನೆಯಿಂದ ಹೊರಗೆ ಹಾಕಿದ್ದಾರೆ' ಎಂದು ಆರೋಪಿಸಿದ್ದಾರೆ.

ಲಾಲೂ ಪ್ರಸಾದ್ ಅವರು ಮೂತ್ರಪಿಂಡದ ಸಮಸ್ಯೆ ಯಿಂದಾಗಿ ಬಳಲುತ್ತಿದ್ದಾಗ ರೋಹಿಣಿ ಅವರು ಮೂತ್ರಪಿಂಡವನ್ನು ದಾನ ಮಾಡಿದ್ದರು.

ರೋಹಿಣಿ ಹೇಳಿದ್ದೇನು?

- ತೇಜಸ್ವಿ, ಸಂಜಯ್ ಮತ್ತು ರಮೀಜ್ ಮನೆಯಿಂದ ಹೊರಹಾಕಿದ್ದಾರೆ
- ಯಾವ ಮಗಳಿಗೂ ಇಂಥ ಪರಿಸ್ಥಿತಿ ಬರದಿರಲಿ

'ವಿವಾಹಿತ ಮಹಿಳೆಯು ತನ್ನ ಪೋಷಕರನ್ನು ರಕ್ಷಿಸಲು ಏನನ್ನೂ ಮಾಡಬಾರದು. ಒಂದು ವೇಳೆ ಸಹೋದರರಿದ್ದರೆ ಅವರ ಅಥವಾ ಅವರ ಸ್ನೇಹಿತರ ಮೂತ್ರಪಿಂಡವನ್ನು ದಾನ ಮಾಡುವಂತೆ ಹೇಳಬೇಕು. ನನ್ನ ಪತಿ ಮತ್ತು ಅತ್ತೆಯ ಅನುಮತಿ ಪಡೆಯದೇ, ಮೂವರು ಮಕ್ಕಳ ಬಗ್ಗೆ ಯೋಚಿಸದೇ ನನ್ನ ಮೂತ್ರಪಿಂಡವನ್ನು ದಾನ ಮಾಡುವ ಮೂಲಕ ನಾನು ಪಾಪ ಮಾಡಿದ್ದೇನೆ. ಯಾವ ಹೆಣ್ಣುಮಕ್ಕಳಿಗೂ ಇಂಥ ಗತಿ ಬರದಿರಲಿ' ಎಂದು ರೋಹಿಣಿ ಹೇಳಿದರು.

'ವಿವಾಹಿತ ಮಹಿಳೆ ಮತ್ತು ಒಬ್ಬಳು ತಾಯಿ ಎನ್ನುವುದನ್ನೂ ಪರಿಗಣಿಸದೇ ನಿಂದಿಸಲಾಯಿತು ಮತ್ತು ನನ್ನ ಮೇಲೆ ಚಪ್ಪಲಿ ಎಸೆಯುವ ಪ್ರಯತ್ನ ನಡೆಯಿತು. ಆದ್ದರಿಂದ ನಾನು ನನ್ನ ತಾಯಿ ಮತ್ತು ಸಹೋದರಿಯರನ್ನು ತೊರೆದು ಮನೆಯಿಂದ ಹೊರಬರಬೇಕಾಯಿತು' ಎಂದು ಆರೋಪಿಸಿದರು.

'ನಾನು ಅನಾಥಳಾಗಿದ್ದೇನೆ. ಯಾವ ಮನೆಯಲ್ಲೂ ರೋಹಿಣಿಯಂಥ ಹಣೆಬರಹ ಹೊಂದಿರುವ ಮಗಳು ಅಥವಾ ಸಹೋದರಿ ಜನಿಸದಿರಲಿ ಎಂದು ಬಯಸುತ್ತೇನೆ' ಎಂದು ಬೇಸರ ವ್ಯಕ್ತಪಡಿಸಿದರು.

ಬಿಹಾರ ಚುನಾವಣೆಯಲ್ಲಿ ಪಕ್ಷದ ಹೀನಾಯ ಸೋಲಿಗೆ ಯಾರಾದರೂ ಹೊಣೆ ಹೊತ್ತುಕೊಳ್ಳಬೇಕು ಎಂದು ಸೂಚಿಸಿರುವುದೇ ಕುಟುಂಬದೊಳಗಿನ ಕದನಕ್ಕೆ ಕಾರಣ ಎಂದು ರೋಹಿಣಿ ಶನಿವಾರ ಸುಳಿವು ನೀಡಿದ್ದರು.

ಸಂಜಯ್ ಮತ್ತು ರಮೀಜ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದ ರೋಹಿಣಿ. 'ಚಾಣಕ್ಯನಂತೆ ಕಾರ್ಯತಂತ್ರ ರೂಪಿಸುತ್ತೇವೆ ಎಂದವರು ತಳಮಟ್ಟದ ಕಾರ್ಯಕರ್ತರ ಅಭಿಪ್ರಾಯವನ್ನು ಪರಿಗಣಿಸಲಿಲ್ಲ' ಎಂದರು.

ರಮೀಜ್ ವಿರುದ್ಧ ಪೋಸ್ಟ್ ಹಾಕಿರುವ ರೋಹಿಣಿ, 'ರಮೀಜ್ ಕ್ರಿಮಿನಲ್ ಬುದ್ಧಿಯ ಗ್ಯಾಂಗ್‌ಸ್ಟರ್, ಸಂಜಯ್ ಯಾದವ್ ಪರ ಕೆಲಸ ಮಾಡುವ ಕೊಲೆ ಆರೋಪಿ' ಎಂದು ಟೀಕಿಸಿದ್ದಾರೆ.

ಅರಳಿದ ಪ್ರವಾಸಿಗರು; ಉರುಳಿದ ಆತಿಥೇಯರು

15 ವರ್ಷಗಳ ನಂತರ ಭಾರತದಲ್ಲಿ ಟೆಸ್ಟ್ ಪಂದ್ಯ ಗೆದ್ದ ದಕ್ಷಿಣ ಆಫ್ರಿಕಾ • ಸಿಮೊನ್ ಹಾರ್ಮರ್ ಪರಿಣಾಮಕಾರಿ ದಾಳಿ

• ಮಧು ಜವಳಿ

ಕೋಲ್ಕತ್ತ: ಈಡನ್ ಗಾರ್ಡನ್‌ನಲ್ಲಿ ಭಾನುವಾರ ಕೇಶವ್ ಮಹಾರಾಜ್ ಎಸೆತವನ್ನು ಆಡಲು ಯತ್ನಿಸಿದ ಮೊಹಮ್ಮದ್ ಸಿರಾಜ್ ಬ್ಯಾಟ್ ಅಂಚಿಗೆ ಸವರಿದ ಚೆಂಡು ಸ್ಲಿಪ್‌ನಲ್ಲಿದ್ದ ಏಡನ್ ಮರ್ಕರಂ ಬೊಗಸೆಯಲ್ಲಿ ಬಂದಿಯಾಯಿತು. ಆಗ ಕ್ರೀಡಾಂಗಣದಲ್ಲಿ ನೀರವ ಮೌನ ಆವರಿಸಿತು. ಕತ್ತುನೋವಿನಿಂದಾಗಿ ಶನಿವಾರವೇ ಆಸ್ಪತ್ರೆ ಸೇರಿದ್ದ ನಾಯಕ ಶುಭಮನ್ ಗಿಲ್ ಅವರು ಮೂರನೇ ದಿನದಾಟದಲ್ಲಿ ಬ್ಯಾಟಿಂಗ್ ಮಾಡುವುದಿಲ್ಲ ಎಂಬುದು ಖಚಿತವಾಗುತ್ತಿದ್ದಂತೆ ಸ್ತಬ್ಧವಾಯಿತು.

15 ವರ್ಷಗಳ ನಂತರ ಭಾರತದ ನೆಲದಲ್ಲಿ ಟೆಸ್ಟ್ ಜಯಿಸಿದ ದಕ್ಷಿಣ ಆಫ್ರಿಕಾ ಆಟಗಾರರ ಸಂಭ್ರಮದ ಚಪ್ಪಾಳೆ, ಕೇಕೆಗಳಷ್ಟೇ ಪ್ರತಿಧ್ವನಿಸಿದವು. ಪ್ರವಾಸಿ ತಂಡವು ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಪಡೆಯಿತು.


ತೆಂಬಾ ಬವುಮಾ ಬಳಗವು ನೀಡಿದ್ದ 124 ರನ್‌ಗಳ ಗುರಿಯನ್ನು ಮುಟ್ಟುವ ಹಾದಿಯಲ್ಲಿ ಆತಿಥೇಯ ತಂಡವು 93 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. 30 ರನ್‌ಗಳ ಸೋಲು ಅನುಭವಿಸಿತು. ಬಲಗೈ ಆಫ್‌ಬ್ರೇಕ್ ಬೌಲರ್ ಸಿಮೊನ್ ಹಾರ್ಮರ್ (21ಕ್ಕೆ4) ಅವರ ದಾಳಿಗೆ ತತ್ತರಿಸಿತು. ಹಾರ್ಮರ್ ಮೊದಲ ಇನಿಂಗ್ಸ್‌ನಲ್ಲಿಯೂ 30ಕ್ಕೆ4 ವಿಕೆಟ್ ಗಳಿಸಿದ್ದರು.

ದಕ್ಷಿಣ ಆಫ್ರಿಕಾ ತಂಡದ ಪ್ರಮುಖ ಸ್ಪಿನ್ನರ್ ಕೇಶವ್ ಮಹಾರಾಜ್ ಪಂದ್ಯದಲ್ಲಿ ಕೊನೆಯ ಎರಡು ವಿಕೆಟ್ ಕಬಳಿಸುವ ಮೂಲಕ ಸಂಭ್ರಮಿಸಿದರು. ಭಾರತದ ವಾಷಿಂಗ್ಟನ್ ಸುಂದರ್ (31 ರನ್) ಮಾತ್ರ ಒಂದಿಷ್ಟು ಹೋರಾಟ ತೋರಿದರು. ಆದರೆ ಉಳಿದ ವಿಕೆಟ್‌ಗಳು 'ಇಸ್ಪೀಟ್ ಕಾರ್ಡ್‌ಗಳ ಮನೆ'ಯಂತೆ ಉರುಳಿದವು. ಮೊದಲ ಇನಿಂಗ್ಸ್‌ನಲ್ಲಿ ಕೆ.ಎಲ್. ರಾಹುಲ್ ಮತ್ತು ವಾಷಿಂಗ್ಟನ್ ಹಾಗೂ ಎರಡನೇ ಇನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾದ ತೆಂಬಾ ಬವುಮಾ ಮತ್ತು ಕಾರ್ಬಿನ್ ಬಾಷ್ ಅವರ ಪುಟ್ಟ ಜೊತೆಯಾಟಗಳೂ ದೊಡ್ಡ ಜಯದ ಸಾಧ್ಯತೆ ಸೃಷ್ಟಿಸಬಲ್ಲವು ಎಂಬುದನ್ನು ತೋರಿಸಿಕೊಟ್ಟ ಪಂದ್ಯ ಇದು.

ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 30 ರನ್‌ಗಳ ಮುನ್ನಡೆ ಸಾಧಿಸಿತ್ತು. ಎರಡನೇ ದಿನದಾಟದಲ್ಲಿ ದಕ್ಷಿಣ ಆಫ್ರಿಕಾ 93 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು. ಕ್ರೀಸ್‌ನಲ್ಲಿ ಲಂಗರು ಹಾಕಿದ್ದ ಬವುಮಾ ಮತ್ತು ಬಾಷ್ ಭಾನುವಾರ ಬೆಳಗಿನ ಅವಧಿಯಲ್ಲಿ ಜಿಗುಟುತನ ತೋರಿದರು. ಯರ್ರಾಬಿರ್ರಿ ತಿರುಗುತ್ತಿದ್ದ ಚೆಂಡನ್ನು ದಂಡಿಸಿ ಒಂದಿಷ್ಟು ರನ್ ಗಳಿಸಿದರು. ಅದರಿಂದಾಗಿ ದಕ್ಷಿಣ ಆಫ್ರಿಕಾ ತಂಡಕ್ಕೆ 53 ಓವರ್‌ಗಳಲ್ಲಿ 153 ರನ್ ಗಳಿಸಲು ಸಾಧ್ಯವಾಯಿತು. ನಾಯಕನಿಗೆ ತಕ್ಕ ಆಟವಾಡಿದ ತೆಂಬಾ ಪಂದ್ಯದಲ್ಲಿ ಅರ್ಧಶತಕ ಗಳಿಸಿದ ಏಕೈಕ ಆಟಗಾರನಾದರು.

ಹಂಗಾಮಿ ನಾಯಕ ರಿಷಭ್ ಪಂತ್ ಅವರು ಬೆಳಿಗ್ಗೆಯ ಅವಧಿಯಲ್ಲಿ ಎಲ್ಲ ಸ್ಪಿನ್ನರ್‌ಗಳನ್ನು ಕಣಕ್ಕಿಳಿಸಿ ಬೌಲಿಂಗ್ ಮಾಡಿಸಿದರೂ ಪ್ರಯೋಜನವಾಗಲಿಲ್ಲ. ಕಣಕ್ಕಿಳಿದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರ ಎಸೆತದಲ್ಲಿ ಬಾಷ್, ಕ್ಲೀನ್ ಬೌಲ್ಡ್ ಆಗುವ ಮೂಲಕ ಜೊತೆಯಾಟ ಮುರಿಯಿತು. ತಡವಾಗಿ ದಾಳಿಗಿಳಿದ ಸಿರಾಜ್ ಕೂಡ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ಸತತ ಎರಡು ಓವರ್‌ಗಳಲ್ಲಿ ಉಳಿದೆರಡೂ ವಿಕೆಟ್ ಪಡೆದು ಇನಿಂಗ್ಸ್‌ಗೆ ತೆರೆಯೆಳೆದರು. ಐತಿಹಾಸಿಕ ಕ್ರೀಡಾಂಗಣದಲ್ಲಿ ಸೇರಿದ್ದ 35 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರ ಕಲರವ ಮುಗಿಲುಮುಟ್ಟಿತ್ತು.

ಆದರೆ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡಿದ್ದ ಈ ಪಿಚ್‌ನಲ್ಲಿ ಸಾಧಾರಣ ಮೊತ್ತವೂ ಕಬ್ಬಿಣದ ಕಡಲೆಯೇ ಆಗಿತ್ತು. ಬ್ಯಾಟರ್ ಗಿಲ್ ಅವರಿಲ್ಲದೇ ತಂಡವು ಕಣಕ್ಕಿಳಿಯಿತು. ಮೊದಲ ಓವರ್‌ನಲ್ಲಿ ಎಡಗೈ ವೇಗಿ ಮಾರ್ಕೊ ಯಾನ್ಸೆನ್ ಎಸೆತದಲ್ಲಿ ಯಶಸ್ವಿ ಜೈಸ್ವಾಲ್ ಅವರ ಕ್ಯಾಚ್ ಪಡೆದ ವಿಕೆಟ್‌ಕೀಪರ್ ಕೈಲ್ ವೆರೆಯನ್ ಸಂಭ್ರಮಿಸಿದರು. ಸ್ಕೋರ್ ಬೋರ್ಡ್‌ನಲ್ಲಿ ಸೊನ್ನೆ ಇತ್ತು. ಪ್ರೇಕ್ಷಕರ ಗ್ಯಾಲರಿಯಲ್ಲಿ ನೀರವ ಮೌನ ಆವರಿಸಿತ್ತು. ಮೂರನೇ ಓವರ್‌ನಲ್ಲಿ ಮಾರ್ಕೊ ಹಾಕಿದ ಎಸೆತವನ್ನು ಆಡಲು ಯತ್ನಿಸಿದ ರಾಹುಲ್ ಬ್ಯಾಟ್ ಮೇಲಿನ ಅಂಚಿಗೆ ಬಡಿದ ಚೆಂಡು ವಿಕೆಟ್‌ಕೀಪರ್ ಕೈಗವಸುಗಳಲ್ಲಿ ಸೇರಿಯಾಯಿತು. 10 ರನ್‌ಗಳಿಗೆ 2 ವಿಕೆಟ್‌ಗಳನ್ನು ಕಳೆದುಕೊಂಡ ತಂಡ ಆತಂಕಕ್ಕೊಳಗಾಯಿತು. ಜುರೇಲ್ ಕೆಟ್ಟ ಹೊಡೆತವಾಡಿ ಔಟಾದರು. ಪಂತ್ ಬೌಲರ್ ಹಾರ್ಮರ್‌ಗೆ ಸುಲಭ ಕ್ಯಾಚ್ ಕೊಟ್ಟು ನಿರ್ಗಮಿಸಿದರು. ಇದರಿಂದ ಭಾರತದ ಸಂಕಷ್ಟ ಮತ್ತಷ್ಟು ಹೆಚ್ಚಿತು. ತಾಳ್ಮೆಯಿಂದ ಆಡಿ ಇನಿಂಗ್ಸ್‌ಗೆ ಬಲ ತುಂಬುವ ರವೀಂದ್ರ ಜಡೇಜ ಪ್ರಯತ್ನಕ್ಕೆ ಹಾರ್ಮರ್ ಅಡ್ಡಿಯಾದರು. ಅವರ ಎಸೆತವನ್ನು ಸ್ವೀಪ್ ಮಾಡುವ ಭರದಲ್ಲಿ ಜಡೇಜ (18 ರನ್) ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ವಾಷಿಂಗ್ಟನ್ ಅವರು ಏಡನ್ ಮರ್ಕರಂ ಎಸೆತದಲ್ಲಿ ಹಾರ್ಮರ್‌ಗೆ ಕ್ಯಾಚಿತ್ತರು. ಅಕ್ಷರ್ ಪಟೇಲ್ (26 ರನ್) ಹೋರಾಟಕ್ಕೆ ಜೊತೆ ನೀಡುವವರ ಕೊರತೆ ಕಾಡಿತು.



ನಾಲ್ಕು ವಿಕೆಟ್ ಪಡೆದ ಸಿಮೊನ್ ಹಾರ್ಮರ್

ಭಾರತ ತಂಡ ಕಡಿಮೆ ಮೊತ್ತದ ಗುರಿ ಬೆನ್ನಟ್ಟಿ ವಿಫಲವಾದ ಸಂದರ್ಭಗಳು

ಗುರಿ	ಎದುರಾಳಿ	ತಾಣ	ವರ್ಷ
120	ವೆಸ್ಟ್ ಇಂಡೀಸ್	ಬ್ರಿಡ್ಜ್‌ಟೌನ್	1997
124	ದಕ್ಷಿಣ ಆಫ್ರಿಕಾ	ಈಡನ್ ಗಾರ್ಡನ್	2025
147	ನ್ಯೂಜಿಲೆಂಡ್	ವಾಂಖೆಡೆ	2024
176	ಶ್ರೀಲಂಕಾ	ಗಾಲೆ	2015
193	ಇಂಗ್ಲೆಂಡ್	ಲಾರ್ಡ್ಸ್	2025

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ: 159 (55 ಓವರ್‌ಗಳಲ್ಲಿ)

ಭಾರತ: 189 (62.2 ಓವರುಗಳಲ್ಲಿ)

ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 153 (54 ಓವರ್‌ಗಳಲ್ಲಿ) (ಶನಿವಾರ 7 ವಿಕೆಟ್‌ಗೆ 93)

ಬವುಮಾ ಔಟಾಗದೇ 55 (136ಎ, 4x4)
ಕಾರ್ಬಿನ್ ಬಿ ಬೂಮ್ರಾ 25 (37ಎ, 4x2, 6x1)
ಸಿಮೊನ್ ಸಿ ಸಿರಾಜ್ 7 (20ಎ)
ಮಹಾರಾಜ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 0 (3ಎ)
ಇತರೆ: 11 (ಲೆಗ್‌ಬೈ 11)
ವಿಕೆಟ್ ಪತನ: 8-135 (ಕಾರ್ಬಿನ್ ಬಾಷ್, 47.1), 9-153 (ಸಿಮೊನ್ ಹಾರ್ಮರ್, 53.3), 10-153 (ಕೇಶವ್ ಮಹಾರಾಜ್, 53.6)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–2–24–1; ಅಕ್ಷರ್ ಪಟೇಲ್ 14–0–36–1, ಕುಲದೀಪ್ ಯಾದವ್ 8–1–30–2, ರವೀಂದ್ರ ಜಡೇಜ 20–3–50–4, ಮೊಹಮ್ಮದ್ ಸಿರಾಜ್ 2–0–2–2

ಭಾರತ: 93 (35 ಓವರ್‌ಗಳಲ್ಲಿ)

ಜೈಸ್ವಾಲ್ ಸಿ ವೆರೆಯೆನ್ ಬಿ ಯಾನ್ಸೆನ್ 0 (4ಎ)
ರಾಹುಲ್ ಸಿ ವೆರೆಯನ್ ಬಿ ಯಾನ್ಸೆನ್ 1 (6ಎ)
ವಾಷಿಂಗ್ಟನ್ ಸಿ ಸಿಮೋನ್ ಬಿ ಮರ್ಕರಂ 31 (92ಎ, 4x2)
ಜುರೇಲ್ ಸಿ ಬಾಷ್ ಸಿ ಸಿಮೊನ್ 13 (34ಎ, 4x3)
ಪಂತ್ ಸಿ ಮತ್ತು ಬಿ ಸಿಮೊನ್ 2 (13ಎ)
ಜಡೇಜ ಎಲ್‌ಬಿಡಬ್ಲ್ಯು ಬಿ ಸಿಮೊನ್ 18 (26ಎ, 4x2)
ಅಕ್ಷರ್ ಸಿ ಬವುಮಾ ಸಿ ಮಹಾರಾಜ್ 26 (17ಎ, 4x1, 6x2)
ಕುಲದೀಪ್ ಎಲ್‌ಬಿಡಬ್ಲ್ಯು ಬಿ ಸಿಮೊನ್ 1 (13ಎ)
ಬೂಮ್ರಾ ಔಟಾಗದೇ 0 (4ಎ)
ಸಿರಾಜ್ ಸಿ ಮರ್ಕರಂ ಬಿ ಮಹಾರಾಜ್ 0 (1ಎ)
ಶುಭಮನ್ ಗಿಲ್ (ಗಾಯಾಳು)
ಇತರೆ: 1 (ಲೆಗ್‌ಬೈ 1)
ವಿಕೆಟ್ ಪತನ: 1-0 (ಯಶಸ್ವಿ ಜೈಸ್ವಾಲ್, 0.4), 2-1 (ಕೆ.ಎಲ್.ರಾಹುಲ್, 2.1), 3-33 (ಧ್ರುವ್ ಜುರೇಲ್, 14.6), 4-38 (ರಿಷಭ್ ಪಂತ್, 19.4), 5-64 (ರವೀಂದ್ರ ಜಡೇಜ, 27.1), 6-72 (ವಾಷಿಂಗ್ಟನ್ ಸುಂದರ್, 30.2), 7-77 (ಕುಲದೀಪ್ ಯಾದವ್, 33.2), 8-93 (ಅಕ್ಷರ್ ಪಟೇಲ್, 34.5), 9-93 (ಮೊಹಮ್ಮದ್ ಸಿರಾಜ್, 34.6)
ಬೌಲಿಂಗ್: ಮಾರ್ಕೊ ಯಾನ್ಸೆನ್ 7–3–15–2; ಸಿಮೊನ್ 14–4–21–4; ಮಹಾರಾಜ್ 9–1–37–2, ಕಾರ್ಬಿನ್ ಬಾಷ್ 2–0–14–0, ಏಡನ್ ಮರ್ಕರಂ 3–0–5–1
ಪಂದ್ಯದ ಆಟಗಾರ: ಸಿಮೊನ್ ಹಾರ್ಮರ್ (51ಕ್ಕೆ 8)

ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 30 ರನ್ ಜಯ, ಸರಣಿ 1–0 ಮುನ್ನಡೆ

ಬ್ಯಾಟರ್‌ಗಳ ಕೌಶಲ ಪ್ರಶ್ನಿಸಿದ ಗೌತಮ್ ಗಂಭೀರ್

ಕೋಲ್ಕತ್ತ: ಗೌತಮ್ ಗಂಭೀರ್ ಅವರು ಮುಖ್ಯ ಕೋಚ್ ಸ್ಥಾನಕ್ಕೆ ನೇಮಕವಾದ ಮೇಲೆ ಭಾರತ ತಂಡವು ವೈಟ್ ಬಾಲ್ ಕ್ರಿಕೆಟ್‌ನಲ್ಲಿ ಮಿಂಚುತ್ತಿದೆ. ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾಗಳಲ್ಲಿ ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಗಳಲ್ಲಿ ತಂಡವು ಜಯ ದಾಖಲಿಸಿದೆ. ಚಾಂಪಿಯನ್ಸ್ ಟ್ರೋಫಿ (ಏಕದಿನ) ಮತ್ತು ಏಷ್ಯಾ ಕಪ್ (ಟಿ20) ಕೂಡ ಜಯಿಸಿದೆ.

ಆದರೆ ಕೆಂಪು ಚೆಂಡಿನ ಕ್ರಿಕೆಟ್ ಪಯಣ ಮಾತ್ರ ಅದೇ ರೀತಿಯಾಗಿಲ್ಲ. ಕೆಳ ಕ್ರಮಾಂಕದಲ್ಲಿರುವ ಬಾಂಗ್ಲಾದೇಶ ಮತ್ತು ವೆಸ್ಟ್ ಇಂಡೀಸ್ ತಂಡಗಳ ಎದುರು ಭಾರತ ಟೆಸ್ಟ್ ಸರಣಿಗಳಲ್ಲಿ ಗೆದ್ದಿದೆ. ಆದರೆ ನ್ಯೂಜಿಲೆಂಡ್ (3–0) ಎದುರು ತವರಿನಲ್ಲಿ ಮತ್ತು ಆಸ್ಟ್ರೇಲಿಯಾದಲ್ಲಿ (3–1) ಭಾರತ ಸರಣಿಗಳನ್ನು ಸೋತಿತ್ತು. ಇಂಗ್ಲೆಂಡ್‌ನಲ್ಲಿ ಐದು ಟೆಸ್ಟ್‌ಗಳ ಸರಣಿಯಲ್ಲಿ 2–2ರ ಡ್ರಾ ಸಾಧಿಸಿತ್ತು. ಇದೀಗ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಪಂದ್ಯ ಸೋತಿದೆ. ಗಂಭೀರ್ ನೇಮಕದ ನಂತರ ತಂಡವು ತವರಿನಲ್ಲಿ ಆಡಿದ ಆರು ಟೆಸ್ಟ್‌ಗಳಲ್ಲಿ ನಾಲ್ಕರಲ್ಲಿ ಸೋತಿದೆ. ಭಾನುವಾರ ದಕ್ಷಿಣ ಆಫ್ರಿಕಾ ಎದುರು ಸೋತ ನಂತರ ಸುದ್ದಿಗೋಷ್ಠಿಯಲ್ಲಿ ಗಂಭೀರ್ ಆಡಿದ ಮಾತುಗಳು ಒಗಟಿನಂತೆ ಇದ್ದವು. ಸ್ಪಷ್ಟತೆ ಕಡಿಮೆ ಇತ್ತು.

'ಪ್ರಸ್ತುತ ಡ್ರೆಸಿಂಗ್ ಕೋಣೆಯಲ್ಲಿರುವ ಬ್ಯಾಟರ್‌ಗಳಿಗೆ ಹೆಚ್ಚಿನ ಅನುಭವ ಇಲ್ಲ' ಎಂದರು. ಆದರೆ ಅವರ ಈ ಮಾತಿನ ಹಿನ್ನೆಲೆಯಲ್ಲಿ ತಂಡವನ್ನು ಒಮ್ಮೆ ಅವಲೋಕಿಸಿದರೆ; ರವೀಂದ್ರ ಜಡೇಜ (87 ಪಂದ್ಯ), ಕೆ.ಎಲ್. ರಾಹುಲ್ (65), ರಿಷಭ್ ಪಂತ್ (47), ಯಶಸ್ವಿ ಜೈಸ್ವಾಲ್ (26), ವಾಷಿಂಗ್ಟನ್ ಸುಂದರ್ (15) ಮತ್ತು ಅಕ್ಷರ್ ಪಟೇಲ್ (13) ಅವರಂತಹ ಅನುಭವಿಗಳು ಇದ್ದಾರೆ.

'ಟೆಸ್ಟ್ ಕ್ರಿಕೆಟ್‌ನಲ್ಲಿ ಕೌಶಲಕ್ಕಿಂತ ಗಟ್ಟಿ ಮನೋಬಲ ಮುಖ್ಯವಾಗುತ್ತದೆ. ಚೆಂಡಿನ ತಿರುವು ಏನೇ ಇರಲಿ; ಇನಿಂಗ್ಸ್ ಆರಂಭದ 10–15 ನಿಮಿಷಗಳು ಮುಖ್ಯ. ಪರಿಸ್ಥಿತಿಗೆ ಹೊಂದಿಕೊಂಡ ಮೇಲೆ ಒತ್ತಡ ನಿರ್ವಹಿಸಲು ಸಾಧ್ಯವಾಗುತ್ತದೆ' ಎಂದು ಗಂಭೀರ್ ಹೇಳಿದರು. ಪಿಚ್ ತಮ್ಮ ಮನವಿಗೆ ತಕ್ಕಂತೆಯೇ ಸಿದ್ಧವಾಗಿತ್ತು ಎಂಬುದನ್ನು ಒಪ್ಪಿಕೊಂಡರು. ತಮ್ಮ ನಿರ್ಧಾರವನ್ನೂ ಸಮರ್ಥಿಸಿಕೊಂಡರು.



ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ನಾಯಕ ಶುಭಮನ್ ಗಿಲ್ ಪಿಟಿಐ ಚಿತ್ರಗಳು

'ಇದನ್ನು ಟರ್ನಿಂಗ್ ಟ್ರ್ಯಾಕ್ (ಸ್ಪಿನ್ ಸ್ನೇಹಿ) ಎಂದು ನೀವು ಕರೆಯಬಹುದು. ಆದರೆ ವಿಕೆಟ್ ಪಡೆದವರು ಯಾರು? ಹೆಚ್ಚು ವಿಕೆಟ್‌ಗಳು ಲಭಿಸಿದ್ದು ವೇಗಿಗಳಿಗೆ' ಎಂದರು. ಈ ಪಂದ್ಯದಲ್ಲಿ ಸ್ಪಿನ್ನರ್‌ಗಳು ಒಟ್ಟು 22 ಮತ್ತು ವೇಗಿಗಳು 16 ವಿಕೆಟ್ ಗಳಿಸಿದರು.

ಆಸ್ಪತ್ರೆಯಿಂದ ಗಿಲ್ ಬಿಡುಗಡೆ: ಶನಿವಾರ ತಮ್ಮ ಕುತ್ತಿಗೆಯ ಗಾಯದ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿದ್ದ ಶುಭಮನ್ ಗಿಲ್ ಅವರು ತಂಡಕ್ಕೆ ಮರಳಿದ್ದಾರೆ.

ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದ ಎರಡನೇ ದಿನದಾಟದಲ್ಲಿ ಗಿಲ್ ಅವರು ಬ್ಯಾಟಿಂಗ್ ಮಾಡುವಾಗ ಕುತ್ತಿಗೆಯ ಸ್ನಾಯುಸೆಳೆತದ ನೋವು ಅನುಭವಿಸಿದ್ದರು. ಅದರಿಂದಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಅವರನ್ನು ದಾಖಲಿಸಿದ್ದ ವುಡ್‌ಲ್ಯಾಂಡ್ಸ್ ಮಲ್ಟಿಸ್ಪೇಷಾಲಿಟಿ ಆಸ್ಪತ್ರೆಗೆ ಬಂಗಾಳ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಸೌರವ್ ಗಂಗೂಲಿ ಭೇಟಿ ನೀಡಿದರು. ಗಿಲ್ ಅವರ ಆರೋಗ್ಯದ ಕುರಿತು ಮಾಹಿತಿ ಪಡೆದರು.

ಶಾಹೀನ್ಸ್ ತಂಡಕ್ಕೆ ಮಣಿದ ಭಾರತ ಎ

ದೋಹಾ (ಪಿಟಿಐ): ಮಾಜ್ ಸದಾಕತ್ (ಔಟಾಗದೇ 79; 12ಕ್ಕೆ 2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಪಾಕಿಸ್ತಾನ ಶಾಹೀನ್ಸ್ ತಂಡವು ಭಾನುವಾರ ಏಷ್ಯಾ ಕಪ್ ರೈಸಿಂಗ್ ಸ್ಟಾರ್ ಕ್ರಿಕೆಟ್ ಟಿ20 ಟೂರ್ನಿಯ ಪಂದ್ಯದಲ್ಲಿ ಭಾರತ ತಂಡವನ್ನು ಎಂಟು ವಿಕೆಟ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ಶಾಹೀನ್ಸ್ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್ ಇಳಿದ ಭಾರತ ತಂಡವು ವೈಭವ್ ಸೂರ್ಯವಂಶಿ (45;28ಎ) ಅವರ ಬ್ಯಾಟಿಂಗ್ ನೆರವಿನಿಂದ 19 ಓವರ್‌ಗಳಲ್ಲಿ 136 ರನ್ ಗಳಿಸಿ ಆಲೌಟ್ ಆಯಿತು. ಸೂರ್ಯವಂಶಿ, ನಮನ್ ಧೀರ್ (35;20ಎ) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ನಿರಾಸೆ ಮೂಡಿಸಿದರು. ಶಾಹೀನ್ಸ್ ಇನ್ನೂ 40 ಎಸೆತ ಬಾಕಿ ಇರುವಂತೆ ಎರಡು ವಿಕೆಟ್‌ಗೆ 137 ರನ್ ಗಳಿಸಿ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್: ಭಾರತ ಎ: 19 ಓವರ್‌ಗಳಲ್ಲಿ 136 (ವೈಭವ್ ಸೂರ್ಯವಂಶಿ 45, ನಮನ್ ಧೀರ್ 35; ಶಾಹಿದ್ ಅಜೀಜ್ 24ಕ್ಕೆ 3, ಮಾಜ್ ಸದಾಕತ್ 12ಕ್ಕೆ 2). ಪಾಕಿಸ್ತಾನ ಶಾಹೀನ್ಸ್: 13.2 ಓವರ್‌ಗಳಲ್ಲಿ 2 ವಿಕೆಟ್‌ಗೆ 137 (ಮಾಜ್ ಸದಾಕತ್ ಔಟಾಗದೇ 79).

ಕೈಕುಲುಕದ ಆಟಗಾರರು: ಉಭಯ ತಂಡಗಳ ಆಟಗಾರರು ಈ ಪಂದ್ಯದಲ್ಲೂ ಹಸ್ತಲಾಘವ ಮಾಡಲಿಲ್ಲ. ರಾಷ್ಟ್ರಗೀತೆ ಮುಗಿದ ನಂತರ ಬೇರೆ ಬೇರೆ ದಾರಿಗಳಲ್ಲಿ ಉಭಯ ತಂಡಗಳ ಆಟಗಾರರು ಡ್ರೆಸಿಂಗ್ ಕೋಣೆಗೆ ತೆರಳಿದರು.

ಹೋದ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಆಡಿದ್ದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಟಾಸ್ ಸಂದರ್ಭದಲ್ಲಿ ಪಾಕಿಸ್ತಾನ ತಂಡದ ನಾಯಕ ಅಲಿ ಅಘಾ ಅವರ ಕೈಕುಲುಕಿರಲಿಲ್ಲ. ಪಹಲ್ಗಾಮ್ ಭಯೋತ್ಪಾದನಾ ದಾಳಿಯನ್ನು ಖಂಡಿಸಿ ಭಾರತ ತಂಡದ ಸದಸ್ಯರು ಪಾಕ್ ಆಟಗಾರರ ಕೈಕುಲುಕಿರಲಿಲ್ಲ. ಭಾರತ ಎ ತಂಡದ ನಾಯಕ ಜಿತೇಶ್ ಶರ್ಮಾ ಅವರೂ ಸೂರ್ಯಕುಮಾರ್ ಹಾದಿಯನ್ನು ಅನುಸರಿಸಿದರು. ಶಾಹೀನ್ಸ್ ನಾಯಕ ಇರ್ಫಾನ್ ಖಾನ್ ಅವರ ಕೈಕುಲುಕಲಿಲ್ಲ.

ಋತುರಾಜ್ ಮಿಂಚು: ನಿಶಾಂತ್ ಕೈಚಳಕ

ರಾಜ್‌ಕೋಟ್ (ಪಿಟಿಐ): ಋತುರಾಜ್ ಗಾಯಕವಾಡ (ಔಟಾಗದೇ 68;83ಎ, 4x9) ಅವರ ಅರ್ಧಶತಕ ಮತ್ತು ಬೌಲರ್‌ಗಳ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಭಾರತ ಎ ತಂಡವು ಭಾನುವಾರ ದಕ್ಷಿಣ ಆಫ್ರಿಕಾ ಎ ವಿರುದ್ಧದ ಎರಡನೇ 'ಏಕದಿನ' ಪಂದ್ಯದಲ್ಲಿ 9 ವಿಕೆಟ್‌ಗಳಿಂದ ಜಯ ಸಾಧಿಸಿತು.

ತಿಲಕ್ ವರ್ಮಾ ನಾಯಕತ್ವದ ಭಾರತ ಎ ತಂಡವು ಒಂದು ಪಂದ್ಯ ಬಾಕಿ ಇರುವಂತೆ ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಪಡೆದಿದೆ. ಕೊನೆಯ ಪಂದ್ಯ ಬುಧವಾರ ಇದೇ ತಾಣದಲ್ಲಿ ನಡೆಯಲಿದೆ.

ಟಾಸ್ ಗೆದ್ದ ಪ್ರವಾಸಿ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿ ಹರ್ಷಿತ್ ರಾಣಾ (21ಕ್ಕೆ 3) ಮತ್ತು ಸ್ಪಿನ್ನರ್ ನಿಶಾಂತ್ ಸಿಂಧು (16ಕ್ಕೆ 4) ಅವರ ದಾಳಿಗೆ ತತ್ತರಿಸಿದ ದಕ್ಷಿಣ ಆಫ್ರಿಕಾ ಎ ತಂಡವು 30.3 ಓವರ್‌ಗಳಲ್ಲಿ 132 ರನ್‌ಗಳಿಗೆ ಆಲೌಟ್ ಆಯಿತು.

ಸುಲಭ ಗುರಿಯನ್ನು ಬೆನ್ನಟ್ಟಿದ ಭಾರತ ಎ ತಂಡವು ಇನ್ನೂ 133 ಎಸೆತಗಳು ಬಾಕಿ ಇರುವಂತೆ ಒಂದು ವಿಕೆಟ್‌ಗೆ 135 ರನ್ ಗಳಿಸಿ ಜಯ ಸಾಧಿಸಿತು.



ಋತುರಾಜ್ ಗಾಯಕವಾಡ

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ ಎ: 30.3 ಓವರ್‌ಗಳಲ್ಲಿ 132 (ರಿವಾಲ್ಡೊ ಮೂನ್‌ಸಾಮಿ 33, ಹರ್ಷಿತ್ ರಾಣಾ 21ಕ್ಕೆ 3, ನಿಶಾಂತ್ ಸಿಂಧು 18ಕ್ಕೆ 4). ಭಾರತ ಎ: 27.5 ಓವರ್‌ಗಳಲ್ಲಿ 1 ವಿಕೆಟ್‌ಗೆ 135 (ಋತುರಾಜ್ ಗಾಯಕವಾಡ ಔಟಾಗದೇ 68, ಅಭಿಷೇಕ್ ಶರ್ಮಾ 32, ತಿಲಕ್ ವರ್ಮಾ ಔಟಾಗದೇ 29). ಫಲಿತಾಂಶ: ಭಾರತ ಎ ತಂಡಕ್ಕೆ 9 ವಿಕೆಟ್‌ಗಳ ಗೆಲುವು. ಪಂದ್ಯದ ಆಟಗಾರ: ನಿಶಾಂತ್ ಸಿಂಧು.



ರಾಜ್ಯಮಟ್ಟದ ಜೂನಿಯರ್ ಅಕ್ವೆಟಿಕ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದ ಪ್ರಶಸ್ತಿ ವಿಜೇತ ನೆಟ್ಟಕಲ್ಲಪ್ಪ ಈಜು ಕೇಂದ್ರ ತಂಡ. ಅಧ್ಯಯನ್ ಶಿರೋಳ, ನಿಹಾರ್ ರಾಜೇಶ್, ಚಿನ್ಮಯ್ ಪೈ, ಇನೇಶ್ ಶೆಣೈ, ಅಕ್ಷಯ್ ಕೃಷ್ಣ, ಧ್ಯಾನ್ ನಾಯ್ದು, ಭೂಷಿತ್ ಗೌಡ, ಕೃಶಾಲ್ ಅಕ್ಷಿತ್, ಸುದೀಕ್ಷ್ ದೀಪಕ್, ಆದಿತ್ಯ ಕೆ., ಎಸ್.ಎಸ್. ಶೇಷಾದ್ರಿ, ಮಹಾನ್ ಗೌಡ, ಇಶಾನ್ ಶೆಣೈ ಚಿತ್ರದಲ್ಲಿದ್ದಾರೆ

ವಾಟರ್‌ಪೋಲೊ: ಬಿಎಸಿ ಬಾಲಕಿಯರು ಚಾಂಪಿಯನ್

ನೆಟ್ಟಕಲ್ಲಪ್ಪ ಈಜು ಕೇಂದ್ರಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ನೆಟ್ಟಕಲ್ಲಪ್ಪ ಈಜು ಕೇಂದ್ರದ ಸ್ಪರ್ಧಿಗಳು ಭಾನುವಾರ ಇಲ್ಲಿ ಮುಕ್ತಾಯಗೊಂಡ ರಾಜ್ಯಮಟ್ಟದ ಜೂನಿಯರ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಎತ್ತಿ ಹಿಡಿದರು. ಬಾಲಕಿಯರ ವಿಭಾಗದಲ್ಲಿ ಬಸವನಗುಡಿ ಈಜು ಕೇಂದ್ರವು ಚಾಂಪಿಯನ್ ಆಯಿತು.

ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾಲಯದ ಈಜುಕೊಳದಲ್ಲಿ ರಾಜ್ಯ ಈಜು ಸಂಸ್ಥೆಯು ಆಯೋಜಿಸಿದ್ದ ಸ್ಪರ್ಧೆಯ ಬಾಲಕರ ವಿಭಾಗದ ಫೈನಲ್‌ನಲ್ಲಿ ನೆಟ್ಟಕಲ್ಲಪ್ಪ ಈಜು ಕೇಂದ್ರವು 14–11 ಗೋಲುಗಳ ಅಂತರದಿಂದ ಸ್ಟಾರ್ ಈಜು ಕೇಂದ್ರವನ್ನು ಮಣಿಸಿತು. 3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಬಸವನಗುಡಿ ಈಜು ಕೇಂದ್ರವು 23–10 ಗೋಲುಗಳಿಂದ ಸ್ವಿಮ್ ಲೈಫ್ ತಂಡವನ್ನು ಪರಾಭವಗೊಳಿಸಿತು.

ಬಾಲಕಿಯರ ಫೈನಲ್‌ನಲ್ಲಿ ಬಸವನಗುಡಿ ತಂಡವು 19–13 ಗೋಲುಗಳಿಂದ ನೆಟ್ಟಕಲ್ಲಪ್ಪ ಈಜು ಕೇಂದ್ರದ ವಿರುದ್ಧ ಜಯ ಸಾಧಿಸಿತು. 3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಸ್ವಿಮ್ ಲೈಫ್ ತಂಡವು 14–2 ಗೋಲುಗಳಿಂದ ಸೀ ವರ್ಲ್ಡ್ ಈಜು ಕೇಂದ್ರವನ್ನು ಸೋಲಿಸಿತು. ನೆಟ್ಟಕಲ್ಲಪ್ಪ ಈಜು ಕೇಂದ್ರದ ಅಧ್ಯಯನ್ ಶಿರೋಳ ಹಾಗೂ ಪ್ರವದಾ ಮಾಲತೇಶ ಅವರು ಕ್ರಮವಾಗಿ ಬಾಲಕರ ಹಾಗೂ ಬಾಲಕಿಯರ ವಿಭಾಗದಲ್ಲಿ ಉತ್ತಮ ಗೋಲ್‌ಕೀಪರ್ ಪ್ರಶಸ್ತಿ ಪಡೆದರು.

ಟೆನಿಸ್: ನೆದರ್ಲೆಂಡ್ಸ್‌ಗೆ ಮಣಿದ ಭಾರತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಟೆನಿಸ್ ತಂಡವು ಭಾನುವಾರ ಬಿಲ್ಲಿ ಜೀನ್ ಕಿಂಗ್ ಕಪ್ 'ಜಿ' ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ 0–3ರಿಂದ ನೆದರ್ಲೆಂಡ್ಸ್ ತಂಡಕ್ಕೆ ಮಣಿಯುವುದರೊಂದಿಗೆ ಈ ಬಾರಿಯ ಅಭಿಯಾನವನ್ನು ಮುಗಿಸಿತು.

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಆತಿಥೇಯ ತಂಡದ ಆಟಗಾರ್ತಿಯರಿಂದ ಸತತ ಎರಡನೇ ಪಂದ್ಯದಲ್ಲೂ ಸುಧಾರಿತ ಪ್ರದರ್ಶನ ಕಾಣಲಿಲ್ಲ. ವಾರಾಂತ್ಯದ ಪ್ರಯುಕ್ತ ಪಂದ್ಯ ಕಣ್ತುಂಬಿಕೊಳ್ಳಲು ಸೇರಿದ್ದ ತವರಿನ ನೂರಾರು ಪ್ರೇಕ್ಷಕರಿಗೂ ನಿರಾಸೆಯಾಯಿತು.

ಸ್ಲೊವೇನಿಯಾದ ವನಿತೆಯರ ತಂಡವು ತನ್ನೆರಡು ಪಂದ್ಯಗಳಲ್ಲಿ (ನೆದರ್ಲೆಂಡ್ಸ್ ಮತ್ತು ಭಾರತ ವಿರುದ್ಧ) ಗೆಲುವು ಸಾಧಿಸಿ ಕ್ವಾಲಿಫೈಯರ್ಸ್ ಹಂತಕ್ಕೆ ಟಿಕೆಟ್ ಪಡೆದಿದೆ. ಹೀಗಾಗಿ, ಭಾರತ– ಡಚ್ ತಂಡಗಳ ನಡುವಿನ ಹಣಾಹಣಿಗೆ ಹೆಚ್ಚಿನ ಮಹತ್ವ ಇರಲಿಲ್ಲ.

ಮೊದಲ ಸಿಂಗಲ್ಸ್‌ನಲ್ಲಿ ಡಚ್ ಆಟಗಾರ್ತಿ ಅನೌಕ್ ಕೋವರ್‌ಮನ್ಸ್ 6–2, 6–4ರಿಂದ ಭಾರತದ ಶ್ರೀವಲ್ಲಿ ಭಮಿಡಿಪಾಟಿ ಅವರನ್ನು ಮಣಿಸಿ, ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ಎರಡನೇ ಸಿಂಗಲ್ಸ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ 87ನೇ ಸ್ಥಾನದಲ್ಲಿರುವ ಸುಝಾನ್ ಲಮೆನ್ಸ್ 6–2, 6–3ರಿಂದ ಸಹಜಾ ಯಮಲಪಲ್ಲಿ ಅವರನ್ನು ಪ್ರಯಾಸವಿಲ್ಲದೆ ಹಿಮ್ಮೆಟ್ಟಿಸಿ ತಂಡಕ್ಕೆ ಗೆಲುವನ್ನು ಖಚಿತಪಡಿಸಿದರು.

ಡಬಲ್ಸ್ ಪಂದ್ಯದಲ್ಲಿ ಸುಜಾನ್ ಲಮೆನ್ಸ್ ಮತ್ತು ಡೆಮಿ ಶುರ್ಸ್ ಜೋಡಿ 6–1, 6–1ರಿಂದ ಅಂಕಿತಾ ರೈನಾ ಮತ್ತು ಪ್ರಾರ್ಥನಾ ಜಿ.ಟಿ. ಅವರನ್ನು ಮಣಿಸಿ, ಗೆಲುವಿನ ಅಂತರವನ್ನು ಹೆಚ್ಚಿಸಿತು.



ಭಾರತದ ಸಹಜಾ ಯಮಲಪಲ್ಲಿ ಅವರ ಫೋರ್‌ಹ್ಯಾಂಡ್ ಹೊಡೆತದ ಪರಿ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

THE WORLD CUP OF TENNIS BILLIE JEAN KING Cup

ಹರಿಕೃಷ್ಣ ಸವಾಲು ಅಂತ್ಯ

ಪಣಜಿ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಪೆಂಟಾಲ ಹರಿಕೃಷ್ಣ ಐದನೇ ಸುತ್ತಿನ ಟೈಬ್ರೇಕರಿನಲ್ಲಿ ಮೆಕ್ಸಿಕೊದ ಹೊಸೆ ಎಡ್ವರ್ಡೊ ಮಾರ್ಟಿನೆಝ್ ಅಲ್ಕಂತಾರ ಅವರಿಗೆ ಮಣಿದರು. ಇದರೊಂದಿಗೆ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕದ ಅರ್ಜುನ್ ಇರಿಗೇಶಿ ಅವರು ಭಾರತದ ಏಕೈಕ ಭರವಸೆಯಾಗಿ ಉಳಿದಿದ್ದಾರೆ.

ಪೆರು ಸಂಜಾತ ಮೆಕ್ಸಿಕೊದ 26 ವರ್ಷ ವಯಸ್ಸಿನ ಮಾರ್ಟಿನೆಝ್ ಅಲ್ಕಂತಾರ ಅವರು ಭಾನುವಾರ ನಡೆದ ಟೈಬ್ರೇಕರಿನಲ್ಲಿ 39 ವರ್ಷ ವಯಸ್ಸಿನ ಹರಿಕೃಷ್ಣ ಅವರನ್ನು 3.5– 2.5 ರಿಂದ ಸೋಲಿಸಿ ಎಂಟರ ಘಟ್ಟ ತಲುಪಿದರು.

ಇವರಿಬ್ಬರ ನಡುವಣ ಕ್ಲಾಸಿಕಲ್ ಸುತ್ತು 1-1 ಸಮಬಲ ಆಗಿತ್ತು. ಮೊದಲ ಸೆಟ್ ಟೈಬ್ರೇಕರ್‌ನ ಎರಡೂ ಆಟಗಳು ಡ್ರಾ ಆದವು. ಎರಡನೇ ಸೆಟ್‌ನ ಮೊದಲ ಆಟದಲ್ಲಿ ಅಲ್ಕಂತಾರ ಜಯ ಗಳಿಸಿದರಲ್ಲದೇ, ಮರು ಆಟ ಡ್ರಾ ಮಾಡಿಕೊಂಡು ಆತಿಥೇಯ ಆಟಗಾರನ ಸವಾಲು ಕೊನೆಗೊಳಿಸಿದರು.

ಇರಿಗೇಶಿ ಶನಿವಾರ ಮುಗಿದ ಕ್ಲಾಸಿಕಲ್ ಸುತ್ತಿನಲ್ಲೇ ಅಮೆರಿಕದ ಲೆವೋನ್ ಅರೋನಿಯನ್ ಅವರನ್ನು 1.5–0.5 ರಿಂದ ಸೋಲಿಸಿದ್ದರು.

ಇನ್ನೊಂದು ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಅಮೆರಿಕದ ಸ್ಯಾಮ್ ಶಂಕ್ಲಾಂಡ್ 3–1 ರಿಂದ ರಷ್ಯಾದ ಡೇನಿಯಲ್ ದುಬೋವ್ ಅವರನ್ನು ಸೋಲಿಸಿದರು. ಶಂಕ್ಲಾಂಡ್ ಟೈಬ್ರೇಕರಿನ ಎರಡೂ ಆಟಗಳನ್ನು ಗೆದ್ದರು.

ಇನ್ನೊಂದು ಮುಖಾಮುಖಿಯಲ್ಲಿ ಜರ್ಮನಿಯ ಅಲೆಕ್ಸಾಂಡರ್ ಡೊನ್ಚೆಂಕೊ ಅವರು 4.5–3.5 ರಿಂದ ವಿಯೆಟ್ನಾಮಿನ ಲೆ ಕ್ವಾಂಗ್ ಲೀಮ್ ಅವರನ್ನು ಸೋಲಿಸಿದರು. ಮೊದಲೆರಡು ಸೆಟ್‌ನ ಟೈಬ್ರೇಕರ್‌ಗಳಲ್ಲಿ ಉಭಯ ಆಟಗಾರರು ತಲಾ ಒಂದೊಂದು ಪಂದ್ಯ ಜಯಿಸಿದ್ದರು. ಮೂರನೇ ಸೆಟ್‌ನ ಮೊದಲ ಆಟ ಡ್ರಾ ಆಗಿ, ಎರಡನೆಯದರಲ್ಲಿ ಡೊನ್ಚೆಂಕೊ ಗೆದ್ದು ನಿಟ್ಟುಸಿರುಬಿಟ್ಟರು.

ರಷ್ಯಾ ಆಟಗಾರರ ವ್ಯವಹಾರವಾಗಿದ್ದ, 16ರ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಆಂಡ್ರಿ ಇಸಿಪೆಂಕೊ, ಅಲೆಕ್ಸಿ ಗ್ರೆಬ್ನೆವ್ ಅವರನ್ನು ಸೋಲಿಸಿದರು.

ಕ್ವಾರ್ಟರ್‌ಫೈನಲ್ ಮುಖಾಮುಖಿ

ಜಾವೊಖಿರ್ ಸಿಂಧರೋವ್ (ಉಜ್ಬೇಕಿಸ್ತಾನ)–ಹೊಸೆ ಎಡ್ವರ್ಡೊ ಅಲ್ಕಂತಾರ (ಮೆಕ್ಸಿಕೊ); ವೀ ಯಿ (ಚೀನಾ)–ಅರ್ಜುನ್ ಇರಿಗೇಶಿ (ಭಾರತ); ಸ್ಯಾಮ್ ಶಂಕ್ಲ್ಯಾಂಡ್ (ಅಮೆರಿಕ)–ಆ್ಯಂಡ್ರಿ ಇಸಿಪೆಂಕೊ (ಫಿಡೆ); ನದಿರ್ಬೆಕ್ ಯಾಕುಬುಯೆವ್ (ಉಜ್ಬೇಕಿಸ್ತಾನ)–ಅಲೆಕ್ಸಾಂಡರ್ ಡೊನ್ಚೆಂಕೊ (ಜರ್ಮನಿ)



ಮೆಕ್ಸಿಕೊದ ಹೊಸೆ ಎಡ್ವರ್ಡೊ ಮಾರ್ಟಿನೆಝ್ ಅಲ್ಕಂತಾರ

ರೇಸ್: ಧ್ರುವ್ ಗೋಸ್ವಾಮಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಧ್ರುವ್ ಗೋಸ್ವಾಮಿ, ಕೊಯಮತ್ತೂರಿನಲ್ಲಿ ನಡೆದ 28ನೇ ಜೆಕೆ ಟೈರ್ ಎಫ್‌ಎಂಎಸ್‌ಸಿಐ ರಾಷ್ಟ್ರೀಯ ರೇಸಿಂಗ್ ಚಾಂಪಿಯನ್‌ಷಿಪ್‌ನ ಮೂರು ರೇಸ್‌ಗಳನ್ನು ಗೆದ್ದು ಎಲ್‌ಜಿಬಿ ಫಾರ್ಮುಲಾ 4 ವರ್ಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಬೆಂಗಳೂರು ಧ್ರುವ್ ಅವರು ಭಾರತದ ಅತಿ ದೀರ್ಘಕಾಲದ ಸಿಂಗಲ್ ಸೀಟರ್ ಚಾಂಪಿಯನ್‌ಷಿಪ್‌ನಲ್ಲಿ ವಾರಾಂತ್ಯದ ನಾಲ್ಕು ರೇಸ್‌ಗಳಲ್ಲಿ ಮೂರನ್ನು ಗೆದ್ದು ಅಮೋಘ ಸಾಧನೆ ಮೆರೆದರು.

ಅನೀಶ್‌ಗೆ ಕಿರೀಟ: ವೃತ್ತಿಪರ ವಿಭಾಗದಲ್ಲಿ ಶನಿವಾರವೇ ಪ್ರಶಸ್ತಿ ಖಚಿತಪಡಿಸಿಕೊಂಡಿದ್ದ ಬೆಂಗಳೂರಿನ ಅನೀಶ್ ಶೆಟ್ಟಿ, ಭಾನುವಾರದ ಅಂತಿಮ ರೇಸ್‌ನಲ್ಲೂ ಪಾರಮ್ಯ ಸಾಧಿಸಿ ಕಿರೀಟ ಗೆದ್ದರು.

ರಣಜಿ: ಮೊದಲ ದಿನ ಕರ್ನಾಟಕದ ಉತ್ತಮ ಮೊತ್ತ

ಸ್ಮರಣ್–ಕರುಣ್ ಶತಕದ ಜೊತೆಯಾಟ

• ಸತೀಶ ಬಿ.

ಹುಬ್ಬಳ್ಳಿ: ಸ್ಮರಣ್ ರವಿಚಂದ್ರನ್ ಮತ್ತು ಕರುಣ್ ನಾಯರ್ ಶತಕದ ಜೊತೆಯಾಟದಿಂದ ಕರ್ನಾಟಕ ತಂಡ ಭಾನುವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಪಂದ್ಯದಲ್ಲಿ ಚಂಡೀಗಢ ಎದುರು ಉತ್ತಮ ಮೊತ್ತ ಕಲೆಹಾಕಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಕರ್ನಾಟಕ ತಂಡ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿತು. 8 ಓವರ್‌ಗಳಲ್ಲಿ 13 ರನ್ ಆಗುವಷ್ಟರಲ್ಲಿ 2 ವಿಕೆಟ್ ಉರುಳಿದವು. ಈ ಹಂತದಲ್ಲಿ ನೆರವಿಗೆ ಬಂದ ಸ್ಮರಣ್ ಅಜೇಯ 110 ರನ್ ಗಳಿಸಿದರು. ಆದರೆ ಕರುಣ್ ಕೇವಲ ಐದು ರನ್‌ಗಳ ಅಂತರದಲ್ಲಿ ಶತಕದ ಗಡಿ ದಾಟುವುದನ್ನು ತಪ್ಪಿಸಿಕೊಂಡರು. ಇವರಿಬ್ಬರೂ ನಾಲ್ಕನೇ ವಿಕೆಟ್‌ಗೆ ಶತಕದ (119, 202 ಎ) ಜತೆಯಾಟವಾಡಿ ಕುಸಿತ ತಡೆದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ಕರ್ನಾಟಕ ತಂಡ 5 ವಿಕೆಟ್ ನಷ್ಟಕ್ಕೆ 298 ರನ್ ಗಳಿಸಿತು.

ಅಮೋಘ ಲಯದಲ್ಲಿರುವ ಕರುಣ್ ತಾವೆದುರಿಸಿದ ಮೊದಲ ಎರಡು ಎಸೆತಗಳನ್ನು ಬೌಂಡರಿ ಗೆರೆ ದಾಟಿಸಿ, ಅಬ್ಬರಿಸುವ ಸೂಚನೆ ನೀಡಿದರು. 12 ರನ್ ಗಳಿಸಿದ್ದ ವೇಳೆ ರಾಜನಗಡ ಬಾವ ಕ್ಯಾಚ್ ಕೈಚೆಲ್ಲಿದ್ದರಿಂದ ಜೀವದಾನ ಪಡೆದರು. ಅವರು ಕವರ್ ಡ್ರೈವ್, ಕಟ್ ಮೂಲಕ ಬೌಂಡರಿ ಗಳಿಸಿದರು. ಲಾಂಗ್ ಆಫ್‌ಗೆ ಸಿಕ್ಸರ್ ಎತ್ತಿದರು.

ಕೇರಳ ಎದುರು ಅಜೇಯ ದ್ವಿಶತಕ (220) ಸಿಡಿಸಿದ್ದ ಸ್ಮರಣ್, ಇಲ್ಲಿ ಮತ್ತೆ ಮಿಂಚಿದರು. ಮೂರು ತಾಸು ಕ್ರೀಸ್‌ನಲ್ಲಿ ಬೇರೂರಿದ ಅವರು 184 ಎಸೆತಗಳನ್ನು ಎದುರಿಸಿ, 11 ಬೌಂಡರಿ, 1 ಸಿಕ್ಸರ್ ಬಾರಿಸಿದ್ದಾರೆ.

ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ನಾಯಕ ಮಯಂಕ್ (9) ನಿರಾಶೆ ಮೂಡಿಸಿದರು. ಅವರನ್ನು ವೇಗಿ ಜಗಜೀತ್ ಸಿಂಗ್ ಸಂಧು ಏಳನೇ ಓವರ್‌ನಲ್ಲಿ ಬೌಲ್ಡ್ ಮಾಡಿದರು. ಮರು ಓವರ್‌ನಲ್ಲಿ ಆರಂಭಿಕ ಬ್ಯಾಟರ್ ಅನೀಶ್ ಕೆ.ವಿ (2) ಅವರು ಕೀಪರ್ ನಿಖಿಲ್ ಠಾಕೂರ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ತಾಳ್ಮೆಯಿಂದ ಆಡುತ್ತಿದ್ದ ಕೆ.ಎಲ್.ಶ್ರೀಜಿತ್ (17, 53 ಎ) ಅವರನ್ನು ಎಡಗೈ ಸ್ಪಿನ್ನರ್ ನಿಶುಂಕ್ ಬಿರ್ಲಾ ಎಲ್‌ಬಿ ಬಲೆಗೆ ಕೆಡವಿದರು. ಅವರು ಕರುಣ್ ಜತೆ ಮೂರನೇ ವಿಕೆಟ್ ಜತೆಯಾಟದಲ್ಲಿ 51 ರನ್ (116 ಎಸೆತ) ಸೇರಿಸಿದರು.

ಚಹಾ ವಿರಾಮಕ್ಕೂ ಮುನ್ನ ಅಭಿನವ್ ಮನೋಹರ್ (11) ಅವರನ್ನು ನಿಶುಂಕ್ ಬೌಲ್ಡ್ ಮಾಡಿ ಸಂಭ್ರಮಿಸಿದರು. ದಿನದ ಕೊನೆಯ ಅವಧಿಯಲ್ಲಿ ಬೌಲರ್‌ಗಳಿಗೆ ವಿಕೆಟ್ ಪಡೆಯಲು ಸಾಧ್ಯವಾಗಲಿಲ್ಲ. ಸ್ಮರಣ್ ಮತ್ತು ಆಲ್‌ರೌಂಡರ್ ಶ್ರೇಯಸ್ (ಅಜೇಯ 38, 80 ಎ, 4X4) ಆರನೇ ವಿಕೆಟ್ ಜತೆಯಾಟದಲ್ಲಿ 88 ರನ್ ಸೇರಿಸಿದ್ದು, ಸೋಮವಾರಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 90 ಓವರ್‌ಗಳಲ್ಲಿ 5ಕ್ಕೆ 298 (ಕರುಣ್ ನಾಯರ್ 95, ಸ್ಮರಣ್ ರವಿಚಂದ್ರನ್ ಔಟಾಗದೇ 110, ಶ್ರೇಯಸ್ ಗೋಪಾಲ್ ಔಟಾಗದೇ 38; ನಿಶುಂಕ್ ಬಿರ್ಲಾ 85ಕ್ಕೆ 2, ರಾಜನಗಡ ಬಾವಾ 41ಕ್ಕೆ 1) ವಿರುದ್ಧ ಚಂಡೀಗಢ.



ಶತಕ ದಾಖಲಿಸಿದ ಕರ್ನಾಟಕ ತಂಡದ ಸ್ಮರಣ್ ರವಿಚಂದ್ರನ್ ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಶಿವಮೊಗ್ಗ ಕ್ವೀನ್ಸ್‌ಗೆ ಕ್ಯೂಪಿಎಲ್ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ಭಾವನಾ ರಾವ್ ನಾಯಕತ್ವದ ಶಿವಮೊಗ್ಗ ಕ್ವೀನ್ಸ್ ತಂಡವು ಕ್ವೀನ್ಸ್ ಪ್ರೀಮಿಯರ್ ಲೀಗ್‌ನ ಎರಡನೇ ಆವೃತ್ತಿಯ ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

12 ಕ್ರೀಡೆಗಳನ್ನು ಒಳಗೊಂಡ ಕ್ರೀಡೋತ್ಸವದಲ್ಲಿ ಅಮೋಘ ಪ್ರದರ್ಶನ ನೀಡಿದ ಶಿವಮೊಗ್ಗ ತಂಡ 20 ಅಂಕಗಳೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತು. ಶಾನ್ವಿ ಶ್ರೀವಾಸ್ತವ ನಾಯಕತ್ವದ ಹಾಸನ ಕ್ವೀನ್ಸ್ 17 ಅಂಕಗಳೊಂದಿಗೆ ರನ್ನರ್ಸ್ ಅಪ್ ಆಯಿತು. ಧನ್ಯಾ ರಾಮ್‌ಕುಮಾರ್ ಸಾರಥ್ಯದ ಬಳ್ಳಾರಿ ಕ್ವೀನ್ಸ್ (14 ಅಂಕ) ತಂಡವು ಮೂರನೇ ಸ್ಥಾನ ಗಳಿಸಿತು.

ನ.10ರಂದು ಆರಂಭಗೊಂಡು ಭಾನುವಾರ ಮುಕ್ತಾಯಗೊಂಡ ಈ ಕ್ರೀಡೋತ್ಸವದಲ್ಲಿ ಖ್ಯಾತ ನಟಿಯರ ನಾಯಕತ್ವದ ಹತ್ತು ತಂಡಗಳು ಉತ್ಸಾಹದಿಂದ ಪಾಲ್ಗೊಂಡವು. ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಕ್ಯೂಪಿಎಲ್‌ನ ಪ್ರಚಾರ ರಾಯಭಾರಿ ನಟಿ ರಮ್ಯಾ ಭಾಗವಹಿಸಿ, ಕೂಟಕ್ಕೆ ಮತ್ತಷ್ಟು ರಂಗು ತುಂಬಿದರು.

ರಮ್ಯಾ ಅವರೊಂದಿಗೆ ಮಾಜಿ ಶಾಸಕಿ ಸೌಮ್ಯಾ ರೆಡ್ಡಿ, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ಕ್ಯೂಪಿಎಲ್ ಸಂಸ್ಥಾಪಕರಾದ ಮಹೇಶ್ ಕುಮಾರ್ ಮತ್ತು ಪ್ರಮೋದ್ ಶೆಟ್ಟಿ ವಿಜೇತ ತಂಡಕ್ಕೆ ಟ್ರೋಫಿ ಪ್ರದಾನ ಮಾಡಿದರು.

ಕೊನೆಯ ದಿನ ನಡೆದ ಮಹಿಳಾ ಕ್ರಿಕೆಟ್‌ನ ಫೈನಲ್‌ನಲ್ಲಿ ಮಂಗಳೂರು ಕ್ವೀನ್ಸ್ ತಂಡವು 4 ರನ್‌ಗಳಿಂದ ಬೆಳಗಾವಿ ಕ್ವೀನ್ಸ್ ತಂಡವನ್ನು ಮಣಿಸಿತು. ಕುತೂಹಲ ಕೆರಳಿಸಿದ್ದ ಹಗ್ಗಜಗ್ಗಾಟ ಸ್ಪರ್ಧೆಯಲ್ಲಿ ಶಿವಮೊಗ್ಗ ತಂಡವು ಬಳ್ಳಾರಿ ತಂಡವನ್ನು ಸೋಲಿಸಿತು.

ಶಿವಮೊಗ್ಗ ತಂಡವು ಹಗ್ಗಜಗ್ಗಾಟ, ಬ್ಯಾಡ್ಮಿಂಟನ್, ಪಿಕಲ್‌ಬಾಲ್ ಮತ್ತು ಲಗೋರಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಅಗ್ರಸ್ಥಾನ ಪಡೆಯಿತು.



ಕ್ವೀನ್ಸ್ ಪ್ರೀಮಿಯರ್ ಲೀಗ್‌ನ ಎರಡನೇ ಆವೃತ್ತಿಯ ಸಮಗ್ರ ಪ್ರಶಸ್ತಿಯ ಗೆದ್ದ ಶಿವಮೊಗ್ಗ ಕ್ವೀನ್ಸ್ ತಂಡ ಟ್ರೋಫಿಯೊಂದಿಗೆ ಸಂಭ್ರಮಿಸಿತು